ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಆರ್. ನಾಗನಗೌಡ

ಡಾ. ಎಫ್. ಟಿ. ಹಳ್ಳಿಕೇರಿ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಕಟ್ಟಿದವರು ಮಾಲೆ

# ಆರ್. ನಾಗನಗೌಡ

ಎಫ್. ಟಿ. ಹಳ್ಳಿಕೇರಿ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**R. NAGANAGOUD** Written by F.T. Hallikeri **(KANNADA KATTIDAVARU MAALE)** Published By ***B.H Mallikarjun***, Administrative Officer, Kannada Pustaka Pradhikara, Kannada Bhavana, J.C.Road, Bengaluru - 560002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2011
Pages : xiv + 91
Copies : 1000
Price : ₹ 60

ಮೊದಲ ಮುದ್ರಣ : ೨೦೧೧
ಪುಟಗಳು : ೧೪ + ೯೧
ಪ್ರತಿಗಳು : ೧೦೦೦
ಬೆಲೆ : ₹ ೬೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ|| ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಸಂಪಾದಕರು
ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಶ್ರೀ ಹೊರೆಯಾಲ ದೊರೆಸ್ವಾಮಿ
ಪ್ರೊ. ಸುಕನ್ಯಾ ಮಾರುತಿ
ಡಾ. ಎಚ್. ಟಿ. ಪೋತೆ
ಶ್ರೀ ಪ್ರಕಾಶ್ ಕಂಬತ್ತಳ್ಳಿ

ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶ್ಯಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರು ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ, ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ, ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು

**ಡಾ. ಕರೀಗೌಡ ಬೀಚನಹಳ್ಳಿ**
ಸಂಪಾದಕ

*

# ಅರಿಕೆ

## ಎಫ್.ಟಿ.ಹಳ್ಳಿಕೇರಿ

ಆಧುನಿಕ ಕರ್ನಾಟಕವನ್ನು ಕಟ್ಟಿದ ಮಹನೀಯರಲ್ಲಿ ಹೊಸಪೇಟೆಯ ಆರ್. ನಾಗನಗೌಡ ಪ್ರಮುಖರು. ಬಳ್ಳಾರಿ ಜಿಲ್ಲೆಯ ಸರ್ವಾಂಗೀಣ ಪ್ರಗತಿಗೆ ಶ್ರಮಿಸಿದ ಗೌಡರು ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಾಗಿ ಹಂತಹಂತವಾಗಿ ಬೆಳೆದವರು. ಒಬ್ಬ ಸಾಮಾನ್ಯ ರೈತನ ಮಗನಾಗಿ ಹುಟ್ಟಿದ ಗೌಡರು ಮದ್ರಾಸ್, ಅಮೇರಿಕಗಳಲ್ಲಿ ಕೃಷಿಶಾಸ್ತ್ರದಲ್ಲಿ ಎಂ.ಎಸ್.ಸಿ., ಪಿಎಚ್.ಡಿ. ಗಳಂಥ ಉನ್ನತ ವ್ಯಾಸಂಗವನ್ನು ಮುಗಿಸಿಕೊಂಡು ಸಾರ್ವಜನಿಕ ರಂಗಗಳಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು. ಇಂಥ ಅಸಾಧಾರಣ ವ್ಯಕ್ತಿಯನ್ನು ನಾನು ನೋಡಿದವನಲ್ಲ. ಆದರೂ ಅವರು ಮಾಡಿದ ಸಾಧನೆಗಳು ಇಂದಿಗೂ ನಮ್ಮ ಕಣ್ಣ ಮುಂದಿವೆ.

೧೯೯೨ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನೌಕರಿಗೆ ಸೇರಿದ ಸಂದರ್ಭ. ಆಗ ಹೊಸಪೇಟೆಯ ಜನ ನಾಗನಗೌಡರ ವ್ಯಕ್ತಿತ್ವ ಮತ್ತು ಸಾಧನೆ ಬಗೆಗೆ ಮಾತನಾಡುತ್ತಿದ್ದುದನ್ನು ಕೇಳಿ ನನಗೆ ಕುತೂಹಲವುಂಟಾಯಿತು. ನಾಗನಗೌಡರನ್ನು ತುಂಬ ಹತ್ತಿರದಿಂದ ನೋಡಿದ ಶ್ರೀ ಸರ್ವೇಶ್ವರ ಅವರನ್ನು ಒಂದು ದಿನ ಭೇಟಿಯಾದಾಗ "ನೀನು ನಾಗನಗೌಡರ ಬಗ್ಗೆ ಒಂದು ಪುಸ್ತಕವನ್ನು ರಚಿಸು. ಅದನ್ನು ಹೇಗಾದರೂ ಮಾಡಿ ಪ್ರಕಟಿಸೋಣ" ಎಂದು ಹೇಳಿ ನನ್ನಲ್ಲಿ ಉತ್ಸಾಹವನ್ನು ತುಂಬಿದರು. ಗೌಡರ ಬಗೆಗೆ ಎಲ್ಲೆಲ್ಲಿಂದ ಮಾಹಿತಿ ಪಡೆಯಬಹುದು ಎಂಬುದನ್ನೂ ತಿಳಿಸಿದರು. ನಾನು ಅವರ ಸೂಚನೆಯ ಮೇರೆಗೆ ಗೌಡರ ಮಕ್ಕಳಾದ ಶ್ರೀ ಚಾರುಚಂದ್ರ, ಶ್ರೀಮತಿ ಮೀನಾಕ್ಷಮ್ಮ, ಅಳಿಯ ಶ್ರೀ ವಸಂತ ಅವರನ್ನು ಭೇಟಿ ಮಾಡಿ ಅನೇಕ ವಿವರಗಳನ್ನು ಸಂಗ್ರಹಿಸತೊಡಗಿದೆನು. ಜೊತೆಗೆ ಸಚಿವರಾಗಿದ್ದಾಗ ಗೌಡರು ಭಾಗವಹಿಸಿದ ಸಭೆಸಮಾರಂಭಗಳ ವರದಿಗಳನ್ನು, ಅವರು ಮಾಡಿದ ಭಾಷಣದ ಪ್ರತಿಗಳನ್ನು ಸಂಗ್ರಹಿಸತೊಡಗಿದೆ. ಇದೇ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಕರೀಗೌಡ ಬೀಚನಹಳ್ಳಿಯವರು ನಾಗನಗೌಡರ ಕುರಿತು ಒಂದು ಪುಸ್ತಕವನ್ನು ಸಿದ್ಧಪಡಿಸಿರಿ ಎಂದು ಸಲಹೆ ನೀಡಿ, ನಾಗನಗೌಡರು ಸಚಿವರಾಗಿದ್ದಾಗ ಶಾಸನಸಭೆಯಲ್ಲಿ ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಂಡ ಭಾಷಣಗಳನ್ನು ಕರ್ನಾಟಕ ಸರಕಾರದ ವಿಧಾನಸಭೆಯ ಸಚಿವಾಲಯದಿಂದ ಸಂಗ್ರಹಿಸಲು ಸಹಕರಿಸಿದರು.

ಈ ಮಧ್ಯೆ ವಿಶ್ವವಿದ್ಯಾಲಯಗಳ ಯೋಜನೆಗಳಿಂದಾಗಿ ಈ ಕಾರ್ಯ ವಿಳಂಬವಾಯಿತು. ಆಗಾಗ ಸರ್ವೇಶ್ವರ ಅವರು ನನ್ನನ್ನು ಈ ಬಗ್ಗೆ ನೆನಪಿಸುತ್ತಲೇ ಇದ್ದರು. ಒಂದು ವರ್ಷದ ಹಿಂದೆ ಸರ್ವೇಶ್ವರ ಅವರು ನಿಧನರಾದಾಗ ತುಂಬ ವ್ಯಥೆಪಟ್ಟೆ. ಜೀವಂತವಿದ್ದಾಗ ಈ ಪುಸ್ತಕ ಪ್ರಕಟವಾಗಿದ್ದರೆ ಅವರು ತುಂಬ ಸಂತೋಷಪಡುತ್ತಿದ್ದರು. ಏಕೆಂದರೆ ಅವರಿಗೆ ಗೌಡರೆಂದರೆ

ತುಂಬ ಆದರ, ಅಭಿಮಾನ. ಅಂಥ ಒಬ್ಬ ವ್ಯಕ್ತಿಯನ್ನು ಮತ್ತು ವ್ಯಕ್ತಿತ್ವವನ್ನು ನನ್ನ ಜೀವಮಾನದುದ್ದಕ್ಕೂ ಕಂಡಿಲ್ಲ ಕೇಳಿಲ್ಲ ಎಂದು ಹೇಳುತ್ತಿದ್ದರು. ಭೇಟಿಯಾದಾಗಲೆಲ್ಲ ಪುಸ್ತಕ ರಚನೆಯ ಬಗ್ಗೆ ವಿಚಾರಿಸುತ್ತಿದ್ದರು. ಈಗಲಾದರೂ ಈ ಪುಸ್ತಕವನ್ನು ಪ್ರಕಟಿಸಿದ ಸಮಾಧಾನ ನನ್ನದಾಗಿದೆ. ಗೌಡರ ಒಡನಾಡಿಯಾಗಿದ್ದ ಸರ್ವೇಶ್ವರ ಅವರಿಗೆ ಈ ಕೃತಿಯನ್ನು ಗೌರವದಿಂದ ಅರ್ಪಿಸುತ್ತಿದ್ದೇನೆ.

ಕೆಲ ದಿನಗಳ ಹಿಂದೆ ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿದ್ಧಲಿಂಗಯ್ಯ ಅವರಿಂದ "ಕನ್ನಡ ಕಟ್ಟಿದವರು ಮಾಲೆ" ಯೋಜನೆಯಡಿ ನಾಗನಗೌಡರ ಜೀವನ ಸಾಧನೆ ಕುರಿತು ಎಂಬತ್ತು ಪುಟಗಳ ವ್ಯಾಪ್ತಿಯಲ್ಲಿ ಒಂದು ಪುಸ್ತಕವನ್ನು ಸಿದ್ಧಪಡಿಸಿಕೊಡಿ ಎಂಬ ಪತ್ರ ಬಂತು. ಅದರಂತೆ ನಾಗನಗೌಡರ ಜೀವನ ಸಾಧನೆ ಕುರಿತು ಸಂಕ್ಷಿಪ್ತ ಮಾಹಿತಿ ಯನ್ನೊಳಗೊಂಡಂತೆ ಈ ಪುಸ್ತಕ ರಚಿಸಿದ್ದೇನೆ. ನಾಗನಗೌಡರ ಜೀವನ ಸಾಧನೆ ಹಾಗೂ ಭಾಷಣಗಳು ಲೇಖನಗಳು ಛಾಯಾಚಿತ್ರಗಳು ಎಂಬ ಎರಡು ಭಾಗಗಳಲ್ಲಿ ಈ ಕೃತಿ ವಿಸ್ತೃತಗೊಂಡಿದೆ.

ನಾಗನಗೌಡರ ಜೀವನ ಚಿತ್ರವನ್ನು ರಚಿಸಲು ನನಗೆ ಪ್ರೇರಣೆ ಪ್ರೋತ್ಸಾಹ ನೀಡಿದವರು ಅನೇಕರು. ಅಂಥವರಲ್ಲಿ ಹೊಸಪೇಟೆಯ ಶ್ರೀ ಎಚ್.ಸರ್ವೇಶ್ವರ, ಜಿ. ನಾಗಲಿಂಗಪ್ಪ, ಜಂಬುನಾಥ, ವೈ.ಎಚ್.ಹಳ್ಳಿಕೇರಿ ಪ್ರಮುಖರು. ಗೌಡರ ಹಿರಿಯ ಮಗ ಶ್ರೀ ಚಾರುಚಂದ್ರ, ಮಗಳು ಶ್ರೀಮತಿ ಮೀನಾಕ್ಷಮ್ಮ, ಅಳಿಯ ಶ್ರೀ ವಸಂತ ಅವರು ನಾನು ಭೇಟಿಯಾದಾಗಲೆಲ್ಲ ಬೇಸರಪಟ್ಟುಕೊಳ್ಳದೇ ವಿವರವಾಗಿ ಮಾಹಿತಿಗಳನ್ನು ನೀಡಿ ಅಪೂರ್ವವಾದ ಛಾಯಾಚಿತ್ರ ಗಳನ್ನು ಒದಗಿಸಿದ್ದಾರೆ. ಹಾಗೆಯೇ ನಿವೃತ್ತ ನ್ಯಾಯಾಧೀಶರಾದ ಸವಣೂರು ತಾಲೂಕಿನ ಹುರುಳಿಕುಪ್ಪೆಯ ಶ್ರೀ ಎನ್.ಬಿ.ಬಿಜ್ಜೂರ, ಹಿರಿಯ ಪತ್ರಕರ್ತರಾದ ಶ್ರೀ ಕಲ್ಲೇ ಶಿವೋತ್ತಮರಾವ್, ಕೊಪ್ಪಳದ ನಿವೃತ್ತ ಮುಖ್ಯಶಿಕ್ಷಕರಾದ ಎಚ್.ಎಸ್.ಪಾಟೀಲ, ನಿವೃತ್ತ ಶಿಕ್ಷಕರಾದ ಶ್ರೀ ಸಿದ್ಧರಾಮಯ್ಯ, ಶ್ರೀ ಪೊರಪ್ಪ ಮೊದಲಾದವರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ತಮ್ಮಲ್ಲಿದ್ದ ಪುಸ್ತಕಗಳನ್ನು ಲೇಖನಗಳನ್ನು ಒದಗಿಸಿಕೊಟ್ಟ ವಿಜಯನಗರ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಮೃತ್ಯುಂಜಯ ರುಮಾಲೆ, ನಾಗನಗೌಡರ ಶಾಸನಸಭೆಯ ಭಾಷಣಗಳನ್ನು ಒದಗಿಸಿಕೊಟ್ಟವರು ವಿಧಾನಸಭೆಯ ಸಚಿವಾಲಯದ ಗ್ರಂಥಾಲಯ ಅಧಿಕಾರಿಗಳು, ಈ ಪುಸ್ತಕವನ್ನು ನನ್ನಿಂದ ಬರೆಯಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿದ್ಧಲಿಂಗಯ್ಯ ಮತ್ತು ಅವರ ಎಲ್ಲ ಸದಸ್ಯರಿಗೆ, ಈ ಪುಸ್ತಕ ಪ್ರಕಟಣೆಯಲ್ಲಿ ವಿಶೇಷ ಸಲಹೆ ಪ್ರೋತ್ಸಾಹ ನೀಡಿದ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದ ಪ್ರಾಧ್ಯಾಪಕರಾದ ಡಾ.ಕರೀಗೌಡ ಬೀಚನಹಳ್ಳಿ ಅವರಿಗೆ, ನಾಗನಗೌಡರ ಇಂಗ್ಲಿಷ್ ಭಾಷೆಯಲ್ಲಿದ್ದ ಭಾಷಣವನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟ ಸ್ನೇಹಿತರಾದ ಡಾ. ಸಿ.ಎಸ್.ವಾಸುದೇವನ್ - ಈ ಎಲ್ಲ ಮಹನೀಯರಿಗೆ ನಾನು ಕೃತಜ್ಞನಾಗಿದ್ದೇನೆ.

◆◆

## ಪರಿವಿಡಿ

### ಭಾಗ ೧ ಆರ್ ನಾಗನಗೌಡ : ಜೀವನ ಸಾಧನೆ


೧. ಮನೆತನದ ಹಿನ್ನೆಲೆ - ಶಿಕ್ಷಣ - ಮದುವೆ \ ೨

೨. ಭಾರತ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದು \ ೫

೩. ಬಳ್ಳಾರಿ ಜಿಲ್ಲೆಯ ವಿಲೀನಕ್ಕೆ ಹೋರಾಟ \ ೬

೪. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪಾಲ್ಗೊಂಡಿದ್ದು \ ೭

೫. ಕೃಷಿಯಲ್ಲಿ ಸತತ ಪ್ರಯೋಗಶೀಲತೆ \ ೮

೬. ಸಹಕಾರ ಸಂಘಟನೆಯ ಹರಿಕಾರ \ ೧೦

೭. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಘಟನೆಯ ನಿಷ್ಠಾವಂತ ಕಾರ್ಯಕರ್ತ \ ೧೬

೮. ಮದ್ರಾಸ್ ಸರಕಾರದ ಸಚಿವರಾಗಿ \ ೧೭

೯. ಮೈಸೂರು ಸರಕಾರದ ಸಚಿವರಾಗಿ \ ೧೮

೧೦. ಸದನದಲ್ಲಿ ನಾಗನಗೌಡರು \ ೧೯

೧೧. ಮೈಸೂರು ಹಿಂದುಳಿದ ವರ್ಗಗಳ ಆಯೋಗದ ಮೊದಲ ಅಧ್ಯಕ್ಷರಾಗಿ \ ೨೮

೧೨. ಸಮಾಜ ಸೇವೆ \ ೩೦

೧೩. ಸಾಹಿತ್ಯ ಸಂಸ್ಕೃತಿ ಪೋಷಕರು \ ೩೧

೧೪. ವ್ಯಕ್ತಿ ವಿಶೇಷತೆ \ ೩೩

೧೫. ಕೊನೆಯ ದಿನಗಳು \ ೩೫

೧೬. ಹಿರಿಯರು ಕಂಡಂತೆ ನಾಗನಗೌಡರು \ ೩೬

೧೭. ನಾಗನಗೌಡರ ಸ್ಮರಣೆ \ ೩೯

೧೮. ನಾಗನಗೌಡ ಅವರ ಜೀವನದ ಪ್ರಮುಖ ಘಟನೆಗಳು \ ೪೦

೧೯. ನಾಗನಗೌಡ ಅವರ ಸ್ವ ಹಸ್ತಾಕ್ಷರದ ಮಾದರಿ \ ೪೨

೨೦ ನಾಗನಗೌಡ ಅವರ ವಂಶಾವಳಿ \ ೪೩


### ಭಾಗ ೨ ಭಾಷಣಗಳು ಲೇಖನಗಳು ಛಾಯಾಚಿತ್ರಗಳು


೧. ಮೂರನೆಯ ಕುರುಬರ ಪರಿಷತ್ತಿನ ಸರ್ವಾಧ್ಯಕ್ಷ ಭಾಷಣ \ ೪೫

೨. ಕನ್ನಡ ಸಾಹಿತ್ಯ ಪರಿಷತ್ತಿನ ವಸಂತೋತ್ಸವ ಮಹೋತ್ಸವ ಭಾಷಣ \ ೬೭

೩. ಸಂಸ್ಕೃತಿ ಪ್ರಸಾರ ದಿನಾಚರಣೆಯ ಅಧ್ಯಕ್ಷ ಭಾಷಣ \ ೭೩

೪. AGRICULTURE IN BELLARY DISTRICT ಲೇಖನ \ ೮೧

೫. ಸಹಾಯಕ ಗ್ರಂಥಗಳು \ ೮೪

೬. ಛಾಯಾಚಿತ್ರಗಳು

# ಆರ್. ನಾಗನಗೌಡ ಜೀವನ ಸಾಧನೆ

ಕರ್ನಾಟಕದ ಗಡಿ ಪ್ರದೇಶವಾದ ಬಳ್ಳಾರಿ ಜಿಲ್ಲೆಗೆ ತನ್ನದೇ ಆದ ವಿಶಿಷ್ಟತೆಯಿದೆ. ಪ್ರಾಕೃತಿಕ ಮತ್ತು ಸಾಂಸ್ಕೃತಿಕವಾಗಿ ತುಂಬ ಶ್ರೀಮಂತವಾಗಿರುವ ಈ ಜಿಲ್ಲೆಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಅನೇಕ ಏಳುಬೀಳುಗಳನ್ನು ಕಂಡ ಜಿಲ್ಲೆ ಎಂಬುದು ಸ್ಪಷ್ಟವಾಗುತ್ತದೆ. ತನ್ನ ಇತಿಹಾಸ ಪುರಾತತ್ವ ವಾಸ್ತು ಶಿಲ್ಪ ಹಾಗೂ ಕಲೆಗಳಿಂದ ಸಾಂಸ್ಕೃತಿಕ ಮಹತ್ವವನ್ನು ಪಡೆದ ವಿಜಯನಗರ ಸಾಮ್ರಾಜ್ಯದ ನೆಲೆ ಹಂಪೆಯು ಬಳ್ಳಾರಿ ಜಿಲ್ಲೆಗೆ ಸೇರಿದುದು ಹೆಮ್ಮೆಯ ವಿಷಯ.  ಹಂಡೆ ಪಾಳೆಯಗಾರರು ಈ ಪ್ರದೇಶವನ್ನು ಆಳಿದವರು. ಕೊನೆಗೆ ನಿಜಾಮನ ಆಡಳಿತದಿಂದ ಮುಕ್ತಿ ಹೊಂದಿದ ಬಳಿಕ ಬ್ರಿಟಿಷರ ಆಡಳಿತಕ್ಕೊಳಪಟ್ಟು ಮದ್ರಾಸ ಪ್ರಾಂತಕ್ಕೆ ಸೇರಿತು. ಮದ್ರಾಸ ಪ್ರಾಂತದಿಂದ ಮೈಸೂರು ರಾಜ್ಯದಲ್ಲಿ ವಿಲೀನವಾಗುವವರೆಗೂ ಅನೇಕ ಆಡಳಿತಾತ್ಮಕ ಸಮಸ್ಯೆಗಳನ್ನು ತನ್ನ ಬೆನ್ನಿಗೆ ಕಟ್ಟಿಕೊಂಡು ಅಭಿವೃದ್ಧಿ ಪಥದಲ್ಲಿ ಹಿನ್ನಡೆ ಸಾಧಿಸುತ್ತಿತ್ತು. ಈ ಹಿನ್ನಡೆಯನ್ನು ತಪ್ಪಿಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಈ ಜಿಲ್ಲೆಗೊಂದು ಉತ್ತಮ ಸ್ಥಾನಮಾನ ಸಿಗುವಂತೆ ಈ ಭಾಗದ ಅನೇಕ ಗಣ್ಯಮಾನ್ಯರು ಹೋರಾಡಿದ್ದಾರೆ. ಅಂಥವರಲ್ಲಿ ಹೊಸಪೇಟೆಯ ಆರ್. ನಾಗನಗೌಡರು ಮುಂಚೂಣಿಯಲ್ಲಿದ್ದವರು. ಬಳ್ಳಾರಿ ಪ್ರದೇಶ ಸಮಗ್ರ ಅಭಿವೃದ್ಧಿ ಹೊಂದಬೇಕೆಂಬ ಕನಸನ್ನು ನನಸನ್ನಾಗಿ ಮಾಡಲು ತಮ್ಮದೇ ಆದ ಪಡೆಯೊಂದನ್ನು ಕಟ್ಟಿಕೊಂಡು ಹೋರಾಟ ಮಾಡಿದ್ದನ್ನು ಬಳ್ಳಾರಿ ಜಿಲ್ಲೆಯ ಇತಿಹಾಸ ಹೇಳುತ್ತದೆ. ನಾಗನಗೌಡರೊಂದಿಗೆ ಬೆಲ್ಲದ ಚನ್ನಪ್ಪ, ಪತ್ತಿಕೊಂಡ ಗುರುನಾಥಪ್ಪಶೆಟ್ಟಿ, ಚನ್ನಬಸವನಗೌಡ, ಸಾವಿತ್ರಿಬಾಯಿ, ಬೂದಿಹಾಳ ಅನಂತರಂಗಾಚಾರ್ ಮ.ಮ.ಪಾಟೀಲ ಮುಂತಾದವರು ಹೆಗಲಿಗೆ ಹೆಗಲು ಕೊಟ್ಟು ನಿಂತವರು. ಅವರೆಲ್ಲರ ಪರಿಶ್ರಮ ಮತ್ತು ಹೋರಾಟದಿಂದ ಬಳ್ಳಾರಿ ಜಿಲ್ಲೆ ಸರ್ವಾಂಗೀಣವಾಗಿ ಅಭಿವೃದ್ಧಿ ಹೊಂದಿದೆ. ಜೊತೆಗೆ ಈ ಎಲ್ಲ ಮಹನೀಯರು ಅಂದಿನ ಸಮಕಾಲೀನ ರಾಜ್ಯ ಮತ್ತು ರಾಷ್ಟ್ರದ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟದ ಮೂಲಕ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ. ವಿಶೇಷವಾಗಿ ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕದ ಏಕೀಕರಣ ಚಳುವಳಿ, ಕಳೆದ ಶತಮಾನದ ಚರಿತ್ರೆಯಲ್ಲಿ ಮಹತ್ವದ ಘಟನೆಗಳಾಗಿವೆ. ಈ ಚಳುವಳಿಗಳಲ್ಲಿ ಭಾಗವಹಿಸಿ ಭಾರತವನ್ನು ಸ್ವತಂತ್ರಗೊಳಿಸಲು, ಕರ್ನಾಟಕವನ್ನು ಏಕೀಕರಣಗೊಳಿಸಲು ಹೋರಾಡಿದ ಆರ್ ನಾಗನಗೌಡ ಅವರ ಜೀವನ ವಿಶಿಷ್ಟ ಮತ್ತು ವೈವಿಧ್ಯಮಯವಾದುದು. ಅಂಥ ಸಾಧಕನ ಜೀವನ ಚರಿತ್ರೆ ಹಾಗೂ ಸಾಧನೆಗಳನ್ನು ಅವಲೋಕಿಸುವ ಪ್ರಯತ್ನವಿದು.

## ೧. ಮನೆತನದ ಹಿನ್ನೆಲೆ-ಶಿಕ್ಷಣ-ಮದುವೆ

೭೫ ವರ್ಷಗಳ (೧೮೯೪- ೧೯೬೯) ತುಂಬು ಜೀವನ ನಡೆಸಿದ್ದ ಇವರು ಮೂಲತಃ ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗದ ಕುರುಬ ಸಮಾಜದ ಬಡ ರೈತ ಕುಟುಂಬವೊಂದರಿಂದ ಬಂದವರು. ತಂದೆ ಗೋವಿಂದಪ್ಪನವರು ಕೃಷಿಕಾಯಕವನ್ನು ಅತ್ಯಂತ ನಿಷ್ಠೆ ಹಾಗೂ ಪರಿಶ್ರಮದಿಂದ ಮಾಡಿಕೊಂಡು ಬಂದಂಥವರು. ತುಂಗಭದ್ರಾ ನದಿ ಪರಿಸರದ ಕೃಷ್ಣದೇವರಾಯ ಕಾಲುವೆಯ ಮೇಲ್ವಿಚಾರಕ (Supervisor)ರಾಗಿ ಗೋವಿಂದಪ್ಪನವರು ನೇಮಕ ಗೊಂಡಿದ್ದರಿಂದ ಅವರು ಸಂಸಾರ ಸಮೇತ ಹೊಸಪೇಟೆಗೆ ಬಂದು ನೆಲೆನಿಂತರು. ಆಗ ಅವರ ಮಾಸಿಕ ವೇತನ ಕೇವಲ ಹತ್ತು ರೂಪಾಯಿ. ಗೋವಿಂದಪ್ಪನವರಿಗೆ ವೆಂಕಟಮ್ಮ, ವೆಂಕಮ್ಮ ಇಬ್ಬರು ಹೆಣ್ಣುಮಕ್ಕಳು ಹಾಗೂ ನಾಗನಗೌಡ, ಅಂಜಿನಪ್ಪ ಎಂಬಿಬ್ಬರು ಗಂಡು ಮಕ್ಕಳು. ಮಕ್ಕಳು ಎರಡಕ್ಷರ ಕಲಿತು ವಿದ್ಯಾವಂತರಾಗಬೇಕೆಂಬುದು ಇವರ ಜೀವನದ ಬಹುಮುಖ್ಯ ಆಶಯವಾಗಿತ್ತು. ಕಾಲುವೆಗಳ ಕೆಲಸಕ್ಕಾಗಿ ಗೋವಿಂದಪ್ಪನವರಿಗೆ ಅಂದಿನ ಸರಕಾರ ಒಂದು ಕುದುರೆಯನ್ನೂ ಕೊಟ್ಟಿದ್ದರು.

ತಂದೆಯ ಈ ಆಶಯಕ್ಕನುಗುಣವಾಗಿ ಗೌಡರು ಹರಪನಹಳ್ಳಿ ಮತ್ತು ಬಳ್ಳಾರಿಯಲ್ಲಿ ಪ್ರೌಢಶಿಕ್ಷಣವನ್ನು, ಇಂಟರ ಮಿಡಿಯೆಟ್ ಶಿಕ್ಷಣಕ್ಕಾಗಿ ಮದ್ರಾಸಗೆ ಹೋದರು. ಅಲ್ಲಿ ಗೋಪಾಲರೆಡ್ಡಿ, ಭಕ್ತವತ್ಸಲಂ ಹಾಗೂ ಮಾಣಿಕ್ಯವೇಲು ಮುಂತಾದ ನಾಲ್ಕಾರು ವಿದ್ಯಾರ್ಥಿಗಳು ಗೌಡರಿಗೆ ಸಹಪಾಠಿಗಳಾಗಿದ್ದರು. ಕೆಲವು ಸಲ ಅಲ್ಲಿಯ ಕನ್ನಡ ಹೋಟೆಲ್ ದಾಸಪ್ರಕಾಶದಲ್ಲಿ ಮೂವರು ಉಳಿದುಕೊಳ್ಳುತ್ತಿದ್ದರು. ಬಿ.ಎಸ್‌ಸಿ. ಡಿಗ್ರಿ ಪೂರೈಸಿದ ತಕ್ಷಣ ಉನ್ನತ ವ್ಯಾಸಂಗಕ್ಕಾಗಿ ಅಮೇರಿಕೆಗೆ ಹೊರಟು ನಿಂತರು. ಅವರೊಂದಿಗೆ ಸ್ನೇಹಿತರಾದ ಹರಪನಹಳ್ಳಿಯವರಾದ ರಾಘವೇಂದ್ರರಾಯರು ಸಹ ತೆರಳಿದರು. ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ ಜಾಗತಿಕ ಯುದ್ಧ ಆರಂಭವಾಯಿತು. ಜರ್ಮನಿಯನ್ನು ಸೇರಿದಾಗ ಅಲ್ಲಿಯ ಸೈನಿಕರು ಇವರಿಬ್ಬರನ್ನು ಹಿಡಿದುಕೊಂಡು ಸೆರೆಮನೆಗೆ ಒಯ್ದರು. ವಿದ್ಯಾಭ್ಯಾಸಕ್ಕಾಗಿ ನಾವು ಅಮೇರಿಕಕ್ಕೆ ಹೊರಟಿದ್ದೇವೆ ಎಂದು ಗೌಡರು ಸಾಬೀತು ಪಡಿಸಿದಾಗ ಅಲ್ಲಿನ ಅಧಿಕಾರಿಗಳು ಅಮೇರಿಕಾಕ್ಕೆ ಹೋಗಲು ಅನುಮತಿ ನೀಡಿದರು. ಹೀಗಾಗಿ ಅಮೇರಿಕಕ್ಕೆ ಹೋಗುವಷ್ಟೊತ್ತಿಗೆ ತಂದ ಹಣವೆಲ್ಲ ಖರ್ಚಾಗಿ ಕಾಲೇಜಿನ ಫೀ ಕಟ್ಟಲು ಬಹಳ ಕಷ್ಟಪಡಬೇಕಾಯಿತು. ಇದಕ್ಕಾಗಿ ಹೊಸಪೇಟೆಯ ತಮ್ಮ ಮನೆಯನ್ನು ಹನ್ನೊಂದು ಸಾವಿರ ರೂಪಾಯಿಗಳಿಗೆ ಪತ್ರಿಕೊಂಡ ಗುರುನಾಥಪ್ಪಶೆಟ್ಟಿ ಅವರಿಗೆ ಅಡವಿಡಬೇಕಾಯಿತು. ಕೊನೆಗೆ ಆ ಹಣವೂ ಸಾಲದಾಯಿತು. ಕಿತ್ತು ತಿನ್ನುವ ಬಡತನ ಒಂದೆಡೆಯಾದರೆ, ತೀವ್ರ ಕಾಯಿಲೆ ಇನ್ನೊಂದೆಡೆ. ಹೀಗಿದ್ದರೂ ಅದ್ಯಾವುದನ್ನು ಲೆಕ್ಕಿಸದೇ ನಾಗನಗೌಡರು ಅಲ್ಲಿನ ಫಾರ್ಮಗಳಲ್ಲಿ ಅರೆಕಾಲಿಕ ಕೆಲಸ ಮಾಡಿ ಹಣವನ್ನು ಜೋಡಿಸಿ ಕೊಳ್ಳುತ್ತಿದ್ದರು. ಮುಂದಿನ ವರ್ಷದ ಫೀಜಿಗಾಗಿ ಬೇಸಿಗೆ ರಜೆಗಳಲ್ಲಿ ಫಾರ್ಮಗಳಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಿದ್ದರು. ಕೆಲವು ದಿನಗಳ ಕಾಲ ಸ್ಟೇಟ್ ಅಮೇರಿಕಾದ ಪ್ಲಾರಿಡಾದ ತಲ್ಲಹಸ್ಸಿ

ಗ್ರಾಮದ ಜಮೀನ್ದಾರರಾದ ಸೇಮಾರ್ಸ್ ಅವರಲ್ಲಿ ನಾಗನಗೌಡರು ಕೆಲಸ ಮಾಡಿದ್ದರು. ನಿಷ್ಠೆ ಹಾಗೂ ಪರಿಶ್ರಮದಿಂದ ಗೌಡರು ಮಾಡುತ್ತಿದ್ದ ಕೆಲಸಗಳು ಸೇಮಾರ್ಸ್ ಅವರಿಗೆ ತುಂಬ ಹಿಡಿಸುತ್ತಿದ್ದವು. ಹೀಗಾಗಿ ಪ್ರೀತಿ ಆದರ ಅಭಿಮಾನಗಳಿಗೆ ಪಾತ್ರರಾದ ಗೌಡರನ್ನು ಜಮೀನ್ದಾರರು ಅವರ ಮನೆಯ ಸದಸ್ಯರಂತೆ ನೋಡಿಕೊಳ್ಳುತ್ತಿದ್ದರು. ಹೀಗೆ ಅನೇಕ ಕಡೆಗಳಲ್ಲಿ ಅರೆಕಾಲಿಕವಾಗಿ ದುಡಿದು ಹಣ ಹೊಂದಾಣಿಕೆ ಮಾಡಿಕೊಂಡು ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಹೀಗೆ ಅನೇಕ ಕಷ್ಟಕಾರ್ಪಣ್ಯಗಳ ಮಧ್ಯೆಯೂ ಎದೆಗುಂದದೆ ಗೌಡರು ಉನ್ನತ ವ್ಯಾಸಂಗವನ್ನು ಪೂರೈಸಿಕೊಂಡು ೧೯೨೭ರಲ್ಲಿ ಮರಳಿ ತಾಯ್ನಾಡಿಗೆ ಬಂದರು. ಹೊಸಪೇಟೆಗೆ ಬಂದ ನಂತರವೂ ತಾವು ಕೆಲಸ ಮಾಡಿದ ಜಮೀನ್ದಾರರೊಂದಿಗೆ ಅತ್ಯಂತ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಅವರೂ ಸಹಿತ ಗೌಡರಿಗೆ ಪ್ರತಿವರ್ಷ ಗ್ರೀಟಿಂಗ್ಸ್ ಕಳಿಸುತ್ತಿದ್ದರು. ಮೇಲಿಂದ ಮೇಲೆ ಅವರಿಗೆ ಪತ್ರವನ್ನೂ ಬರೆಯುತ್ತಿದ್ದರು. ಹಿಂದುಳಿದ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬ ಮದ್ರಾಸ್, ಅಮೇರಿಕಾಕ್ಕೂ ಹೋಗಿ ಉನ್ನತ ವ್ಯಾಸಂಗವನ್ನು ಪೂರೈಸಿಕೊಂಡು ಬಂದದ್ದು ಆ ಕಾಲಕ್ಕೆ ಸಾಹಸವೇ.

ಹೀಗೆ ಅಮೇರಿಕದ ಇಲಿನಾಯಿಸ್ ಮತ್ತು ಡೆಟ್ರಾಯಿಟ್ ವಿಶ್ವವಿದ್ಯಾಲಯದಲ್ಲಿ ಸತತ ೧೧ ವರ್ಷಗಳವರೆಗೆ ವ್ಯವಸಾಯಶಾಸ್ತ್ರ(Agriculture Science)ದಲ್ಲಿ ಬಿ.ಎಸ್‌ಸಿ, ಎಂ.ಎಸ್.ಸಿ ಪದವಿ ಪಡೆದು ಮಣ್ಣು ಅಣುಜೀವಿಶಾಸ್ತ್ರ(Soil Bacteriology) ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ಪಿಎಚ್. ಡಿ. ಪದವಿಯನ್ನೂ ಪಡೆದುಕೊಂಡರು. ಈ ಅವಧಿಯಲ್ಲಿ ರವೀಂದ್ರನಾಥ ಟ್ಯಾಗೋರ ಅವರು ಅಮೇರಿಕಾಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಭಾರತೀಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದರು. ಆ ಸಂವಾದದಲ್ಲಿ ನಾಗನಗೌಡರು ಪಾಲ್ಗೊಂಡ ಬಗೆಗೆ ಗುಂಪು ಛಾಯಾಚಿತ್ರ(Group Photo)ವೊಂದು ಲಭ್ಯವಿದೆ.

ಅಮೇರಿಕದಿಂದ ಗೌಡರು ೧೯೨೭ರಲ್ಲಿ ಮರಳಿ ಹೊಸಪೇಟೆಗೆ ವಾಪಸ್ಸಾದರು. ಆಗ ಅವರಿಗೆ ಇದ್ದದ್ದು ವಾಸಮಾಡಲು ಒಂದು ಮನೆ ಮತ್ತು ಎರಡು ಎಕರೆ ಜಮೀನು ಮಾತ್ರ. ಯಾವ ವರಮಾನವೂ ಇರಲಿಲ್ಲ. ಆಗ ಅವರಿಗೆ ಉನ್ನತ ಮಟ್ಟದ ಸರಕಾರಿ ಹುದ್ದೆಗಳಿಗೆ ಸೇರಲು ಸಾಕಷ್ಟು ಅವಕಾಶಗಳಿದ್ದವು. ಆದರೆ ಯಾವ ಹುದ್ದೆಗಳಿಗೂ ಸೇರದೆ ಇರುವ ಎರಡು ಎಕರೆ ಜಮೀನಿನಲ್ಲಿ ವ್ಯವಸಾಯವನ್ನು ಆರಂಭಿಸಿದರು. ಆ ವ್ಯವಸಾಯದಲ್ಲಿ ನಾಗನಗೌಡರಿಗೆ ತುಂಬ ಆಸಕ್ತಿ. ತುಂಗಭದ್ರಾ ಆಣೆಕಟ್ಟು ಸಮೀಪವಿರುವ ಜಮೀನಿಗೆ ದಿನಾಲು ಸೈಕಲ್ ಮೇಲೆ ಹೋಗಿ ವ್ಯವಸಾಯದ ಕೆಲಸಗಳನ್ನು ಮಾಡಿ ಬರುತ್ತಿದ್ದರು. ಜಮೀನನ್ನು ಬಿತ್ತನೆಗೆ ಹದಗೊಳಿಸುವುದು, ಕಸಕಡ್ಡಿಯನ್ನು ಸ್ವಚ್ಛಗೊಳಿಸುವುದು, ಒಡ್ಡನ್ನು ಹಾಕುವುದು ಇತ್ಯಾದಿ ಕೆಸಲಗಳನ್ನು ಗೌಡರು ಕ್ರಮಾನುಗತವಾಗಿ ಮಾಡಿಸುತ್ತಿದ್ದರು. ಅವರ ವಿದ್ಯಾಭ್ಯಾಸಕ್ಕಾಗಿ ಇಪ್ಪತ್ತು ಎಕರೆ ಜಮೀನನ್ನು ಬಳ್ಳಾರಿ ಜಿಲ್ಲಾ ಸಹಕಾರ ಬ್ಯಾಂಕ್(B.D.C.C.)ನಲ್ಲಿ ಅಡವಿಟ್ಟು

ಸಾಲಪಡೆಯಲಾಗಿತ್ತು. ಜೊತೆಗೆ ತಮ್ಮ ಮನೆಯನ್ನು ಮಾರಲಾಗಿತ್ತು. ಹೀಗಾಗಿ ಹಣಕಾಸಿನ ಮುಗ್ಗಟ್ಟು ಗೌಡರಿಗೆ ತುಂಬ ಸಮಸ್ಯೆಯಾಗಿತ್ತು. ಮೇಲಾಗಿ ಒಬ್ಬ ತಮ್ಮ ಮತ್ತು ಇಬ್ಬರು ವಿಧವೆ ತಂಗಿಯರನ್ನು ಸಾಕುವ ಜವಾಬ್ದಾರಿ ಕೂಡಾ ನಾಗನಗೌಡರ ಹೆಗಲಿಗೆ ಬಿದ್ದಿತ್ತು. ಹೀಗಾಗಿ ಅದರಿಂದ ಮೇಲೆ ಬರಲು ಗೌಡರು ಸತತ ಪರಿಶ್ರಮ ಪಟ್ಟು ದುಡಿದು ಅಡವಿಟ್ಟ ಜಮೀನನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾದರು. ಆಗ ಮನೆಯವರು ಗೌಡರಿಗೆ ಮದುವೆ ಮಾಡಬೇಕೆಂದು ಯೋಚಿಸಿದರು. ಮದುವೆಗೆ ಒಪ್ಪದೆ ಸ್ವಾತಂತ್ರ ಚಳುವಳಿ, ಹೋರಾಟ, ಸಮಾಜಸೇವೆ ಎಂದು ಗೌಡರು ಊರೂರು ಸುತ್ತಾಡತೊಡಗಿದರು. ಇದನ್ನು ಗಮನಿಸಿದ ಮನೆಯವರು ಮದುವೆ ಮಾಡಿಕೊಳ್ಳಬೇಕೆಂದು ನಿರಂತರ ಒತ್ತಾಯ ಮಾಡುತ್ತಿದ್ದರು. ಈ ಒತ್ತಾಯಕ್ಕೆ ಮಣಿದು ಮದುವೆಯಾಗಲು ಗೌಡರು ಕೊನೆಗೂ ಒಪ್ಪಿಕೊಳ್ಳಬೇಕಾಯಿತು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಹಿರೇಬಾಗೇವಾಡಿ ಸಮೀಪದ ಮರಡಿ ನಾಗಲಾಪುರ ಗ್ರಾಮದ ರೇವಡಿ ಮನೆತನದ ಯಮುನಪ್ಪನವರ ಮಗಳಾದ ಸಾವಿತ್ರಿಬಾಯಿ ಅವರೊಂದಿಗೆ ೧೯೩೫ ಫೆಬ್ರುವರಿ ೨೧, ಗುರುವಾರದಂದು ಹೊಸಪೇಟೆಯಲ್ಲಿ ನಾಗನಗೌಡರ ಮದುವೆಯಾಯಿತು. ಸಾವಿತ್ರಿಬಾಯಿಯವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಪೂರೈಸಿಕೊಂಡರು. ಉನ್ನತ ವ್ಯಾಸಂಗಕ್ಕಾಗಿ ಮುಂಬಯಿಯ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್.ಪದವಿಯನ್ನು ರ್‍ಯಾಂಕ್‌ನೊಂದಿಗೆ ಪಡೆದರು. ನಂತರದಲ್ಲಿ ಕೆಲಕಾಲ ಮಧ್ಯಪ್ರದೇಶದ ಲೇಡಿ ಬಟ್ಲರ್ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆಸಲ್ಲಿಸಿ ತಾಯ್ನಾಡಿಗೆ ಮರಳಿ ಬಂದರು. ಆಗ ಗದಗ ಪಟ್ಟಣದಲ್ಲಿ ಸಾವಿತ್ರಿಯಬಾಯಿ ಯವರು ಹೆರಿಗೆ ಆಸ್ಪತ್ರೆಯನ್ನು ಆರಂಭಿಸಿದ್ದರು. ಮದುವೆಯಾದ ನಂತರ ಹೊಸಪೇಟೆಯಲ್ಲಿ ಆಸ್ಪತ್ರೆಯೊಂದನ್ನು ಸ್ಥಾಪಿಸಿ ತಮ್ಮ ವೈದ್ಯಕೀಯ ವೃತ್ತಿಯನ್ನು ಮುಂದುವರಿಸಿದರು. ಹೀಗಾಗಿ ಬಳ್ಳಾರಿ ಜಿಲ್ಲೆಯ ಮೊದಲ ಮಹಿಳಾ ವೈದ್ಯೆ ಎಂಬ ಹೆಗ್ಗಳಿಕೆಗೂ ಸಾವಿತ್ರಿಬಾಯಿಯವರು ಪಾತ್ರರಾಗಿದ್ದರು. ಗೌಡರು ಆ ಹೊತ್ತಿಗಾಗಲೇ ರಾಷ್ಟ್ರ ಸೇವೆ ಹಾಗೂ ಸಮಾಜ ಕಾರ್ಯಗಳಲ್ಲಿ ತಮ್ಮನ್ನು ಪೂರ್ಣಪ್ರಮಾಣ ದಲ್ಲಿ ತೊಡಗಿಸಿಕೊಂಡಿದ್ದರು. ಹೀಗಾಗಿ ಮನೆತನದ ಪೂರ್ಣ ಜವಾಬ್ದಾರಿಯೆಲ್ಲ ಸಾವಿತ್ರಿಬಾಯಿಯವರ ಹೆಗಲಿಗೆ ಬಿತ್ತು.

ನಾಗನಗೌಡ ಸಾವಿತ್ರಿಬಾಬಾಯಿ ದಂಪತಿಗಳಿಗೆ ಮೀನಾಕ್ಷಿ, ಚಾರುಚಂದ್ರ ಮತ್ತು ರವೀಂದ್ರನಾಥ ಎಂಬ ಮೂವರು ಮಕ್ಕಳು. ಮೀನಾಕ್ಷಿ ಬಿ.ಎ.ಎಲ್.ಎಲ್.ಬಿ ಓದಿಕೊಂಡು ತರೀಕೆರೆಯ ಬಸವರಾಜು ವಕೀಲರನ್ನು ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಚಾರುಚಂದ್ರ ತಾಯಿ ನಡೆಸುತ್ತಿದ್ದ ಗಣಿ ಉದ್ಯಮವನ್ನು ಮುಂದುವರೆಸಿಕೊಂಡು ಹೊಸಪೇಟೆಯಲ್ಲಿ ವಾಸಿಸುತ್ತಿದ್ದಾರೆ. ಗಿಟಾರ ವಾದ್ಯವನ್ನು ನುಡಿಸುವುದು, ಆಸಕ್ತ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆ ವ್ಯಾಕರಣವನ್ನು ಹೇಳಿಕೊಡುವುದು, ಕ್ರಿಕೆಟ್ ಕಾಮೆಂಟರಿ, ರೇಡಿಯೋ ಹಾಗೂ ದೂರದರ್ಶನ ಚಾನೆಲ್‌ಗಳಲ್ಲಿ ಇಂಗ್ಲಿಷ್ ವಾರ್ತೆಗಳನ್ನು ಓದುವುದು

ಚಾರುಚಂದ್ರ ಅವರ ಹವ್ಯಾಸ. ತಂದೆಯವರ ಕೃಷಿಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದ ರವೀಂದ್ರನಾಥ ನಿಧನ ಹೊಂದಿದ್ದಾರೆ. ಮನೆತನದ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ವೃತ್ತಿ, ಸಾಮಾಜಿಕ ಸೇವೆಯಲ್ಲಿ ನಿರತರಾದ ಸಾವಿತ್ರಿಬಾಯಿಯವರಿಗೆ ನೆರವಾದವರು ತಮ್ಮನಾದ ವಸಂತ. ಇವರು ಹೊಸಪೇಟೆಯ ತುಂಗಭದ್ರಾ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಕಾರಣ ಮಾವ ಮತ್ತು ಅಕ್ಕನವರಿಗೆ ಆಗಾಗ ನೆರವಾಗುತ್ತಿದ್ದರು. ಈಗ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸಾವಿತ್ರಿಬಾಯಿಯವರ ಸೇವೆಯೂ ಗಮನಾರ್ಹವಾಗಿದೆ. ಹೊಸಪೇಟೆಯಲ್ಲಿ ಮೊದಲ ಬಾರಿಗೆ ನರ್ಸರಿ ಶಾಲೆಯನ್ನು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅಂದು ಸ್ಥಾಪನೆಯಾದ ಈ ಶಾಲೆ ಇಂದು ಲಿಟಲ್ ಫ್ಲಾವರ್ ಪ್ರಾಥಮಿಕ ಮತ್ತು ಪ್ರೌಢಶಾಲೆಯಾಗಿ ಬೃಹತ್ತಾಗಿ ಬೆಳೆದಿರುವುದನ್ನು ನಾವು ನೋಡಬಹುದಾಗಿದೆ. ಹೊಸಪೇಟೆ ಆಸ್ಪತ್ರೆಯ ಸಲಹಾ ಸಮಿತಿ ಸದಸ್ಯರಾಗಿ, ಜಮೀನು ಅಡಮಾನ ಬ್ಯಾಂಕಿನ ಅಧ್ಯಕ್ಷರಾಗಿ, ಜಿಲ್ಲಾ ಬೋರ್ಡ ಸದಸ್ಯರಾಗಿ, ಹೊಸಪೇಟೆ ಕೋಅಪರೇಟೀವ್ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದು ಆ ಕಾಲಕ್ಕೆ ಸಾಮಾನ್ಯ ಸಂಗತಿಯೇನಲ್ಲ. ಸಮಾಜ, ಶಿಕ್ಷಣ, ರಾಜಕೀಯ, ಆರ್ಥಿಕ, ಸಹಕಾರ, ಸಾಹಿತ್ಯಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು ಎಂಬುದು ಸಾವಿತ್ರಿಬಾಯಿಯವರ ಆಶಯ. ಬಳ್ಳಾರಿ ಭಾಗದಲ್ಲಿ ಬಾಲ್ಯ ವಿವಾಹ, ವರದಕ್ಷಿಣೆ ವಿರುದ್ಧ ಮಹಿಳಾ ಸಂಘಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದ ಮಹಿಳೆಯರಲ್ಲಿ ಸಾವಿತ್ರಿಬಾಯಿಯವರಿಗೆ ಅಗ್ರಸ್ಥಾನ ಸಲ್ಲುತ್ತದೆ. ಆ ಕಾಲದ ಪತ್ರಿಕೆಗಳು ಸಾವಿತ್ರಿಬಾಯಿಯವರ ಕಾರ್ಯದಕ್ಷತೆ ಮೆಚ್ಚಿ ವರದಿ ಮಾಡಿದ್ದನ್ನು ನಾವು ಕಾಣಬಹುದಾಗಿದೆ. ೧೯೫೩ ನವೆಂಬರ್ ೨೮, ೨೯ರಂದು ಕರ್ನಾಟಕ ಮಹಿಳಾ ಪರಿಷತ್ತಿನ ೧೦ನೆಯ ಅಧಿವೇಶನ ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಡಾ.ಸಾವಿತ್ರಿಬಾಯಿಯವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರುಗಿತ್ತು. ಈ ಅಧಿವೇಶನದಲ್ಲಿ ನಾಡಿನ ಹಿರಿಯ ಮಹಿಳೆಯರು ಪಾಲ್ಗೊಂಡಿದ್ದನ್ನು ೩.೧೨.೧೯೫೩ರ ಸಂಯುಕ್ತ ಕರ್ನಾಟಕ ಪತ್ರಿಕೆ ವರದಿ ಮಾಡಿದೆ.

## ೨. ಭಾರತ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದು

ಗೌಡರು ವಿದೇಶದಿಂದ ಶಿಕ್ಷಣ ಮುಗಿಸಿಕೊಂಡು ಮರಳಿ ಬರುವ ಹೊತ್ತಿಗೆ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ಏರತೊಡಗಿತ್ತು. ಆ ಕಾಲಕ್ಕೆ ಬ್ರಿಟಿಷ್ ಸರಕಾರ ಕೃಷಿ ನಿರ್ದೇಶಕ (Director of Agriculture)ರ ಹುದ್ದೆಯನ್ನು ಅಲಂಕರಿಸುವಂತೆ ಗೌಡರಿಗೆ ಆಹ್ವಾನವನ್ನು ನೀಡಿತ್ತು. ಆ ಆಹ್ವಾನವನ್ನು ನಿರಾಕರಿಸಿ ಗೌಡರು ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದರು. ೧೯೪೦ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧನಕ್ಕೊಳಗಾಗಿ ವೆಲ್ಲೂರು ತಂಜಾವೂರು ಜೈಲಿನಲ್ಲಿದ್ದರು. ಅವರೊಂದಿಗೆ ಅಸುಂಡಿ ತಿರುಮಲರಾವು, ಹಿಂಡಿ ಸಿದ್ದಪ್ಪ, ಬೂದಿಹಾಳ

ಅನಂತಾಚಾರ್ ಮೊದಲಾದ ಒಂಭತ್ತು ಜನರು ಸೆರೆಮನೆಯಲ್ಲಿದ್ದರು. ಆ ಕಾಲಕ್ಕೆ ನಾಗನಗೌಡರಿಗೆ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ೬೦೦ ರೂಪಾಯಿಗಳ ದಂಡವನ್ನು ವಿಧಿಸಲಾಗಿತ್ತು. ಆದರೆ ಜೈಲಿನಲ್ಲಿನ ಇವರ ಉತ್ತಮ ನಡವಳಿಕೆ ಹಾಗೂ ಆದರ್ಶಯುತ ಮೌಲ್ಯಗಳಿಂದಾಗಿ ಬ್ರಿಟಿಷ ಸರಕಾರವು ಒಂದೂವರೆ ತಿಂಗಳ ಸಜೆಯನ್ನು ಕಡಿಮೆಗೊಳಿಸಿತು. ಇದು ಅವರ ವ್ಯಕ್ತಿತ್ವ ಹೇಗಿತ್ತೆಂಬುದಕ್ಕೆ ಒಂದು ನಿದರ್ಶನ ಮಾತ್ರ. ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ (Quit india) ಚಳುವಳಿಯಲ್ಲಿ ಗೌಡರು ಭಾಗವಹಿಸಿ ಮಹಾತ್ಮಾಗಾಂಧೀಜಿ ಯವರ ಕನಸನ್ನು ಸಾಕಾರಗೊಳಿಸುವಲ್ಲಿ ತಮ್ಮದೇ ಆದ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಗಾಂಧೀಜಿಯವರು ನಿಧನರಾದಾಗ ಕೇಂದ್ರ ಮಂತ್ರಿಯಾಗಿದ್ದ ಟೇಕೂರು ಸುಬ್ರಹ್ಮಣ್ಯ ಅವರು ಚಿತಾಭಸ್ಮವನ್ನು ತಂದಿದ್ದರು. ಆ ಭಸ್ಮವನ್ನು ಹಂಪೆ ಕ್ಷೇತ್ರದ ಚಕ್ರತೀರ್ಥದಲ್ಲಿ ವಿಸರ್ಜಿಸಲಾಯಿತು. ಈ ಸಂದರ್ಭದಲ್ಲಿ ನಾಗನಗೌಡರೊಂದಿಗೆ ಎಂ.ಎಂ.ಪಾಟೀಲ, ಬೂದಿಹಾಳ ಅನಂತಾಚಾರ್, ಅಸುಂಡಿ ತಿರುಮಲರಾವ್ ಮುಂತಾದ ಜಿಲ್ಲೆಯ ಪ್ರಮುಖರು ಸೇರಿದ್ದರು. ಸ್ವಾತಂತ್ರ್ಯ ಹೋರಾಟದ ನೆನಪಿಗಾಗಿ ನಾಗನಗೌಡರು ಹೊಸಪೇಟೆಯ ರೇಲ್ವೆ ನಿಲ್ದಾಣ ರಸ್ತೆಯ ಶ್ರೀರಾಮುಲು ಪಾರ್ಕ ಹತ್ತಿರ ಸ್ತಂಭವನ್ನೊಳಗೊಂಡ ಕಟ್ಟೆಯನ್ನು ಕಟ್ಟಿಸಿದ್ದಾರೆ. ಆದರೆ ಆ ಕಟ್ಟೆ ಇಂದು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಕಾಣಲಾರದ ಸ್ಥಿತಿಯಲ್ಲಿದೆ.

### ೩. ಬಳ್ಳಾರಿ ಜಿಲ್ಲೆಯ ವಿಲೀನಕ್ಕೆ ಹೋರಾಟ

ನಿಜಾಮನ ವಶದಲ್ಲಿದ್ದ ಈ ಪ್ರದೇಶವನ್ನು ಬ್ರಿಟಿಷರು ತೆಗೆದುಕೊಂಡಾಗ ಆಡಳಿತಾತ್ಮಕ ವಾಗಿ ಬಳ್ಳಾರಿ ಜಿಲ್ಲೆ ಮದ್ರಾಸ್ ಸರಕಾರದ ಅಧೀನಕ್ಕೊಳಪಟ್ಟಿತ್ತು. ಹೀಗಾಗಿ ಬಳ್ಳಾರಿಗೆ ಮದ್ರಾಸ್ ಬಹುದೂರದ ದಾರಿ. ಯಾವುದೇ ಸರಕಾರಿ ಕೆಲಸಕ್ಕಾಗಿ ಇಲ್ಲಿನ ಜನತೆ ಮದ್ರಾಸಗೆ ಹೋಗಬೇಕಾಗಿತ್ತು. ಇದನ್ನು ತಪ್ಪಿಸಲು ಮೈಸೂರು ರಾಜ್ಯಕ್ಕೆ ಬಳ್ಳಾರಿ ಜಿಲ್ಲೆ ವಿಲೀನ ಗೊಳ್ಳಬೇಕಾದ ಅಗತ್ಯತೆಯನ್ನು ಮನಗಂಡು ಅಲ್ಲಿನ ಎಲ್ಲಾ ವರ್ಗದ ಜನತೆ ಒಕ್ಕಟ್ಟಿನಿಂದ ಹೋರಾಡಬೇಕಾಯಿತು. ೧೯೪೭ರಲ್ಲಿ ನಡೆದ ಜಿಲ್ಲಾ ಬೋರ್ಡ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಸಂಪೂರ್ಣವಾಗಿ ಮೈಸೂರಿನಲ್ಲಿ ಸೇರ್ಪಡೆ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಡಾ.ಸಾವಿತ್ರಿಬಾಯಿ, ಕೆ.ಚನ್ನಬಸವನಗೌಡ, ಮ.ಮ.ಪಾಟೀಲ, ಜಿಲ್ಲಾ ಬೋರ್ಡಿನ ಪ್ರತಿನಿಧಿಗಳಾಗಿ ಮದ್ರಾಸಗೆ ತೆರಳಿದರು. ಸಚಿವರಾಗಿದ್ದ ನಾಗನಗೌಡರ ನೇತೃತ್ವದಲ್ಲಿ ಮದ್ರಾಸ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಇದರಲ್ಲಿ ಸಕ್ರೀಯವಾಗಿ ಭಾಗವಹಿಸಿ ಸರಕಾರದಿಂದ ಆಗಬೇಕಾದ ಕೆಲಸವನ್ನು ಗೌಡರು ಆಗು ಮಾಡಿಸಿಕೊಟ್ಟರು. ಏಕೆಂದರೆ ಆಗ ಇವರು ಮದ್ರಾಸ್ ಸರಕಾರದಲ್ಲಿ ವ್ಯವಸಾಯ ಮತ್ತು ಕೈಗಾರಿಕಾ ಮಂತ್ರಿಯಾಗಿದ್ದರು. ೧೯೫೩ರಲ್ಲಿ ಫಜಲ ಅಲೀ ಆಯೋಗ ಬಳ್ಳಾರಿಗೆ ಬಂದಾಗ ವ್ಯವಸಾಯ ಸಚಿವರಾದ ನಾಗನಗೌಡರು ಟೇಕೂರು ಸುಬ್ರಮಣ್ಯಂ, ಅಂದಿನ ಶಿಕ್ಷಣ ಸಚಿವ

ಎ.ಜಿ.ರಾಮಚಂದ್ರ ರಾವ್, ಮ.ಮ.ಪಾಟೀಲ ಮೊದಲಾದವರೊಂದಿಗೆ ಭೇಟಿ ಮಾಡಿ ಮನವಿ ಸಲ್ಲಿಸಿ ಬಳ್ಳಾರಿ ಮೈಸೂರಿಗೆ ಏಕೆ ಸೇರಬೇಕು ಎಂಬುದರ ಬಗೆಗೆ ಸಮರ್ಥನೆ ನೀಡಿದರು. ಅಲ್ಲದೇ ಜಿಲ್ಲೆಯ ಅನೇಕ ಸಂಘ ಸಂಸ್ಥೆಗಳು ಬಳ್ಳಾರಿ ಮೈಸೂರು ರಾಜ್ಯದಲ್ಲಿ ವಿಲೀನವಾಗಬೇಕೆಂದು ಹೋರಾಟ ಮಾಡಿದರು. ಈ ಹೋರಾಟದ ಫಲವಾಗಿ ೧೯೫೩ ಅಕ್ಟೋಬರ ೧ ರಂದು ನಾಲ್ಕು ತಾಲೂಕುಗಳನ್ನು ಹೊರತುಪಡಿಸಿ ಬಳ್ಳಾರಿ ಜಿಲ್ಲೆಯು ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ೨.೧೦.೧೯೫೩ರಂದು ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ.ಹನುಮಂತಯ್ಯ ಅವರು ಬಳ್ಳಾರಿಯ ಬಿ.ಡಿ.ಎ.ಎ. ಮೈದಾನದಲ್ಲಿ ನಡೆದ ಬಳ್ಳಾರಿ ಮೈಸೂರು ವಿಲೀನ ಸಮಾರಂಭದಲ್ಲಿ ಭಾಗವಹಿಸಿ ನಡೆದ ಸ್ವಾಗತ ಸಮಾರಂಭದಲ್ಲಿ ಮಾತನಾಡಿ 'ಕರ್ನಾಟಕ ಏಕೀಕರಣದಲ್ಲಿ ಇದು ಮೊದಲ ಹೆಜ್ಜೆ' ಎಂದು ತಿಳಿಸುತ್ತಾ 'ನನ್ನ ಮನಸ್ಸನ್ನು, ದೇಹವನ್ನು ನಿಮ್ಮ ಸೇವೆಗೆ ಮುಡಿಪಾಗಿ ಇಡುತ್ತೇನೆ' ಎಂದು ಬಳ್ಳಾರಿ ಜನತೆಗೆ ಆಶ್ವಾಸನೆ ನೀಡಿದರು. ಎಚ್.ಸಿದ್ಧವೀರಪ್ಪ, ಟಿ.ಚನ್ನಯ್ಯ, ಜೋಳದರಾಶಿ ದೊಡ್ಡನಗೌಡ, ಬಿ.ಶಿವಮೂರ್ತಿಶಾಸ್ತ್ರಿ, ಟೇಕೂರು ಸುಬ್ರಮಣ್ಯಂ ಮೊದಲಾದ ಗಣ್ಯಮಾನ್ಯರು ಭಾಗವಹಿಸಿದ ಈ ಸಮಾರಂಭದಲ್ಲಿ ನಾಗನಗೌಡರು ಬಳ್ಳಾರಿ ಜಿಲ್ಲೆಯ ಭಾಷೆಯ ಸೊಗಡು, ಸಂಸ್ಕೃತಿ, ಕೃಷಿ ಚಟುವಟಿಕೆಗಳ ಅನನ್ಯತೆಯನ್ನು ಜನತೆಗೆ ಮನನ ಮಾಡಿಕೊಟ್ಟಿರುವುದು ವೆಲ್‌ಕಂ ಬಳ್ಳಾರಿ ಗ್ರಂಥವೊಂದರಿಂದ ತಿಳಿದು ಬರುತ್ತದೆ. ಹೀಗೆ ನೂರಾರು ಜನರ ಹೋರಾಟದ ಫಲವಾಗಿ ಹರಿದು ಹಂಚಿಹೋಗಿದ್ದ ಕರ್ನಾಟಕದ ಅನೇಕ ಭಾಗಗಳೆಲ್ಲ ಒಂದುಗೂಡಿ ೧.೧೧.೧೯೫೬ರಂದು ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿದ್ದು ಈಗ ಇತಿಹಾಸ.

### ೪. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪಾಲ್ಗೊಂಡಿದ್ದು

ಕರ್ನಾಟಕವನ್ನು ಏಕೀಕರಣಗೊಳಿಸಿ ಅಖಂಡ ರಾಜ್ಯದ ಕನಸನ್ನು ಕಂಡವರಲ್ಲಿ ಗೌಡರೂ ಒಬ್ಬರು. ೧೯೨೪ರಲ್ಲಿ ಮುಂಬಯಿ, ಮದ್ರಾಸ್ ಮತ್ತು ಕೊಡಗು ಪ್ರಾಂತಗಳನ್ನು ಸೇರಿಸಿ ಕರ್ನಾಟಕ ಪ್ರಾಂತ ರಚನೆಗೆ ಒತ್ತಾಯಿಸಲು ಮುಂದಾಳತ್ವ ವಹಿಸಿದವರು ನಾಗನಗೌಡರು. ೧೯೪೦ ರಲ್ಲಿ ಸೊಲ್ಲಾಪುರದಲ್ಲಿ ನಡೆದ ಕರ್ನಾಟಕ ಏಕೀಕರಣ ಸಂಘದ ಆನೆಯ ಪರಿಷತ್ತು ಇವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಚಳುವಳಿಯ ಸ್ವರೂಪವನ್ನು ತೀವ್ರಗೊಳಿಸಲು ನಿರ್ಧರಿಸಿತು.

ಬಳ್ಳಾರಿ ಜಿಲ್ಲೆಯು ಮೈಸೂರು ರಾಜ್ಯದಲ್ಲಿ ವಿಲೀನಗೊಂಡ ನಂತರ ಮದ್ರಾಸ್ ಸರಕಾರದಲ್ಲಿ ಮಂತ್ರಿಯಾಗಿದ್ದ ನಾಗನಗೌಡರು ಮೈಸೂರು ರಾಜ್ಯ ಸರಕಾರದಲ್ಲಿ ವ್ಯಸಾಯ ಮಂತ್ರಿಗಳಾಗಿ ಮುಂದುವರೆದರು. ರಾಜ್ಯ ಪುನರ್ವಿಂಗಡನಾ ಆಯೋಗವು ೧೯೫೪ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಮಾಹಿತಿ ಸಂಗ್ರಹಿಸತೊಡಗಿತ್ತು. ಆಗ ಮೈಸೂರು ರಾಜ್ಯದ ವಿದ್ಯಾಮಂತ್ರಿಗಳಾದ ಎ.ಜಿ.ರಾಮಚಂದ್ರರಾವ್ ಅವರೊಂದಿಗೆ ವ್ಯವಸಾಯ ಮಂತ್ರಿ ನಾಗನಗೌಡರು ಕರ್ನಾಟಕ ಏಕೀಕರಣವಾಗಬೇಕೆಂಬ ಮನವಿಗಳನ್ನು ಸಲ್ಲಿಸಿತು. ಇದೇ

ಸಮಯದಲ್ಲಿ ಬಳ್ಳಾರಿಯ ಮುಸಲ್ಮಾನ ಬಂಧುಗಳ ಪರವಾಗಿ ಅಬ್ದುಲ್ ರಜಾಕ್ ಮುಂದಾಳತ್ವದಲ್ಲಿ ಇಪ್ಪತ್ತು ಜನಪ್ರತಿನಿಧಿಗಳು ಆಯೋಗದ ಸದಸ್ಯರನ್ನು ಭೇಟಿ ಮಾಡಿ ಕರ್ನಾಟಕವನ್ನು ಒಂದು ಮಾಡಲು ಶಿಫಾರಸ್ಸು ಮಾಡಬೇಕೆಂದು ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಅನೇಕ ಸಂಘಸಂಸ್ಥೆ ಸಮಾಜಗಳ ಧುರೀಣರು, ರಾಜ್ಯ ರಾಷ್ಟ್ರನಾಯಕರ ತಾತ್ವಿಕ ಹೋರಾಟದ ಫಲವಾಗಿ ಕರ್ನಾಟಕ ಏಕೀಕರಣಗೊಂಡ ಇತಿಹಾಸ ಇಂದು ಪುಟಗಳಲ್ಲಿ ಸೇರಿರುವುದು ಗೊತ್ತಿರುವ ಸಂಗತಿಯಾಗಿದೆ.

## ೫. ಕೃಷಿಯಲ್ಲಿ ಸತತ ಪ್ರಯೋಗಶೀಲತೆ

ಕೃಷಿಯಲ್ಲಿ ಸತತ ಪ್ರಯೋಗಶೀಲತೆ ನಡೆಸಿದುದು ನಾಗನಗೌಡರ ಮಹತ್ಸಾಧನೆಯಾಗಿದೆ. ಏಕೆಂದರೆ ನಾಗನಗೌಡರು ಮೂಲತಃ ಕೃಷಿಶಾಸ್ತ್ರದಲ್ಲಿ ಪರಿಣತಿಯನ್ನು ಪಡೆದವರು. ಆ ಪರಿಣತಿ ಹಾಗೆ ನಶಿಸಿ ಹೋಗಬಾರದು ಎಂಬುದು ಗೌಡರ ಮನದಾಸೆಯಾಗಿತ್ತು. ಕೃಷಿ ಪ್ರಯೋಗಗಳಲ್ಲಿ ಅವರು ಅಪಾರ ನಷ್ಟವನ್ನನುಭವಿಸಿದರೂ ಹೊಸಹೊಸ ಬೀಜಗಳ ಸಂಸ್ಕರಣ ಮಾಡಿ ರೈತರ ನೆರವಿಗೆ ಬರುತ್ತಿದ್ದುದನ್ನು ಹೊಸಪೇಟೆಯ ರೈತರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ಮೂರೇ ತಿಂಗಳಲ್ಲಿ ಭತ್ತದ ಬೆಳೆಯನ್ನು ತೆಗೆಯುವ ಬೀಜವನ್ನು ಹೊರದೇಶಗಳಿಗೆ ಹೋದಾಗ ಕಿಸೆಯಲ್ಲಿ ಹಾಕಿಕೊಂಡು ಬಂದು ಇಲ್ಲಿ ಪ್ರಯೋಗ ಮಾಡಿದ್ದು, ಹೊಲ ಗದ್ದೆಗಳ ಸಂರಕ್ಷಣೆಗೆ, ಉರುವಲಿಗಾಗಿ ಜಾಲಿ ಬೀಜಗಳನ್ನು ತಂದದ್ದು ನಾಗನಗೌಡರೇ. ಹೀಗಾಗಿ ಈ ಜಾಲಿಗೆ 'ನಾಗನಗೌಡ ಜಾಲಿ' ಎಂಬ ಅನ್ವರ್ಥಕ ನಾಮ ಇಂದಿಗೂ ಪ್ರಚಲಿತದಲ್ಲಿದೆ. ಪಾಪಾಸಕಳ್ಳಿಯನ್ನು ನಿರ್ಮೂಲನೆ ಮಾಡಲು ಅದನ್ನು ತಿಂದು ಜೀವಿಸುವ ಹುಳವನ್ನೇ ತಂದು ಜಿಲ್ಲೆಯಲ್ಲಿ ಹರಿಬಿಟ್ಟರು.

ತಮ್ಮ ಹೊಲದಲ್ಲಿ ದ್ರಾಕ್ಷಿ, ಸಪೋಟ, ಅಡಿಕೆ, ದಾಳಿಂಬೆ, ಭತ್ತ, ತೆಂಗು, ಕಬ್ಬು ಮೊದಲಾದ ಬೆಳೆಗಳನ್ನು ಪ್ರಯೋಗ ಮಾಡಿ ರೈತರಿಗೆ ತಿಳಿಸಿಕೊಡುತ್ತಿದ್ದುದು ಗೌಡರ ವಿಶೇಷತೆ. ಸಚಿವರಾಗಿದ್ದರೂ ಸಹಿತ ಹೆಗಲ ಮೇಲೆ ಬಾರಕೋಲು ಹಾಕಿಕೊಂಡು ಮಡಿಕೆ ಹೊಡೆಯುತ್ತಿದ್ದರು. ತಾವೇ ಸ್ವತಃ ಶೇಂಗಾ ಬಿತ್ತಿ ವರ್ಷಕ್ಕೆ ಎರಡು ಸಲ ಬೆಳೆ ತೆಗೆಯುತ್ತಿದ್ದರು. ಕುರಿಗಳನ್ನು ಸಾಕುತ್ತಿದ್ದರು. ಅವುಗಳ ಉಣ್ಣೆಯನ್ನು ಕತ್ತರಿಸುತ್ತಿದ್ದರು. ನೀರು ಸಂಗ್ರಹಣಾ ವಿಧಾನವನ್ನು ತಮ್ಮ ತೋಟದಲ್ಲಿ ಪ್ರಾಯೋಗಿಕವಾಗಿ ಮಾಡಿದ್ದರು. ಕಾಂಪೋಸ್ಟ ಗೊಬ್ಬರದ ಬಳಕೆ ತಮ್ಮ ಹೊಲದಲ್ಲಿಯೇ ತಯಾರು ಮಾಡುತ್ತಿದ್ದರು. ಇದಕ್ಕಾಗಿ ೩X ೩ ಅಡಿ ಚೆಚ್ಚೌಕದ ಗುಂಡಿಯನ್ನು ತೆಗೆಯಿಸಿ ಅದರಲ್ಲಿ ಊರೊಳಗಿನ ಮಲಮೂತ್ರ ಹಾಗೂ ದನಗಳ ಸೆಗಣಿ ಮುಂತಾದ ಹೊಲಸನ್ನು ತೋಟಿಗರಿಂದ ತರಿಸಿ ಹಾಕಿಸುತ್ತಿದ್ದರು. ಇದರಿಂದ ಕಾಂಪೋಸ್ಟ ಗೊಬ್ಬರ ಸಿದ್ಧವಾದ ಕೂಡಲೇ ಕಬ್ಬು, ಭತ್ತ, ತೋಟದ ಬೆಳೆಗಳಿಗೆ ಹಾಕಲಾಗುತ್ತಿತ್ತು. ಯಾವುದು ಹಾಳಾಗಬಾರದು ಎಂಬುದು ಗೌಡರ ನಿಲುವಾಗಿತ್ತು ಎಂಬುದು ಇದರಿಂದ ತಿಳಿದುಬರುತ್ತದೆ.

ಇದಕ್ಕಾಗಿ ಅವರು ನಿರಂತರ ಪ್ರಯೋಗಗಳನ್ನು ಮಾಡುತ್ತಲೇ ಇದ್ದರು. ಕೆಲವು ಸಂದರ್ಭದಲ್ಲಿ ಹಾನಿಯಾಗಿ ಅಪಾರ ಹಣ ಪೋಲಾಗುತ್ತಿತ್ತು. ಅಮೋನಿಯಂ ಸಲ್ಫೇಟನ್ನು ರೈತರಿಗೆ ಪರಿಚಯಿಸಿದ್ದು, ಸೆಗಣಿ ಗೊಬ್ಬರವನ್ನು ಉಪಯೋಗಿಸಿದ್ದು, ಕೀಟನಾಶಕ ಔಷಧಿಗಳನ್ನು ಕಂಡುಹಿಡಿದದ್ದು, ಬೆಳೆಯಲ್ಲಿ ಕಸ ಬೆಳೆಯದ ಹಾಗೆ ನೋಡಿಕೊಳ್ಳುವ ಕ್ರಮ ಹೀಗೆ ರೈತರ ಅನುಕೂಲತೆಯ ದೃಷ್ಟಿಯಿಂದ ಗೌಡರು ನಡೆಸಿದ ಪ್ರಯೋಗಗಳು ನೂರಾರು. ಅದರಲ್ಲಿ ಸಫಲರಾದಾಗ ರೈತರನ್ನ ಕರೆದು ತಾವು ಕಂಡುಹಿಡಿದ ಮಾರ್ಗೋಪಾಯಗಳನ್ನು ತೋರಿಸಿ ಪ್ರೋತ್ಸಾಹಿಸುತ್ತಿದ್ದರು. ಮಡಿಗೆ ನೀರು ಬಿಡುವಾಗಲೇ ಅಮೋನಿಯಾ ಗ್ಯಾಸನ್ನು ಬಿಟ್ಟರೆ ಸಮಯ ಉಳಿತಾಯವಾಗುತ್ತದೆಂಬುದು ಗೌಡರ ಆಲೋಚನೆ.

ಕೃಷಿಯಲ್ಲಿ ಅಮೋನಿಯಾ ಅನಿಲ ದ್ರಾವಕದ ಉಪಯೋಗ ಕುರಿತು ಅವರಿಗೆ ಅಚಲವಾದ ನಂಬಿಕೆಯಿತ್ತು. ಈ ದ್ರಾವಕದಿಂದ ಆರ್ಥಿಕವಾಗಿ ರೈತರು ಸಬಲರಾಗುತ್ತಾರೆಂಬುದು ನಾಗನಗೌಡರಿಗೆ ವಿಶ್ವಾಸವಿತ್ತು. ಅದಕ್ಕಾಗಿಯೇ ಹೊಸಪೇಟೆಯಲ್ಲಿ ಗೊಬ್ಬರದ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಕನಸನ್ನು ಕಂಡು ಕಾರ್ಯೋನ್ಮುಖ ರಾಗಿದ್ದರು. ಆದರೆ ಅವರ ಕನಸು ಇನ್ನೂ ನನಸಾಗಬೇಕಾಗಿದೆ. ಈ ದಿಸೆಯಲ್ಲಿ ಹೊಸಪೇಟೆಯ ರೈತ ಸಂಘಟನೆಗಳು ಪ್ರಯತ್ನಿಸಬೇಕಾಗಿದೆ. ಆ ಮೂಲಕ ನಾಗನಗೌಡರ ಕಾರ್ಯಯೋಜನೆ ಗಳನ್ನು ಅನುಷ್ಠಾನಗೊಳಿಸಿದಂತಾಗುತ್ತದೆ. ಅಷ್ಟೇ ಏಕೆ, ಅಮೋನಿಯಾ ಗೊಬ್ಬರದ ಬಗ್ಗೆ ಹೆಚ್ಚಿನ ಕಾಳಜಿವಹಿಸಿ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಆರ್ಥಿಕವಾಗಿ ರೈತರಿಗೆ ಏನೇನು ಲಾಭ ವಾಗುತ್ತದೆ ಎಂಬುದನ್ನು ಅಸೆಂಬ್ಲಿಯಲ್ಲಿ ಮಂಡಿಸಿದರು.

ವೆಂಕಟರಾಮನ್ ಎಂಬ ತಜ್ಞರಿಂದ co - 419 ಹೆಸರಿನ ಕಬ್ಬಿನ ತಳಿಯೊಂದನ್ನು ತಂದು ಮೊದಲು ತಮ್ಮ ಹೊಲದಲ್ಲಿ ಬೆಳೆದರು. ಇದಕ್ಕಾಗಿ ಗೌಡರು ಹೊಸಪೇಟೆಯ ರೇಲ್ವೆ ನಿಲ್ದಾಣದ ಸಮೀಪ ದಲ್ಲಿರುವ ತಮ್ಮ ಹೊಲದಲ್ಲಿ ಒಂದು ಮನೆ(Farm House)ಯನ್ನು ಕಟ್ಟಿಕೊಂಡು ಅಲ್ಲಿಯೇ ವಾಸಿಸಹತ್ತಿದರು. ಆ ಹೊಲದಲ್ಲಿ ತೋಟ ಮಾಡಿದರು, ಪ್ರಯೋಗಾತ್ಮಕವಾಗಿ ಸಣ್ಣ ಪ್ರಮಾಣದ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದರು. ಇದರಿಂದ ವಿಶ್ವಾಸ ಬಂದ ಕಾರಣ ಗೌಡರು ರೈತರಿಂದ ಶೇರನ್ನು ಸಂಗ್ರಹಿಸಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿ ರೈತರಿಗೆ ನೆರವಾದರು. ಹೀಗೆ ನಾಗನಗೌಡರ ಕೃಷಿಯಲ್ಲಿದ್ದ ತಜ್ಞತೆ ಮತ್ತು ಅನುಭವವನ್ನು ಸರ್ಕಾರ ಸಂಘಸಂಸ್ಥೆಗಳು ಪಡೆದುಕೊಂಡಿವೆ. ಭಾರತ ಸರ್ಕಾರದ ಯೋಜನಾ ಆಯೋಗವು ಬೀಜ ಉತ್ಪಾದನ ತಂಡದ ಅಧ್ಯಕ್ಷರನ್ನಾಗಿ ನಾಗನಗೌಡರನ್ನು ನಿಯಮಿಸಿತು. ಸರ್ಕಾರದ ಆದೇಶದಂತೆ ಗೌಡರು ಹಲವಾರು ರಾಜ್ಯಗಳನ್ನು ಸಂದರ್ಶಿಸಿ ಸಮೀಕ್ಷೆ ಮಾಡಿ ಬೀಜ ಉತ್ಪಾದನೆ ಮಾಡುವ ಕ್ರಮಗಳು, ಯಾವ ಪ್ರದೇಶ ಉತ್ಪಾದನೆ ಮಾಡಲು ಯೋಗ್ಯ, ಅದರಿಂದಾಗುವ ಅನುಕೂಲಗಳ ಬಗೆಗೆ ಸಮಗ್ರವಾದ ವರದಿಯೊಂದನ್ನು ಸರಕಾರಕ್ಕೆ ನೀಡಿದರು.

## ೬. ಸಹಕಾರ ಸಂಘಟನೆಯ ಹರಿಕಾರ

ಮಾನವನ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಸಹಕಾರ (Co-operative) ಎಂಬುದು ಅವಶ್ಯಬೇಕು. ದೇಶದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ಎಂಬುದು ಒಂದು ಚಳುವಳಿಯೆಂಬಂತೆ ಬೆಳೆಯಬೇಕು. ಈ ಚಳುವಳಿಗೆ ನಾಂದಿ ಹಾಡಿದ್ದು ಕರ್ನಾಟಕವೇ ಮೊದಲು ಎಂಬುದು ಹೆಮ್ಮೆಯ ವಿಷಯ. ಗದಗ ಸಮೀಪವಿರುವ ಕನಗಿನಹಾಳ ಗ್ರಾಮದ ರೈತನಾದ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ ಎಂಬ ಕುರುಬ ಸಮುದಾಯದ ರೈತನೊಬ್ಬ ಸಹಕಾರಿ ಸಂಘವನ್ನು ೧೯೦೫ರಲ್ಲಿ ಸ್ಥಾಪನೆ ಮಾಡಿದನು. ಇದು ಏಶಿಯಾ ಖಂಡದಲ್ಲಿಯೇ ಮೊದಲ ಸಹಕಾರಿ ಸಂಘ ಎಂಬ ಹೆಗ್ಗಳಿಕೆಗೆ ಕಣಗಿನಹಾಳದ ಸಿದ್ಧನಗೌಡ ಪಾಟೀಲ ಪಾತ್ರರಾಗಿದ್ದಾರೆ. ಇಲ್ಲಿಂದ ಮುಂದೆ ದೇಶದಾದ್ಯಂತ ವ್ಯವಸಾಯ, ವಾಣಿಜ್ಯ ಕ್ಷೇತ್ರಗಳಲ್ಲಿ ಅನೇಕ ಸಹಕಾರ ಸಂಘಸಂಸ್ಥೆಗಳು ಸ್ಥಾಪನೆಯಾದವು. ರೈತರು ಕೃಷಿಕಾರ್ಮಿಕರು, ಕೂಲಿಕಾರರು, ಬಡವರು ಸಣ್ಣ ಸಣ್ಣ ಗುಡಿ ಕೈಗಾರಿಕೋದ್ಯಮಿಗಳ ಆರ್ಥಿಕ ಸ್ವಾವಲಂಬನೆಗೆ ಈ ಸಂಘಗಳು ನೆರವಿಗೆ ಬಂದವು.

ಬಳ್ಳಾರಿ ಪ್ರದೇಶದಲ್ಲಿ ಸಹಕಾರ ಸಂಘಗಳ ಮೂಲಕವೇ ರೈತರ ಅಭಿವೃದ್ಧಿ ಸಾಧ್ಯ ಎಂಬುದು ಗೌಡರ ದೃಢನಿಲುವಾಗಿತ್ತು. ಅದಕ್ಕಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ವಿವಿಧ ಕ್ಷೇತ್ರದಲ್ಲಿ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲು ರೈತರನ್ನು ಸಂಘಟಿಸಿದರು. ಆ ಸಂಘಟನೆಯ ಮೂಲಕ ರೈತರ ಅಭಿವೃದ್ಧಿಗೆ ಅನುಕೂಲವಾಗುವ ಯೋಜನೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಹೊಸಪೇಟೆಯ ಚಿತ್ತವಾಡಗಿಯಲ್ಲಿ ಆರಂಭವಾದ ಸಕ್ಕರೆ ಕಾರ್ಖಾನೆ, ಹೊಸಪೇಟೆ ಕಮಲಾಪುರ, ಚಿತ್ತವಾಡಗಿಗಳಲ್ಲಿ ಸ್ಥಾಪನೆಗೊಂಡ ರೈತಸಂಘಗಳು, ಜಿಲ್ಲೆಯಾದ್ಯಂತ ಪ್ರಾರಂಭವಾದ ಕೃಷಿ ಸಹಕಾರ ಸಂಘಗಳು, ಒಕ್ಕಲುತನ ಮಾರಾಟ ಸಂಘ, ಕಬ್ಬು ಬೆಳೆಗಾರರ ಸಹಕಾರ ಸಂಘ-ಹೀಗೆ ಅನೇಕ ಸಂಘಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ನಾಗನಗೌಡರ ಪಾತ್ರ ತುಂಬ ದೊಡ್ಡದು. ಇವೆಲ್ಲವುಗಳು ನಾಗನಗೌಡರ ಸೊಸಾಯಿಟಿ ಎಂದೇ ಈಗಲೂ ಪ್ರಸಿದ್ಧವಾಗಿವೆ. ಅಂಥ ಸಂಘಸಂಸ್ಥೆಗಳ ಕುರಿತು ಈಗ ಅವಲೋಕಿಸಬಹುದು.

### ಅ. ಹೊಸಪೇಟೆ ಸಕ್ಕರೆ ಕಾರ್ಖಾನೆಯ ಸ್ಥಾಪಕ

ಹೊಸಪೇಟೆಯ ಬಹುತೇಕ ಭಾಗದ ಜಮೀನುಗಳು ತುಂಗಭದ್ರಾ ನೀರಾವರಿ ಪ್ರದೇಶಕ್ಕೆ ಒಳಪಟ್ಟಿವೆ. ಹೀಗಾಗಿ ಇಲ್ಲಿ ಆರ್ಥಿಕವಾಗಿ ಹೆಚ್ಚು ಲಾಭವನ್ನು ತರುವ ಬೆಳೆಗಳೆಂದರೆ ಕಬ್ಬು ಭತ್ತ ಮತ್ತು ಬಾಳೆ. ಅದರಲ್ಲಿಯೂ ಕಬ್ಬು ಬಹುಮುಖ್ಯವಾದ ಫಸಲು. ಆರಂಭದಲ್ಲಿ ಈ ಭಾಗದ ರೈತರು ಬೆಳೆದ ಕಬ್ಬಿನಿಂದ ಬೆಲ್ಲವನ್ನು ಮಾತ್ರ ತಯಾರಿಸುತ್ತಿದ್ದರು. ಇದರ ಮುಂದುವರಿಕೆಯಾಗಿ ಸಕ್ಕರೆ ಕಾರ್ಖಾನೆಯೊಂದರ ಅವಶ್ಯಕತೆಯಿದೆ ಎಂಬುದನ್ನು ಗೌಡರಾದಿಯಾಗಿ ಅವರ ಸ್ನೇಹಿತರೆಲ್ಲ ಮನಗಂಡರು. ನಾಗನಗೌಡರು ಹಗಲಿರುಳು ಹೋರಾಟ ನಡೆಸಿ ಹೊಸಪೇಟೆಯಲ್ಲಿ ಸಕ್ಕರೆ ಕಾರ್ಖಾನೆಯೊಂದರ ಸ್ಥಾಪನೆಗೆ ಕಾರಣೀಭೂತರಾದರು.

೧೯೩೨ರಲ್ಲಿ ಭಾರತ ಸರ್ಕಾರವು ಸಕ್ಕರೆ ಉದ್ಯಮ ರಕ್ಷಣಾ ಕಾನೂನನ್ನು ಜಾರಿಗೆ ತಂದಿತು. ಇದರಿಂದಾಗಿ ದೇಶದಲ್ಲಿ ಸಕ್ಕರೆ ಉತ್ಪಾದನೆ ಮಾರಾಟವು ಒಂದು ಉದ್ಯಮವೆಂಬಂತೆ ತೀವ್ರಗತಿಯಲ್ಲಿ ಬೆಳೆಯಲಾರಂಭಿಸಿತು. ಇಂಥ ಬೆಳವಣಿಗೆಗೆ ಸ್ಪಂದಿಸುವಲ್ಲಿ ಹೊಸಪೇಟೆಯೂ ಹಿಂದೆಬೀಳಲಿಲ್ಲ. ಹೊಸಪೇಟೆ ಭಾಗದ ರೈತರು ಪ್ರಮುಖ ವಾಣಿಜ್ಯ ಬೆಳೆಯಾದ ಕಬ್ಬನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾರಂಭಿಸಿದ್ದರು. ಹೀಗಾಗಿ ಸಕ್ಕರೆ ಕಾರ್ಖಾನೆಯೊಂದರ ಅಗತ್ಯತೆ ಇಲ್ಲಿತ್ತು. ಇದನ್ನು ಮನಗಂಡ ನಾಗನಗೌಡರು ಹೊಸಪೇಟೆಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಬಗೆಗೆ ಆಸಕ್ತಿ ತಳೆದು ಕಾರ್ಯಪ್ರವೃತ್ತರಾದರು. ಅವರೊಂದಿಗೆ ಸಹಕರಿಸಿದವರು ಗಣ್ಯವ್ಯಕ್ತಿಯಾಗಿದ್ದ ತಾಂಡವ ಮೊದಲಿಯಾರ್ ಮತ್ತು ಥಿಯೋಸೋಫಿಸ್ಟರಾಗಿದ್ದ ರಂಗನಾಥ ಮೊದಲಿಯಾರ್ ಪ್ರಮುಖರು. ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕಾದರೆ ಕೋಟ್ಯಂತರ ರೂಪಾಯಿಗಳ ಬಂಡವಾಳ ಬೇಕಾಗುತ್ತದೆ. ಆದರೆ ಈ ಮೂವರಲ್ಲಿ ಅಷ್ಟೊಂದು ಹಣವಿರಲಿಲ್ಲ. ಬಂಡವಾಳ ಹೂಡುವ ಕಂಪನಿ ಹಾಗೂ ಕೈಗಾರಿಕೋದ್ಯಮಿಗಳನ್ನು ಹುಡುಕುತ್ತ ಮುಂಬಯಿ, ಮದ್ರಾಸ್,ಹೈದರಾಬಾದ್ ಬೆಂಗಳೂರು ಮುಂತಾದ ಪಟ್ಟಣಗಳಿಗೆಲ್ಲ ಸುತ್ತಾಡಿದರೂ ಪ್ರಯೋಜನವಾಗಲಿಲ್ಲ. ಕೊನೆಯ ಪ್ರಯತ್ನವಾಗಿ ಮದ್ರಾಸ್ ಪ್ರಾಂತದಲ್ಲಿ ತುಂಬ ಪ್ರಭಾವಶಾಲಿಗಳಾಗಿದ್ದ ಕೆಲವು ಕಾಂಟ್ರಾಕ್ಟರುಗಳನ್ನು ಸಂಪರ್ಕಿಸಿದರು. ಈ ಪ್ರಯತ್ನದ ಫಲವಾಗಿ ಬೆಂಗಳೂರಿನ ಶ್ರೀರಾಮಲಿಂಗ ಮೊದಲಿಯಾರ್ ಹಾಗೂ ಶ್ರೀ ತಿರುವೆಂಕಟಸ್ವಾಮಿ ಮೊದಲಿಯಾರ್ ಅವರು ಮೂಲ ಬಂಡವಾಳವನ್ನು ಹೂಡಲು ಒಪ್ಪಿಕೊಂಡರು. ಕಂಪನಿಗೆ ಬೇಕಾದ ಶೇರು ಬಂಡವಾಳವನ್ನು ಸಂಗ್ರಹಿಸುವ ಕಾರ್ಯ ಆರಂಭಿಸಿದರು. ತುಂಬ ಶ್ರಮಪಟ್ಟು ರೂ.೧೦ಲಕ್ಷಗಳ ಬಂಡವಾಳವನ್ನು ಸಂಗ್ರಹಿಸಿದರು. ಇದರಲ್ಲಿ ಗೌಡರ ಪಾತ್ರ ತುಂಬ ಮಹತ್ವದ್ದಾಗಿತ್ತು. ಹೀಗೆ ನಾಗನಗೌಡರ ಶ್ರಮದ ಫಲವಾಗಿ ೧೯೩೪-೩೫ರಲ್ಲಿ ಸಕ್ಕರೆ ಕಾರ್ಖಾನೆ ಚಿತ್ತವಾಡಗಿಯಲ್ಲಿ ಕಾರ್ಯ ಆರಂಭಿಸಿತು.

ಕಾರ್ಖಾನೆ ಆರಂಭಗೊಂಡಿದ್ದರಿಂದ ರೈತರು ತುಂಬ ಸಂತೋಷಪಟ್ಟರು. ಆದರೆ ಈ ಉತ್ಸಾಹ ಬಹಳ ದಿನ ಉಳಿಯಲಿಲ್ಲ. ಏಕೆಂದರೆ, ಕಬ್ಬಿಗೆ ಯೋಗ್ಯ ಬೆಲೆ ಕೊಡದಿರುವುದು, ಸಕಾಲಕ್ಕೆ ಹಣವನ್ನು ರೈತರಿಗೆ ಪಾವತಿಸದಿರದು, ತೂಕದಲ್ಲಿ ಕ್ರಮಬದ್ಧತೆಯಿಲ್ಲದಿರುವುದು ಹೀಗೆ ಕಾರ್ಖಾನೆ ಬೆಳೆಗಾರರಿಗೆ ತುಂಬ ಮೋಸಮಾಡಹತ್ತಿತು. ಇದನ್ನು ನೋಡಿದ ನಾಗನಗೌಡರಿಗೆ ಭ್ರಮನಿರಸನವಾಯಿತು. ಕಾರ್ಖಾನೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದ ನಾಗನಗೌಡರು ರೈತರಿಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಸತತವಾಗಿ ಪ್ರಯತ್ನಿಸಿದರು. ರೈತರ ಪರವಾಗಿ ಸಭೆಯಲ್ಲಿ ವಾದಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಮಾತಿಗೆ ಎಳ್ಳಷ್ಟು ಬೆಲೆ ಕೊಡದಿದ್ದಾಗ ಗೌಡರು ಕಾರ್ಖಾನೆ ಆರಂಭವಾದ ಎರಡೇ ವರ್ಷಗಳಲ್ಲಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಹೊರಬಂದರು. ನಂತರದಲ್ಲಿ ನಾಗನಗೌಡರು ರೈತರನ್ನು ಸಂಘಟಿಸಿ ಕಾರ್ಖಾನೆಯಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಹೋರಾಟಕ್ಕಿಳಿಯಬೇಕಾಯಿತು.

### ಆ. ರೈತ ಸಂಘಟನೆಯ ನೇತೃತ್ವ

ಕಬ್ಬು ಬೆಳೆಗಾರರಿಗೆ ಆಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಲು ರೈತರ ಸಂಘಟನೆ ಅವಶ್ಯವಿತ್ತು. ರೈತರು, ಜಮೀನ್ದಾರರು, ವ್ಯಾಪಾರಸ್ಥರು ಹೆಚ್ಚು ಆಸಕ್ತಿ ವಹಿಸಿ ೧೯೪೦ರ ಹೊತ್ತಿಗೆ ಹೊಸಪೇಟೆಯಲ್ಲಿ ರೈತ ಸಂಘಟನೆಯನ್ನು ಮಾಡಿದರು. ಈ ಸಂಘಟನೆಗೆ ನಾಗನಗೌಡರು ತುಂಬ ಪ್ರಯತ್ನಪಟ್ಟರು. ಬೆಲ್ಲದ ಚನ್ನಪ್ಪ, ಪತ್ತಿಕೊಂಡ ಗುರುನಾಥಪ್ಪ ಮೊದಲಾದವರು ಈ ಪ್ರಯತ್ನಕ್ಕೆ ಸಹಕರಿಸಿದರು. ಕಬ್ಬಿಗೆ ಸೂಕ್ತ ಬೆಲೆ, ತೂಕದಲ್ಲಿ ಪಾರದರ್ಶಕತೆ, ಬೆಳೆಗಾರರಿಗೆ ಸಕಾಲಕ್ಕೆ ಹಣ ಪಾವತಿ ಮಾಡುವ ಕುರಿತು ಕಾರ್ಖಾನೆ ಮಂಡಲಿ ವಿರುದ್ಧ ರೈತ ಸಂಘ ಹೋರಾಟಕ್ಕಿಳಿಯಿತು. ಇದನ್ನು ಗಮನಿಸಿದ ಮಂಡಳಿ ರೈತ ಸಂಘದ ನಾಯಕರ ಕಬ್ಬನ್ನು ಖರೀದಿಸುವುದನ್ನು ನಿಲ್ಲಿಸಿತು. ಇದರಿಂದ ರೊಚ್ಚಿಗೆದ್ದ ರೈತಸಮೂಹ ಕಾರ್ಖಾನೆ ವಿರುದ್ಧ ಕ್ರಮಕ್ಕೆಗೊಳ್ಳುವಂತೆ ನಾಗನಗೌಡರ ನೇತೃತ್ವದಲ್ಲಿ ರೈತರ ನಿಯೋಗವೊಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿತು. ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ ಉದ್ದಿಮೆದಾರರು ಕಬ್ಬು ಬೆಳೆಗಾರರು ಹಾಗೂ ಸರ್ಕಾರದ ಪ್ರತಿನಿಧಿಯನ್ನೊಳಗೊಂಡ ಸಮಿತಿಯೊಂದನ್ನು ರಚಿಸಿತು. ಆ ಸಮಿತಿ ಕಾಲಕಾಲಕ್ಕೆ ಸಭೆ ಸೇರಿ ಸಮಸ್ಯೆಗಳನ್ನು ಬಗೆಹರಿಸುವತ್ತ ಯೋಜನೆಗಳನ್ನು ರೂಪಿಸಲಾಯಿತು. ೧೯೪೨ರಲ್ಲಿ ಭಾರತ ಸರ್ಕಾರ ಕಬ್ಬು ನಿಯಂತ್ರಣ ಕಾಯಿದೆಯೊಂದನ್ನು ಜಾರಿಗೊಳಿಸಿತು. ಇದರಿಂದಾಗಿ ಕಬ್ಬಿನ ಬೆಲೆ ನಿಗದಿ, ತೂಕದಲ್ಲಿ ಪಾರದರ್ಶಕತೆ, ತಕ್ಷಣ ಹಣ ಪಾವತಿ ಮಾಡುವುದರಲ್ಲಿ ಕಬ್ಬು ಬೆಳೆಗಾರರಿಗೆ ಅನುಕೂಲ ವಾಗಹತ್ತಿತು.

೧೯೫೦ರ ಹೊತ್ತಿಗೆ ಕಬ್ಬು ಬೆಳೆಗಾರರ ಸಂಘಟನೆಗೆ ಒಂದು ಸ್ಪಷ್ಟ ರೂಪ ಬಂದಿತ್ತು. ಮೇಲಾಗಿ ಅನ್ಯಾಯದ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಆ ಸಂಘಟನೆ ಹೊಂದಿತ್ತು. ಕಬ್ಬಿನ ಬೆಲೆ ನಿಗದಿ, ಹಣ ಪಾವತಿ ಮತ್ತು ಸರಿಯಾದ ತೂಕ ಇವುಗಳಿಗೆ ಸಂಬಂಧಿಸಿದಂತೆ ರೈತ ಸಂಘಟನೆಗಳು ಕಾರ್ಖಾನೆಯ ಆಡಳಿತ ಮಂಡಳಿ ಜೊತೆ ಚರ್ಚಿಸಿ ಸೌಹಾರ್ದ ಒಪ್ಪಂದಕ್ಕೆ ಬರುವಂತಹ ವಾತಾವರಣವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ. ಕಮಲಾಪುರ, ಚಿತ್ತವಾಡಗಿ ಮತ್ತು ಹೊಸಪೇಟೆಗಳಲ್ಲಿ ರೈತ ಸಂಘಗಳು ಸ್ಥಾಪನೆಗೊಂಡವು. ಈ ಎಲ್ಲ ಸಂಘಗಳು ಅಂದು ನಾಗನಗೌಡರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದ್ದುದನ್ನು ಹಿರಿಯ ರೈತಮುಖಂಡರು ಈಗಲೂ ನೆನಪಿಸಿಕೊಳ್ಳುತ್ತಾರೆ. ಇದು ಗೌಡರ ರೈತಪರ ಕಾಳಜಿಗೆ ನಿದರ್ಶನವಾಗಿದೆ.

### ಇ. ಕರ್ನಾಟಕ ವೆಜಿಟೆಬಲ್ ಮತ್ತು ಆಯಿಲ್ ರಿಫೈನರೀಜ್ ಕಂಪನಿ

ಚಿತ್ತವಾಡಗಿಯ ಬೆಲ್ಲದ ಚನ್ನಪ್ಪ ಹಾಗೂ ಕೊಪ್ಪಳದ ಅಗಡಿ ಸಂಗಣ್ಣನವರೊಂದಿಗೆ ನಾಗನಗೌಡರು "ಕರ್ನಾಟಕ ವೆಜಿಟೆಬಲ್ ಮತ್ತು ಆಯಿಲ್ ರಿಫೈನರೀಜ್ ಕಂಪನಿ"ಯನ್ನು ೧೯೪೫ರಲ್ಲಿ ಸ್ಥಾಪಿಸಲು ಮುಂದಾದರು. ಈ ಕಂಪನಿಗೆ ಉಳ್ಳಾಗಡ್ಡಿ ಕಲ್ಮಟೆಪ್ಪ ಫರ್ಮನ್ನು

ಮೇನೇಜಿಂಗ್ ಏಜೆಂಟ್ ಮಾಡಿ ನೋಂದಾಯಿಸಲಾಯಿತು. ಇದಕ್ಕಾಗಿ ಹತ್ತು ಲಕ್ಷ ರೂಪಾಯಿಗಳ ಬಂಡವಾಳವನ್ನು ಸಂಗ್ರಹಿಸಲು ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ಕೊಂಡರು. ಹತ್ತು ಸಾವಿರ ರೂಪಾಯಿ ಶೇರು ಕೊಟ್ಟವರನ್ನು ಕಂಪನಿಗೆ ನಿರ್ದೇಶಕರೆಂದು ನಿಯಮಿಸಿದರು. ಉಳಿದ ಬಂಡವಾಳವನ್ನು ಸಂಗ್ರಹಿಸಲು ಬೂದಿಹಾಳ್ ಅನಂತರಂಗಾಚಾರ್ ಮತ್ತು ಬೆಲ್ಲದ ಚನ್ನಪ್ಪ ಅವರೊಂದಿಗೆ ಗೌಡರು ಊರೂರು ಸುತ್ತಬೇಕಾಯಿತು. ಅಲ್ಲದೇ ಮದ್ರಾಸ್ ಶೇರು ಮಾರುಕಟ್ಟೆಯಲ್ಲಿಯೂ ಪ್ರಯತ್ನಿಸಿ ಹತ್ತು ಲಕ್ಷ ರೂಪಾಯಿಗಳನ್ನು ಶೇರು ರೂಪದಲ್ಲಿ ಸಂಗ್ರಹಿಸಲಾಯಿತು.

ಅಧಿಕ ಪ್ರಮಾಣದಲ್ಲಿ ಶೇಂಗಾ ಬೆಳೆಯುವ ಹಗರಿಬೊಮ್ಮನಹಳ್ಳಿಯೇ ಕಾರ್ಖಾನೆ ಸ್ಥಾಪಿಸಲು ಸೂಕ್ತ ಸ್ಥಳವೆಂದು ತೀರ್ಮಾನಿಸಲಾಗಿತ್ತು. ಮೂವರ ಪ್ರಯತ್ನದ ಫಲವಾಗಿ ಒಂದು ದಿನ ಮದ್ರಾಸ್ ಪ್ರಾಂತ ಸರ್ಕಾರದಲ್ಲಿ ಉನ್ನತ ಹುದ್ದೆಯಿಂದ ನಿವೃತ್ತರಾಗಿದ್ದ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಅಮೃತ ಹಸ್ತದಿಂದ ಕಾರ್ಖಾನೆಯ ಶಿಲಾನ್ಯಾಸ ನೆರವೇರಿಸಲಾಯಿತು. ಕಾರ್ಖಾನೆಗೆ ಬೇಕಾದ ಎಲ್ಲ ಮೂಲಭೂತ ಸಾಮಗ್ರಿಗಳನ್ನು ಲಾಹೋರ್ ಮುಂತಾದ ಕಡೆಯಿಂದ ತರಿಸಿಕೊಂಡರು. ಶೇರುದಾರರಿಂದ ಸಂಗ್ರಹಿಸಿದ ಹತ್ತು ಲಕ್ಷ ರೂಪಾಯಿಗಳು ಕಾರ್ಖಾನೆಗೆ ಸಾಕಾಗಲಿಲ್ಲ. ಮತ್ತೆ ಸರ್ಕಾರಕ್ಕೆ ಅನುಮತಿ ಕೇಳಿ ಪತ್ರ ಬರೆಯಲಾಯಿತು. ಆದರೆ ಸರಕಾರದಿಂದ ಸಕಾರಾತ್ಮಕ ಪ್ರತಿಕ್ರಿಯೆ ಬರದ ಕಾರಣ ತಮ್ಮ ಆಸ್ತಿಯನ್ನೆಲ್ಲ ಒತ್ತೆಯಿಟ್ಟು ಮದ್ರಾಸ್ ಫೈನಾನ್ಸ್ ಕಾರ್ಪೋರೇಷನ್ನಿನಿಂದ ಆರು ಲಕ್ಷಗಳ ಸಾಲ ಪಡೆದುಕೊಳ್ಳುವಲ್ಲಿ ಸಾಕುಬೇಕಾಯಿತು. ಅಷ್ಟೊತ್ತಿಗೆ ಸೇಂಗಾ ಬೆಲೆಯು ಕುಸಿದಿತ್ತು, ಕೊನೆಗೆ ಕೆಲವು ಕರಾರಿನೊಂದಿಗೆ ಹೊಸಪೇಟೆಯ ಸಕ್ಕರೆ ಕಾರ್ಖಾನೆಯ ಮಾಲೀಕರಾಗಿದ್ದ ಮಹಾವೀರ ಪ್ರಸಾದ್ ಮೊರಾರ್ಕಅವರ ವಶಕ್ಕೆ ಕಾರ್ಖಾನೆಯನ್ನು ಒಪ್ಪಿಸಲಾಯಿತು. ಮತ್ತೆ ಕೆಲವು ದಿನಗಳಾದ ಮೇಲೆ ಕಾರ್ಖಾನೆ ಅಭಿವೃದ್ಧಿಪಡಿಸಲು ಮೈಸೂರು ಸರಕಾರಕ್ಕೆ ಹತ್ತು ಲಕ್ಷ ರೂಪಾಯಿಗಳ ಸಾಲಕ್ಕೆ ಅರ್ಜಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ನಾಗನಗೌಡರು ಸಲಹೆ ಸಹಕಾರ ನೀಡಿದ್ದನ್ನು ಬೆಲ್ಲದ ಚನ್ನಪ್ಪನವರು ತಮ್ಮ ಆತ್ಮ ಚರಿತ್ರೆಯಲ್ಲಿ ಸ್ಮರಿಸಿಕೊಂಡಿದ್ದಾರೆ.

### ಈ. ಸಹಕಾರಿ ಸಂಘಗಳ ಸ್ಥಾಪನೆ

ಸಹಕಾರಿ ರಂಗದಲ್ಲಿಯೂ ನಾಗನಗೌಡರು ರಚನಾತ್ಮಕವಾದ ಕೆಲಸವನ್ನೆ ಮಾಡಿದ್ದಾರೆ. ಹೊಸಪೇಟೆ, ಅನಂತಶಯನಗುಡಿ, ಹಗರಿಬೊಮ್ಮನಹಳ್ಳಿ, ತಂಬ್ರಹಳ್ಳಿ, ಹಂಪಸಾಗರ, ರಾಮನಗರ ಹೀಗೆ ಹತ್ತಾರು ಗ್ರಾಮಗಳ ರೈತ ಮುಖಂಡರನ್ನು ಭೇಟಿ ಮಾಡಿ ವ್ಯವಸಾಯ ಉತ್ಪನ್ನ ಸಹಕಾರಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿದ್ದಾರೆ. ಇವರಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದವರಲ್ಲಿ ಕೆ.ಚನ್ನಬಸವನಗೌಡ, ಮರಿಸ್ವಾಮಯ್ಯ ಮಠದ ಪಾಟೀಲ, ಅಗಡಿ ಸಂಗಣ್ಣ, ಪತ್ತಿಕೊಂಡ ಗುರುನಾಥಪ್ಪ ಮೊದಲಾದ ಗಣ್ಯರು.

ಜೊತೆಗೆ ರೈತರ ಹಣಕಾಸಿನ ಅನುಕೂಲಕ್ಕಾಗಿ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕನ್ನು ಹೊಸಪೇಟೆಯಲ್ಲಿಯೇ ಪ್ರಾರಂಭಿಸಲು ಕಾರಣರಾದವರು ನಾಗನಗೌಡರು. ಇಂದು ಈ ಬ್ಯಾಂಕು ಅನೇಕ ಶಾಖೆಗಳನ್ನು ಹೊಂದಿದ್ದು ರೈತರ ಆಶಾಕಿರಣವಾಗಿದೆ. ೯ ವರ್ಷ ಬೋರ್ಡ ಅಧ್ಯಕ್ಷರಾಗಿ ಜಿಲ್ಲೆಯು  ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಸದೃಢಗೊಳ್ಳಲು ಹಲವು ಯೋಜನೆಗಳನ್ನು ರೂಪಿಸಿದ ಗೌಡರು ವಿಶೇಷವಾಗಿ ಪ್ರಾಥಮಿಕ, ಪ್ರೌಢ ಶಾಲೆಗಳ ಸ್ಥಾಪನೆ, ಗೃಹ ಕೈಗಾರಿಕೆ, ಹಿಂದುಳಿದವರ, ದೀನ ದಲಿತರ ಉದ್ಧಾರಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಪುರಸಭಾ ಅಧ್ಯಕ್ಷರಾಗಿ ಹೊಸಪೇಟೆ ನಗರಕ್ಕೂ ಗೌಡರ ಸೇವೆ ಸಂದಿದೆ. ಇವರ ಅವಧಿಯಲ್ಲಿ ಹೊಸಪೇಟೆ ನಗರದಲ್ಲಿ ರಸ್ತೆ ಸುಧಾರಣೆ, ಒಳಚರಂಡಿ ವ್ಯವಸ್ಥೆ, ಬೀದಿ ದೀಪಗಳು, ಪ್ರಾಥಮಿಕ ಪ್ರೌಢ ಶಾಲೆಗಳ ಸ್ಥಾಪನೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಆರಂಭಿಸಲಾಯಿತು.

ಉ. ತುಂಗಭದ್ರಾ ಆಣೆಕಟ್ಟು ನಿರ್ಮಾಣ

ತುಂಗಭದ್ರಾ ನದಿಗೆ ಹೊಸಪೇಟೆ ಸಮೀಪ ಕಟ್ಟಿರುವ ಆಣೆಕಟ್ಟು ಕರ್ನಾಟಕ ಮತ್ತು ಆಂಧ್ರಪ್ರದೇಶದ ರೈತರ ಆಶಾಕಿರಣ. ೧೯೫೩ರಲ್ಲಿ ಈ ಆಣೆಕಟ್ಟು ಪೂರ್ಣಪ್ರಮಾಣದಲ್ಲಿ ನಿರ್ಮಾಣಗೊಂಡು ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ ಜವಾಹರಲಾಲ್ ನೆಹರು ಅವರಿಂದ ಉದ್ಘಾಟನೆಗೊಂಡು ರಾಷ್ಟ್ರಕ್ಕೆ ಸಮರ್ಪಣೆಯಾಯಿತು. ಆ ಸಂದರ್ಭದಲ್ಲಿ ನಾಗನಗೌಡರು, ಮ.ಮ.ಪಾಟೀಲ ಮುಂತಾದವರು ಗಿಣಿಗೇರಿಯ ಹತ್ತಿರ ತಾತ್ಕಾಲಿಕವಾಗಿ ನಿರ್ಮಿಸಿದ ವಿಮಾನ ನಿಲ್ದಾಣದಲ್ಲಿ ನೆಹರೂ ಅವರನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಹಾಗೆಯೇ ಟೇಕೂರು ಸುಬ್ರಮಣ್ಯಂ ತುಂಗಭದ್ರಾ ಆಣೆಕಟ್ಟು ನಿರ್ಮಾಣದ ಪರಿಶೀಲನೆಗಾಗಿ ಬಂದಾಗ ನಾಗನಗೌಡರು ಉಪಸ್ಥಿತರಿದ್ದು ಪ್ರಗತಿಯ ವಿವರಗಳನ್ನು ನೀಡುತ್ತಿದ್ದರು. ೨೭.೬.೧೯೫೫ರಂದು ಭಾರತದ ರಾಷ್ಟ್ರಪತಿಗಳಾಗಿದ್ದ ಡಾ.ರಾಜೇಂದ್ರಪ್ರಸಾದ್ ಅವರು ತುಂಗಭದ್ರಾ ಜಲಾಶಯದ ಕಾರ್ಯಕ್ರಮಕ್ಕೆಂದು ಆಗಮಿಸಿದ್ದರು. ಆಗ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ, ಆಂಧ್ರಪ್ರದೇಶದ ಲೋಕೋಪಯೋಗಿ ಸಚಿವ ಅಚ್ಚಣ್ಣ ಅವರೊಂದಿಗೆ ನಾಗನಗೌಡರು ರೇಲ್ವೆನಿಲ್ದಾಣದಲ್ಲಿ ಉಪಸ್ಥಿತರಿದ್ದು ರಾಷ್ಟ್ರಪತಿಗಳನ್ನು ಬರಮಾಡಿಕೊಂಡು ತುಂಗಭದ್ರ ಜಲಾಶಯ,  ಹಂಪೆ, ಆನೆಗೊಂದಿ ಇತ್ಯಾದಿ ಸ್ಥಳಗಳನ್ನು ತೋರಿಸಿದರು. ಮರುದಿನ ಹೊಸಪೇಟೆಯ ನಗರಸಭೆಯ ಬಯಲು ಜಾಗೆಯಲ್ಲಿ ಸಾರ್ವಜನಿಕ ಸಭೆಯನ್ನು ಗೌಡರು ಏರ್ಪಡಿಸಿದ್ದರು. ಈ ಸಭೆಯಲ್ಲಿ ರಾಷ್ಟ್ರಪತಿಯವರನ್ನು ಒಳಗೊಂಡಂತೆ ಅನೇಕ ಮಂತ್ರಿಮಹೋದಯರು, ಸ್ಥಳೀಯ ಗಣ್ಯಮಾನ್ಯರು ಪಾಲ್ಗೊಂಡು ಮಾತನಾಡಿದರು.

ಈ ಆಣೆಕಟ್ಟು ನಿರ್ಮಾಣವಾಗುವಾಗ ನಾಣಿಕೆರೆ ಹಾಗೂ ಅದರ ಸುತ್ತಮುತ್ತಲಿನ ಮೂವತ್ತುಮೂರು ಹಳ್ಳಿಗಳು ಮುಳುಗಡೆಯಾಗಿವೆ. ಈ ಜನರ ಪುನರ್ವಸತಿ ಕಾರ್ಯಕ್ಕೆ ೧೯೪೫ರಲ್ಲಿ ಮನೆ ಹೊಲಗಳಿಗೆ ಪರಿಹಾರ ಧನ ನೀಡಬೇಕೆಂದು ನಿರ್ಣಯಿಸಲಾಯಿತು. ಆಗ ತಾನೇ ಒಂದನೆಯ ಮಹಾಯುದ್ಧ ಮುಗಿದಿದ್ದರೂ ಬೆಲೆ ಏರಿಕೆಯಿಂದ ರೈತರು ತುಂಬ

ಕಂಗಾಲಾಗಿದ್ದರು. ಸರ್ಕಾರ ಕೊಟ್ಟ ಧನಪರಿಹಾರ ಎಳ್ಳಷ್ಟೂ ಸಾಲಲಿಲ್ಲ. ಇದನ್ನು ಪ್ರತಿಭಟಿಸಲೆಂದೇ ನಾಗನಗೌಡರ ಅಧ್ಯಕ್ಷತೆಯಲ್ಲಿ ಪಂತುಲು ರಾಮಚಂದ್ರರಾವ್, ಮುದುಗಲ್ ವೆಂಕೋಬಣ್ಣ ಶೆಟ್ಟಿ, ಸೊಂಡೂರು ಶೇಷಗಿರಿ ಆಚಾರ್ ಹಾಗೂ ಮ.ಮ.ಪಾಟೀಲ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಮದ್ರಾಸಗೆ ತೆರಳಿ ಸರಕಾರಕ್ಕೆ ಮನವಿ ಸಲ್ಲಿಸಿತು. ಆ ಮನವಿಗೆ ಸ್ಪಂದಿಸಿದ ಸರ್ಕಾರ ರೈತರಿಗೆ ಸೂಕ್ತ ಪರಿಹಾರವನ್ನು ಮಂಜೂರು ಮಾಡಿತು. ಅಲ್ಲದೇ ೯.೮.೧೯೬೨ರಂದು ಕೇಂದ್ರ ಸರ್ಕಾರದ ಹಣಕಾಸಿನ ಕಾರ್ಯದರ್ಶಿ ಶ್ರೀ ಚಿತಾಲ್‌ರವರು ತುಂಗಭದ್ರಾ ಪ್ರವಾಹದಿಂದಾದ ನಷ್ಟವನ್ನು ಸಮೀಕ್ಷೆ ಮಾಡಲು ಆಗಮಿಸಿದ್ದರು. ಆ ಸಂದರ್ಭದಲ್ಲಿ ನಾಗನಗೌಡ, ಚನ್ನಬಸವನಗೌಡ ಮುಂತಾದವರು ಹಂಪಸಾಗರ, ಮುದ್ಲಾಪುರ ತಾಂಡಾ, ನವಲಿ, ಕೊಂಬಳಿ ಮೊದಲಾದ ಗ್ರಾಮಗಳಿಗೆ ಕರೆದುಕೊಂಡು ಹೋಗಿ ಆದ ನಷ್ಟವನ್ನು ಕಾರ್ಯದರ್ಶಿಯವರಿಗೆ ತೋರಿಸಿಕೊಟ್ಟರು. ಇದರಿಂದ ತುಂಗಭದ್ರಾ ಮಂಡಳಿಯವರು ಪ್ರವಾಹ ಸಂತ್ರಸ್ಥರಿಗೆ ಪರಿಹಾರ ಮಂಜೂರು ಮಾಡಿದರು. ಅಲ್ಲದೇ ಜಮೀನು ಕಳೆದುಕೊಂಡವರಿಗೆ ಜಮೀನು ಸ್ವಾಧೀನ ಪಡಿಸಿಕೊಂಡು ಪರಿಹಾರ ನೀಡಿದ್ದನ್ನು ಚನ್ನಬಸವನಗೌಡರು ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ್ದಾರೆ.

**ಊ. ಶೈಕ್ಷಣಿಕ ಸಾಧನೆಗಳು**

ನಾಡಿನ ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣ ದೊರಕಬೇಕು. ಅಂದಾಗ ಮಾತ್ರ ನಮ್ಮ ದೇಶ ಪ್ರಗತಿಪಥದತ್ತ ಸಾಗಲು ಅನುಕೂಲವಾಗುತ್ತದೆ. ವಿಶೇಷವಾಗಿ ದಲಿತರಿಗೆ ಬಡವರಿಗೆ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಶಿಕ್ಷಣ ಕೊಡಿಸಬೇಕೆಂಬ ಕನಸನ್ನು ಕಂಡವರಲ್ಲಿ ನಾಗನಗೌಡರು ಒಬ್ಬರು. ಹೊಸಪೇಟೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರಾಥಮಿಕ ಪ್ರೌಢಶಾಲೆಗಳನ್ನು ತೆರೆಯಬೇಕೆಂಬ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಿದರು. ಆ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸರಕಾರ ಹೊಸಪೇಟೆ ಹಗರಿಬೊಮ್ಮನಹಳ್ಳಿ ಹಡಗಲಿ ಮೊದಲಾದ ತಾಲೂಕುಗಳ ಗ್ರಾಮಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸರಕಾರ ಆರಂಭಿಸಿತು. ಇಂಥ ಎಷ್ಟೋ ಶಾಲೆಗಳ ಉದ್ಘಾಟನೆಯನ್ನು ನಾಗನಗೌಡರು ನೆರವೇರಿಸಿದ್ದನ್ನು ಆ ಶಾಲೆಯ ಇತಿಹಾಸ ದಿಂದ ತಿಳಿದುಕೊಳ್ಳಬಹುದಾಗಿದೆ. ಹೊಸಪೇಟೆಯ ಮುನಸಿಪಲ್ ಪ್ರೌಢಶಾಲೆಯನ್ನು ಸ್ಥಾಪಿಸುವಲ್ಲಿ ನಾಗನಗೌಡರ ಶ್ರಮ ದೊಡ್ಡದು. ಮಂತ್ರಿಯಾಗಿದ್ದಾಗ ಆ ಶಾಲೆಯ ಆರಂಭೋತ್ಸವ ಸಮಾರಂಭ ಅವರ ಅಧ್ಯಕ್ಷತೆಯಲ್ಲಿ ನಡೆದದ್ದನ್ನು ಅಲ್ಲಿನ ಶಿಲಾನ್ಯಾಸ ಕಲ್ಲಿನಲ್ಲಿ ದಾಖಲಿಸಲಾಗಿದೆ.

ಹಾಗೆಯೇ ನಾಗನಗೌಡರು ಜಿಲ್ಲಾ ಬೋರ್ಡ ಅಧ್ಯಕ್ಷರಾಗಿದ್ದಾಗ ಅಂದರೆ ೧೯೪೫ರಲ್ಲಿ ಹಡಗಲಿಯಲ್ಲಿ ಬೋರ್ಡ ವತಿಯಿಂದ ಪ್ರೌಢಶಾಲೆಯನ್ನು ಸ್ಥಾಪಿಸಲಾಗಿತ್ತು. ಷರತ್ತಿನ ಪ್ರಕಾರ ಪ್ರೌಢಶಾಲಾ ಸಮಿತಿಯವರು ಮಾಡಬೇಕಾದ ಕೆಲಸವನ್ನು ಪೂರೈಸದ ಕಾರಣ ಮಾನ್ಯತೆ ತಪ್ಪಿಹೋಗಿತ್ತು. ಮತ್ತೆ ೧೯೪೭ರಲ್ಲಿ ನಾಗನಗೌಡರು ಹಡಗಲಿಯ ಪ್ರಮುಖರನ್ನು ಕರೆಯಿಸಿ

ಷರತ್ತು ಪ್ರಕಾರ ಸಮಿತಿಯವರು ಅನುಕೂಲ ಮಾಡಿಕೊಟ್ಟರೆ ಪುನಃ ಶಾಲೆಯನ್ನು ಆರಂಭಿಸಲು ಆದೇಶ ಕೊಡುತ್ತೇವೆ ಎಂದು ಹೇಳಿದರು. ಹಾಗೆಯೇ ೧೦.೩.೧೯೬೮ರಂದು ಮಲ್ಲಾಪುರ ತಾಲೂಕು ಪ್ರಾಥಮಿಕ ಶಿಕ್ಷಕರ ಹಾಗೂ ಶಾಲಾ ಸುಧಾರಣ ಸಮಿತಿ ಸದಸ್ಯರ ಸಮ್ಮೇಳನದಲ್ಲಿ ಭಾಗವಹಿಸಿ ಸರ್ವರಿಗೂ ಶಿಕ್ಷಣ, ಶಿಕ್ಷಕರ ಜವಾಬ್ದಾರಿ, ಜನರ ಸಹಕಾರ ಮಕ್ಕಳ ಆಸಕ್ತಿಯ ಬಗೆಗೆ ನಾಗನಗೌಡರು ಭಾಷಣದ ಮೂಲಕ ಸಂದೇಶವನ್ನು ನೀಡಿದ್ದರು. ಹೀಗೆ ನಾಗನಗೌಡರ ಶೈಕ್ಷಣಿಕ ಆಸಕ್ತಿ ಕಾರಣವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ ಅಭಿವೃದ್ಧಿ ಕಾಣಲು ಸಾಧ್ಯವಾಯಿತು ಎಂದು ಹೇಲಿದರೆ ಅತಿಶಯೋಕ್ತಿಯಾಗಲಾರದು.

ಎ. ಆರೋಗ್ಯ ಕಾರ್ಯಗಳು

ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿಯಿದೆ. ಮನುಷ್ಯ ಆರೋಗ್ಯವಂತನಾಗಿದ್ದರೆ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ಇದಕ್ಕಾಗಿ ಸರಕಾರ ಕೋಟ್ಯಂತರ ರೂಪಾಯಿಗಳನ್ನು ಮೀಸಲಿಟ್ಟು, ಜಿಲ್ಲೆ ತಾಲೂಕು ಹೋಬಳಿ ಹಾಗೂ ಗ್ರಾಮಮಟ್ಟಗಳಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುತ್ತಲಿದೆ. ಕಾಲಕ್ಕೆ ಸಾರ್ವಜನಿಕರ ಅನುಕೂಲಕ್ಕಾಗಿ ಸರಕಾರದಿಂದ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದು ಗೌಡರ ಮತ್ತೊಂದು ಸಾಧನೆ. ಹಂಪಸಾಗರಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿಸುವಲ್ಲಿ ಗೌಡರ ಪ್ರಯತ್ನ ಶ್ಲಾಘನೀಯ. ಹಾಗೆಯೇ ವ್ಯವಸಾಯ ಮಂತ್ರಿಗಳಾಗಿದ್ದಾಗ ಕರ್ನಾಟಕದಾದ್ಯಂತ ಪಶುವೈದ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರಕಾರದಿಂದ ಮಂಜೂರಾತಿ ತೆಗೆದುಕೊಂಡು ಕಟ್ಟಡಗಳನ್ನು ನಿರ್ಮಿಸಲು ಪ್ರಯತ್ನಿಸಿದ್ದಾರೆ.

೭. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಘಟನೆಯ ನಿಷ್ಠಾವಂತ ಕಾರ್ಯಕರ್ತ

ನಾಗನಗೌಡರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಘಟನೆಯ ನಿಷ್ಠಾವಂತ ಕಾರ್ಯಕರ್ತರಾಗಿ ತಮ್ಮ ಜೀವಿತದ ಕೊನೆಯವರೆಗೂ ದುಡಿದಿದ್ದಾರೆ. ಹಳ್ಳಿಹಳ್ಳಿಗೆ ಹೋಗಿ ಕಾಂಗ್ರೆಸ್ ಸಂಘಟನೆಯನ್ನು ಬೆಂಬಲಿಸಬೇಕೆಂಬ ಕರೆಯನ್ನು ನೀಡುವುದರ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ ಬಲಗೊಳ್ಳುವಂತೆ ಮಾಡಿದ್ದಾರೆ. ೧೯೩೭ರಲ್ಲಿ ರಾಣೇಬೆನ್ನೂರಿನಲ್ಲಿ ನಡೆದ ರಾಜ್ಯಮಟ್ಟದ ಕುರುಬರ ಸಮ್ಮೇಳನದಲ್ಲಿ ನಾಗನಗೌಡರು ಅಧ್ಯಕ್ಷೀಯ ಭಾಷಣ ಮಾಡುತ್ತ "ದೇಶದ ಜನರಿಗೆಲ್ಲ ಆಹಾರ ಮತ್ತು ಬಟ್ಟೆಯನ್ನು ನೀಡುವ ಕೃಷಿಕ ಮತ್ತು ನೇಕಾರರ ಸುಧಾರಣೆಗೆ ಕಂಕಣಬದ್ಧವಾಗಿ ದುಡಿಯುತ್ತಿರುವ ಏಕೈಕ ಸಂಘಟನೆಯೆಂದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್. ಕೃಷಿಕ ಮತ್ತು ನೇಕಾರರಾಗಿರುವ ನೀವು ಕಾಂಗ್ರೆಸ್‌ನೊಂದಿಗೆ ಇರುವಂತೆ ಭಾವಿಸುತ್ತೇನೆ. ಮತ್ತು ನಾವು ನಿಷ್ಠಾವಂತರಾಗಿ ನಮ್ಮ ಬೆಂಬಲವನ್ನು ಅಧಿಕ ಸಂಖ್ಯೆಯಲ್ಲಿ ಸೇರುವುದರ ಮೂಲಕ ನೀಡಬೇಕು" ಎಂದು ಭಾರತೀಯ ಕಾಂಗ್ರೆಸ್‌ನ್ನು ಬೆಂಬಲಿಸುವಂತೆ ಜನತೆಗೆ ಕರೆ ನೀಡಿದ್ದಾರೆ.

೧೯೪೦ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ನಾಗನಗೌಡರು ಕಾರ್ಯನಿರ್ವಹಿಸಿದ್ದಾರೆ. ಅಂದು ಸದಸ್ಯರಾಗಲು ನಾಲ್ಕಾನೆ ಫೀಜನ್ನೂ ಸಹಿತ ಗೌಡರೆ ಕೊಟ್ಟು ಸದಸ್ಯತ್ವ ಮಾಡಿಸಿಕೊಳ್ಳುತ್ತಿದ್ದರು. ಅಷ್ಟೊಂದು ಗೌಡರಿಗೆ ಕಾಂಗ್ರೆಸ್ ಅಂದರೆ ಪ್ರೀತಿ ಗೌರವ ಮತ್ತು ವಿಶ್ವಾಸವಿತ್ತು. ೨೭.೮.೧೯೫೫ರಲ್ಲಿ ತುಮಕೂರು ಜಿಲ್ಲೆ ಮಧುಗಿರಿಯಲ್ಲಿ ಕಾಂಗ್ರೆಸ್‌ಕರ್ತರ ಸಭೆಯಲ್ಲಿ ಭಾಗವಹಿಸಿ ನಾಗನಗೌಡರು ಪ್ರಗತಿಪರ ವಿಚಾರಗಳನ್ನು ಮಂಡಿಸಿದ್ದರು. ೧೯೬೯ರಲ್ಲಾದ ಸಂಘಟನೆಯಲ್ಲಿನ ಒಡಕು ಅವರ ಮೇಲೆ ಆಘಾತವನ್ನುಂಟು ಮಾಡಿತು. ಬೆಂಗಳೂರಿನಲ್ಲಿ ನಡೆದ ಎ.ಐ.ಸಿ.ಸಿ ಸಂಭೆಯಲ್ಲಿ ಪಾಲ್ಗೊಂಡು ಮರಳಿ ಹೊಸಪೇಟೆಗೆ ಬರುವಾಗ ಮಾರ್ಗ ಮಧ್ಯ ಬಳ್ಳಾರಿಯಲ್ಲಿ ಕೊನೆಯುಸಿರೆಳೆದರು. ಬಹುಶಃ ಕಾಂಗ್ರೆಸ್ ಬಿರುಕಿನ ಪರಿಣಾಮ ಅವರನ್ನು ಘಾಸಿಗೊಳಿಸಿತ್ತೆಂದು ಅವರನ್ನು ಹತ್ತಿರದಿಂದ ಕಂಡವರು ಹೇಳುತ್ತಾರೆ.

### ೮. ಮದ್ರಾಸ್ ಸರಕಾರದ ಸಚಿವರಾಗಿ

ಬಳ್ಳಾರಿ ಜಿಲ್ಲೆ ಮದ್ರಾಸ ಪ್ರಾಂತಕ್ಕೆ ಒಳಪಟ್ಟ ಕಾರಣದಿಂದಾಗಿ ನಾಗನಗೌಡರು ೧೯೩೭ರಲ್ಲಿ ಮದ್ರಾಸ್ ಸರಕಾರದ ವಿಧಾನ ಪರಿಷತ್ ಸದಸ್ಯರಾಗಿ ನೇಮಕಗೊಂಡಿದ್ದರು. ಅಂದು ವಿಧಾನಪರಿಷತ್ ಸದಸ್ಯರಾಗಬೇಕೆಂದರೆ ಕನಿಷ್ಠ ವಿದ್ಯಾರ್ಹತೆ ಪದವಿ ಹೊಂದಿರಬೇಕು. ಅಥವಾ ಮೂರು ಎಕರೆ ಜಮೀನನ್ನು ಹೊಂದಿರಬೇಕು. ಕೃಷಿವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆದ ಕಾರಣ ಬಳ್ಳಾರಿ ಪ್ರದೇಶದಿಂದ ನಾಗನಗೌಡರನ್ನು ಸದಸ್ಯರನ್ನಾಗಿ ಆಯ್ಕೆಮಾಡಲಾಗಿತ್ತು. ಅವರ ಶಿಸ್ತು, ಕಾರ್ಯದಕ್ಷತೆಯನ್ನು ಮೆಚ್ಚಿ ಮದ್ರಾಸ ಸರಕಾರದ ಅಂದಿನ ಮುಖ್ಯಮಂತ್ರಿ ರಾಜಗೋಪಾಲಚಾರಿ ಅವರು ನಾಗನಗೌಡರನ್ನು ಕೃಷಿಸಚಿವರನ್ನಾಗಿ ನಿಯಮಿಸಿದ್ದರು. ಯಾವುದೇ ಸರಕಾರದಲ್ಲಿ ಕೃಷಿ ಸಚಿವಸ್ಥಾನ ಅತ್ಯಂತ ಸವಾಲಿನದಾಗಿರುತ್ತದೆ. ರೈತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವುದು, ಮಳೆ ಬೆಳೆಗಳಿಗೆ ಸಂಬಂಧಿಸಿದಂತೆ ರೈತರೊಂದಿಗೆ ಚರ್ಚಿಸುವುದು, ರೈತ ಬೆಳೆದ ಬೆಳೆಗಳಿಗೆ ಮಾರಾಟದ ವ್ಯವಸ್ಥೆ ಕಲ್ಪಿಸುವುದು, ಸೂಕ್ತಬೆಲೆ ನಿಗದಿಪಡಿಸುವುದು, ದಲ್ಲಾಳಿಗಳಿಂದ ಆಗುತ್ತಿದ್ದ ಅನ್ಯಾಯ ದೌರ್ಜನ್ಯಗಳನ್ನು ಹತ್ತಿಕ್ಕುವುದು ಇವೇ ಮೊದಲಾದ ಅನೇಕ ಸಮಸ್ಯೆಗಳಿಗೆ ಕೃಷಿ ಸಚಿವರಾದವರು ಸ್ಪಂದಿಸಿ ರೈತರಿಗೆ ಉತ್ತರ ಕೊಡಬೇಕಾಗುತ್ತದೆ. ರೈತಸಮೂಹದಿಂದ ಬಂದ ನಾಗನಗೌಡರಿಗೆ ಈ ಎಲ್ಲ ಸಮಸ್ಯೆಗಳ ಬಗೆಗೆ ಒಂದು ಸ್ಪಷ್ಟವಾದ ತಿಳುವಳಿಕೆಯಿತ್ತು. ಹೀಗಾಗಿ ಗೌಡರಿಗೆ ಕೃಷಿ ಖಾತೆ ಅರಸಿಕೊಂಡು ಬರುತ್ತಿತ್ತು. ಸಚಿವಸ್ಥಾನ ವಹಿಸಿಕೊಂಡು ಮೊದಲ ಬಾರಿಗೆ ಹೊಸಪೇಟೆಗೆ ಬಂದಾಗ ಜನರು ಅವರನ್ನು ಹಾರತುರಾಯ್ಗಿ ಯೊಂದಿಗೆ ಮೆರವಣಿಗೆಯ ಮೂಲಕ ಮನೆಗೆ ಕರೆತರಲಾಗಿತ್ತು. ಸಚಿವನೆಂಬ ಗರ್ವ ಎಳ್ಳಷ್ಟು ಅವರಲ್ಲಿ ಇರಲಿಲ್ಲ ಎಂಬುದನ್ನು ಹೊಸಪೇಟೆಯ ಅನೇಕ ಹಿರಿಯ ನಾಗರಿಕರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

೧೯೫೨ರಲ್ಲಿ ಪ್ರಥಮ ಮಹಾಚುನಾವಣೆ ನಡೆದಾಗ ಹೊಸಪೇಟೆ ವಿಧಾನಸಭಾ ಕ್ಷೇತ್ರದಿಂದ ಮದ್ರಾಸ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಯಾದರು. ನೊಗ ಹೊತ್ತುಕೊಂಡ ಜೋಡೆತ್ತು ಗೌಡರ ಚುನಾವಣೆಯ ಚಿನ್ಹೆಯಾಗಿತ್ತು. ಚುನಾವಣೆಯಲ್ಲಿ ಜಯಶಾಲಿಯಾದಾಗ ಹೊಸಪೇಟೆಯ ವಡಕರಾಯನ ಗುಡಿಯಿಂದ ಮೆರವಣಿಗೆ ಮೂಲಕ ಗೌಡರನ್ನು ಕರೆತರಲಾಗಿತ್ತು. ಆ ಸಂದರ್ಭದಲ್ಲಿ ಒಂದು ನೂರು ನೊಗ ಹೊತ್ತುಕೊಂಡ ಜೋಡೆತ್ತುಗಳನ್ನು ಮೆರವಣಿಗೆಯಲ್ಲಿ ತರಲಾಗಿತ್ತು. ವಿಧಾನಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ಕೆಲವೇ ದಿನಗಳಲ್ಲಿ ಮದ್ರಾಸ ಸರಕಾರದಲ್ಲಿ ಕೃಷಿ ಸಚಿವರಾದರು. ಇವರ ಜೊತೆಗೆ ಭಕ್ತವತ್ಸಲಂ, ಮಾಣಿಕ್ಯವೇಲು ನಾಯಕರ್, ಎ.ಬಿ.ಶೆಟ್ಟಿ ಮತ್ತು ಸಿ.ಸುಬ್ರಮಣ್ಯಂ ಸಚಿವರಾಗಿದ್ದರು. ಈ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಕೃಷಿ, ನೀರಾವರಿ, ಶಿಕ್ಷಣ ಇತ್ಯಾದಿಯಾಗಿ ಬಳ್ಳಾರಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿದ ಗೌಡರು ಸರಕಾರದಿಂದ ಮಂಜೂರಾಗುವ ಯೋಜನೆ ಗಳನ್ನು ಅನುಷ್ಠಾನಗೊಳಿಸಿರುವುದು ಅವರ ಕಾರ್ಯತತ್ಪರತೆಗೆ ನಿದರ್ಶನವಾಗಿದೆ.

ಸಚಿವರಾಗಿದ್ದ ಸಂದರ್ಭದಲ್ಲಿ ಗೌಡರು ಸರಕಾರದ ಕೆಲಸಕಾರ್ಯಗಳಿಗೆ ಮಾತ್ರ ಸರಕಾರಿ ವಾಹನವನ್ನು ಬಳಸಿಕೊಳ್ಳುತ್ತಿದ್ದರು. ಗೌಡರ ಅಳಿಯಂದಿರಾದ ವಸಂತ ಅವರು ಒಂದು ಸಲ ಮಾವನವರು ಸಚಿವರಾಗಿದ್ದಾರೆ. ಮದ್ರಾಸನ್ನು ನೋಡಿಕೊಂಡು ಬರಬೇಕೆಂದು ಸ್ನೇಹಿತರೊಂದಿಗೆ ಹೊರಟರು. ಮದ್ರಾಸ್ ರೇಲ್ವೆ ನಿಲ್ದಾಣದಲ್ಲಿ ಇಳಿದು ಗೌಡರಿಗೆ ಫೋನ ಮಾಡಿದಾಗ "ಅಲ್ಲಿಯೇ ಒಂದು ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡು ಬನ್ನಿರಿ" ಎಂದು ಹೇಳಿದರು. ಮನೆಗೆ ಬಂದ ನಂತರ ಸರಕಾರಿ ವಾಹನವನ್ನು ಸ್ವಂತ ಕೆಲಸಕ್ಕೆ ಬಳಸಬಾರದು ಎಂದು ಕಿವಿಮಾತು ಹೇಳಿದರಂತೆ. ಸಚಿವ ಸ್ಥಾನದಿಂದ ಕೆಳಗಿಳಿದಾಗಲೂ ಸಹಿತ ಮನೆಯಲ್ಲಿರುವ ಎಲ್ಲ ಸಾಮಗ್ರಿಗಳನ್ನು ಮರಳಿ ಸರಕಾರಕ್ಕೆ ಒಪ್ಪಿಸಿದರು. ಇದು ಸಚಿವರೊಬ್ಬರ ಪ್ರಾಮಾಣಿಕತೆ ಮತ್ತು ಜವಾಬ್ದಾರಿತನಕ್ಕೆ ಒಳ್ಳೆಯ ಉದಾಹರಣೆ.

## ೯. ಮೈಸೂರು ಸರಕಾರದ ಸಚಿವರಾಗಿ

೧೯೫೩ರಲ್ಲಿ ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ಹೀಗಾಗಿ ಮದ್ರಾಸಿ ಸರಕಾರದಲ್ಲಿದ್ದ ನಾಗನಗೌಡರು ಮೈಸೂರು ಸರಕಾರದಲ್ಲಿ ಕೃಷಿ ಸಚಿವರಾಗಿ ಮುಂದುವರಿಯ ಬೇಕಾಯಿತು. ನಂತರ ಕೈಗಾರಿಕೆ ಅಬಕಾರಿ ಖಾತೆ ಸಚಿವರಾಗಿಯೂ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಆಗ ಗೌಡರ ಕಾರ್ಯವ್ಯಾಪ್ತಿ ಮೈಸೂರು ರಾಜ್ಯಾದ್ಯಂತ ವಿಸ್ತರಿಸಿತು.. ವಿದ್ಯುಚ್ಛಕ್ತಿ ಉತ್ಪಾದನೆ, ಸಹಕಾರ ಸಂಘಗಳ ಸ್ಥಾಪನೆ, ಬೃಹತ್ ಮತ್ತು ಕಿರು ನೀರಾವರಿ ಯೋಜನೆಗಳ ಅನುಷ್ಠಾನ, ತೋಟಗಾರಿಕೆ, ಬೀಜ ಉತ್ಪಾದನೆ, ಪಶು ಸಂಗೋಪನೆ, ಹೈನುಗಾರಿಕೆ, ಕೃಷಿ ಮಾರುಕಟ್ಟೆ ನಿರ್ಮಾಣಗಳಂಥ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸಿದರು. ಆಗ ಕೆಂಗಲ್ ಹನುಮಂತಯ್ಯನವರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ನಾಗನಗೌಡರೊಂದಿಗೆ ಕಡಿದಾಳ ಮಂಜಪ್ಪ, ಟಿ.ಚನ್ನಯ್ಯ,

ಸಿದ್ಧವೀರಪ್ಪ, ಎ.ಜಿ.ರಾಮಚಂದ್ರ ರಾವ್, ಎಚ್.ಎಂ. ಚನ್ನಬಸಪ್ಪ ಮೊದಲಾದ ಪ್ರಮುಖರು ಸಚಿವರಾಗಿದ್ದರು.

ಸರಕಾರದ ಕೆಲಸ ದೇವರ ಕೆಲಸ ಎಂಬ ನಾಣ್ಣುಡಿಯಂತೆ ಗೌಡರು ಅತ್ಯಂತ ಸಂಯಮ, ಶಿಸ್ತು, ಅಚ್ಚುಕಟ್ಟುತನದಿಂದ ತಮಗೆ ವಹಿಸಿದ ಸಚಿವ ಖಾತೆಯನ್ನು ನಿರ್ವಹಿಸಿ ಜನರ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ಯಾವುದೇ ವಿಷಯ ಕುರಿತು ಚರ್ಚಿಸುವಾಗ ಅಂಕಿಸಂಖ್ಯೆಗಳ ಆಧಾರಸಹಿತ ಗೌಡರು ಮಾಹಿತಿ ಕೊಡುತ್ತಿದ್ದರು. ಇದಕ್ಕೆ ಅವರು ಸದನದಲ್ಲಿ ನಡೆದ ಪ್ರಶ್ನೋತ್ತರ ವೇಳೆಯಲ್ಲಿ ನೀಡುತ್ತಿದ್ದ ಸಮರ್ಪಕ ಮಾಹಿತಿ ಹಾಗೂ ಉತ್ತರಗಳ ನಿದರ್ಶನ ಗಳನ್ನು ಅವಲೋಕಿಸಬಹುದಾಗಿದೆ.

## ೧೦. ಸದನದಲ್ಲಿ ನಾಗನಗೌಡರು

ವಿಧಾನಸಭೆಯ ಅಧಿವೇಶನ ದಿನಾಂಕ ನಿಗದಿಯಾದ ದಿನದಿಂದಲೇ ಗೌಡರು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಪ್ರಗತಿ ವರದಿಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಗ್ರಾಮ, ಹೋಬಳಿ, ತಾಲೂಕು, ಜಿಲ್ಲೆ, ವಲಯ ಮಟ್ಟದಲ್ಲಿ ಕೈಕೊಂಡ ಯೋಜನೆಗಳ ಸ್ಥಿತಿಗತಿ, ಪ್ರಗತಿ ಪರಿಶೀಲನೆ ನಡೆಸಿ ಖುದ್ದು ಕ್ಷೇತ್ರಕ್ಕೆ ಭೇಟಿನೀಡಿ ಪರಿಶೀಲಿಸುತ್ತಿದ್ದರು. ಆ ಮೂಲಕ ಸಂಬಂಧಿಸಿದ ಅಧಿಕಾರಿಗಳಿಂದ ವರದಿ ಕೇಳುತ್ತಿದ್ದರು. ಸದನಕ್ಕೆ ದಾಖಲೆಗಳೊಂದಿಗೆ ಸರಿಯಾದ ಸಮಯಕ್ಕೆ ಹಾಜರಾಗುತ್ತಿದ್ದುದು ಗೌಡರ ವಿಶೇಷತೆ. ನಾಡಿನ ಯಾವುದೇ ಮೂಲೆಯಲ್ಲಿ ಕೆಲಸ ನಡೆದಿದ್ದರ ಬಗೆಗೆ ಅವರಿಗೆ ಸಂಪೂರ್ಣವಾದ ಮಾಹಿತಿ ಇರುತ್ತಿತ್ತು. ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಆಧಾರಸಮೇತವಾಗಿ ಕನ್ನಡ ಹಾಗೂ ಇಂಗ್ಲಿಷ ಭಾಷೆಗಳೆರಡರಲ್ಲಿ ಸ್ಪಷ್ಟವಾಗಿ ಉತ್ತರ ನೀಡುತ್ತಿದ್ದರು. ಉದಾಹರಣೆಗಾಗಿ ಕೆಲವು ಪ್ರಶ್ನೋತ್ತರ ಸಂದರ್ಭಗಳನ್ನು ಇಲ್ಲಿ ಗಮನಿಸಬಹುದು.

### ೧. ಟ್ರ್ಯಾಕ್ಟರಗಳನ್ನು ಮಾರಾಟ ಮಾಡಿದ ವಿಷಯದ ಮೇಲಿನ ಚರ್ಚೆ

ಕೃಷಿ ನೆರವಿಗಾಗಿ ರೈತರಿಗಾಗಿ ಟ್ರ್ಯಾಕ್ಟರಗಳನ್ನು ಮಾರಾಟ ಮಾಡಿದ ವಿಷಯದ ಮೇಲಿನ ಚರ್ಚೆಯಲ್ಲಿ ದಿನಾಂಕ ೨೬ ಮಾರ್ಚ, ೧೯೫೮ರಂದು ನಡೆದ ಪ್ರಶ್ನೋತ್ತರ ವೇಳೆಯಲ್ಲಿ ಗೌಡರು ಪಾಲ್ಗೊಂಡು ಸರ್ಕಾರದ ಪರವಾಗಿ ಸಮರ್ಥನೆ ಮಾಡಿಕೊಂಡ ರೀತಿ ಹೀಗಿದೆ.

**ಶ್ರೀ ಎ.ಭೀಮಪ್ಪನಾಯಕ್:** ವಿಳಾಸ ಕೇಳಿಲ್ಲದಿದ್ದರೂ ಪರಿಶಿಷ್ಟದ ಒಂದನೆಯ ತಖ್ತೆಯಲ್ಲಿ ಹಳೆಯ ಟ್ರ್ಯಾಕ್ಟರುಗಳನ್ನು ಕೊಂಡುಕೊಂಡಿರುವವರ ವಿಳಾಸ ಕೊಟ್ಟಿರುವುದಕ್ಕೆ ಕಾರಣವೇನು?

**ಡಾ. ಆರ್ ನಾಗನಗೌಡ:** ಇದರೊಳಗೆ ಉದ್ದೇಶವೇನೂ ಇಲ್ಲ. ಆಫೀಸರುಗಳ ಕಡೆಯಿಂದ ಪಟ್ಟಿ ಬಂದಿದ್ದರಲ್ಲಿ ಒಂದರಲ್ಲಿ ಮಾತ್ರ ಅಡ್ರೆಸ್ ಇತ್ತು. ಅದನ್ನು ಹಾಗೆಯೇ ಮುದ್ರಿಸಿದ್ದಾರೆ.

**ಶ್ರೀ ಎ.ಭೀಮಪ್ಪನಾಯಕ್:** ಈ ಸಭೆಯಲ್ಲಿ ಯಾರಾದರೂ ಈ ಪೈಕಿ ಇದ್ದರೆ ವಿಳಾಸ ಕೊಟ್ಟರೆ ಅನುಮಾನ ಬಂದೀತೆಂದು ಆ ಒಂದು ಉದ್ದೇಶದಿಂದ ಹೀಗೆ ಮಾಡಿದೆಯೇ?

**ಡಾ. ಆರ್ ನಾಗನಗೌಡ:** ಅಂಥ ಉದ್ದೇಶವೇನೂ ಇಲ್ಲ. ತಮಗೆ ಬೇಕಾದರೆ ಮೊದಲನೆಯ ತಃಖ್ತೆಗೂ ವಿಳಾಸ ಕೊಡುತ್ತೇವೆ.

**ಶ್ರೀ ಎ.ಭೀಮಪ್ಪನಾಯಕ್:** ಎಷ್ಟು ಕಂತುಗಳ ಮೇಲೆ ಹಳೆಯ ಟ್ರ್ಯಾಕ್ಟರುಗಳನ್ನು ಕೊಟ್ಟಿದ್ದೀರಿ? ಒಪ್ಪಂದದ ಪ್ರಕಾರ ಕಂತುಗಳು ಬಂದಿವೆಯೆ ?

**ಡಾ. ಆರ್ ನಾಗನಗೌಡ:** ಐದು ಕಂತುಗಳ ಮೇಲೆ ಮೊದಲು ಕೊಟ್ಟೆವು. ಆ ತರುವಾಯ ಹೋದ ವರ್ಷ ಹಳೆಯ ಟ್ರ್ಯಾಕ್ಟರುಗಳ ಮಾಲೀಕರು ಕೆಲವರು ಮನವಿ ಮಾಡಿಕೊಂಡಿದ್ದರಿಂದ ಮೊದಲೇನು ದರಕ್ಕೆ ಕೊಟ್ಟಿತ್ತೋ ಅದನ್ನು ಮಾರ್ಪಾಡು ಮಾಡಿಕೊಟ್ಟಿದೆ.

**ಶ್ರೀ ಎ.ಭೀಮಪ್ಪನಾಯಕ್:** ಇವು ಕೆಲಸ ಮಾಡುತ್ತಿವೆಯೆಂದು ಹೇಳಿದ್ದೀರಿ. ೨೫ ಗಂಟೆಗಳ ಮೇಲೆ ಒಂದೂ ಕೂಡ ಕೆಲಸ ಮಾಡಿಲ್ಲವೆಂದು ಈ ಸಭೆಯಲ್ಲಿ ನಾನು ಸವಾಲು ಹಾಕುತ್ತೇನೆ. ಅದಕ್ಕೇನು ಹೇಳುತ್ತೀರಿ ?

**ಡಾ. ಆರ್ ನಾಗನಗೌಡ:** ತೆಗೆದುಕೊಂಡು ಹೋಗುವಾಗ ವರ್ಕಿಂಗ ಆರ್ಡರಿನಲ್ಲಿದ್ದವು. ಆ ತರುವಾಯವೂ ವರ್ಕಿಂಗ ಆರ್ಡರಿನಲ್ಲಿದ್ದವು. ತೆಗೆದುಕೊಂಡು ಹೋಗಿ ಒಂದು ವರ್ಷಗಳಾಯಿತು. ಆದಕಾರಣ ಕೆಲವು ರಿಪೇರ್ಸ್ ಆಗುವುದುಂಟು. ಪಾರ್ಟ್ಸ್ ಬ್ರೇಕ್ ಆಗುವುದು ಉಂಟು. ಹಾಗಾದಾಗ ನಮಗೆ ತಿಳಿಸಿದರೆ ರಿಪೇರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

**ಶ್ರೀ ಎ.ಭೀಮಪ್ಪನಾಯಕ್:** ಇವನ್ನು ವರ್ಕಿಂಗ ಆರ್ಡರಿನಲ್ಲಿಡುವುದು ಸರ್ಕಾರದ ಜವಾಬ್ದಾರಿ. ಅದನ್ನು ಈಗಲಾದರೂ ವಹಿಸುತ್ತೀರಾ ?

**ಡಾ. ಆರ್ ನಾಗನಗೌಡ:** ಆ ಜವಾಬ್ದಾರಿ ತಮ್ಮದೇ ಆಗಿದೆ. ಸರ್ಕಾರ ಎಷ್ಟು ಮಾಡಬಹುದೋ ಅಷ್ಟನ್ನು ಮಾಡುತ್ತಿದೆ. ಸರ್ಕಾರ ಹ್ಯರ್ಡ್ ಮೆಕ್ಯಾನಿಕ್ಸ್ ಕೊಡುತ್ತಿದ್ದಾರೆ. ಮಾಲೀಕರು ಕೆಲಸ ಮಾಡುವಾಗ ಹೆಚ್ಚಿನ ಶ್ರದ್ಧೆಯಿಟ್ಟು ಕೆಲಸ ಮಾಡಬೇಕು. ಕೆಲವು ಮಾಲೀಕರು ಡ್ರೈವರುಗಳನ್ನಿಟ್ಟಿರುವ ಕಡೆ ಕೆಲಸ ಹೆಚ್ಚು ಮಾಡಲು ಅವಕಾಶವುಂಟು. ನಾನು ತಿಳಿದಿರುವ ಹಾಗೆ ಒಂದೆರಡು ಸಂದರ್ಭಗಳಲ್ಲಿ ತೊಂದರೆಯಾಗಿರಬೇಕು.

**ಶ್ರೀ ಎ.ಭೀಮಪ್ಪನಾಯಕ್:** ತೆಗೆದುಕೊಂಡು ಹೋದ ದಿವಸವೇ ಮಧ್ಯೆ ದಾರಿಯಲ್ಲಿ ನಿಂತು ಹೋಗಿವೆ. ಆ ದಿವಸದಿಂದ ಸರಿಮಾಡುವುದಕ್ಕಾಗಿಲ್ಲ. ಸರಿಯಾಗಿ ಹಳೆಯ ಟ್ರ್ಯಾಕ್ಟರುಗಳು ಕೆಲಸ ಮಾಡುತ್ತಿಲ್ಲ. ಸರ್ಕಾರದವರು ಮೋಸ ಮಾಡಿದ್ದಾರೆ ಎಂದು ಅನೇಕ ಜನರಿಂದ ಅರ್ಜಿಗಳು ತಮಗೆ ಬಂದಿಲ್ಲವೇ ?

**ಡಾ. ಆರ್ ನಾಗನಗೌಡ:** ಈಗ ಮಾನ್ಯ ಸದಸ್ಯರು ಸರ್ಕಾರದವರು ಮೋಸ ಮಾಡಿದ್ದಾರೆಂದು ಹೇಳಿದರೆ ಬಹಳ ಉತ್ಪ್ರೇಕ್ಷೆಯಾಗುತ್ತದೆ. ಅದು ತಪ್ಪಾದೀತು.

**ಶ್ರೀ ಎ.ಭೀಮಪ್ಪನಾಯಕ್:** ಅರ್ಜಿಯಲ್ಲಿ ಬರೆದಿರುವ ವಿಷಯ ಹೇಳುತ್ತಿದ್ದೇನೆ. ಕೆಟ್ಟಿದ್ದ ಕೆಲವು ಸಾಮಾನುಗಳನ್ನು, ಭಾಗಗಳನ್ನು ಸರಿಮಾಡಿ ಹಾಕಿ ಚೆನ್ನಾಗಿದೆಯೆಂದು ಸುಳ್ಳು ಹೇಳಿ

ಸ್ಟಾರ್ಟ್ ಮಾಡಿ ಕಳುಹಿಸಿದ್ದಾರೆ, ಮೋಸ ಮಾಡಿದ್ದಾರೆ ಎಂದು ಅರ್ಜಿ ಕಳುಹಿಸಿ ಖುದ್ದಾಗಿ ಡೆಪ್ಯುಟೇಷನ್ ಸಹ ಬಂದು ಹೇಳಿಲ್ಲವೇ?

**ಡಾ. ಆರ್ ನಾಗನಗೌಡ:** ಈ ಟ್ರ್ಯಾಕ್ಟರುಗಳ ಧಾರಣೆ ಹೆಚ್ಚಾಗಿದೆಯೆಂದು ಕೆಲವರು ಹೋದ ವರ್ಷ ಮನವಿ ಮಾಡಿದರು. ಅದಕ್ಕಾಗಿ ಒಂದು ಸಮಿತಿ ಏರ್ಪಾಡು ಮಾಡಿ ಈ ವಿಷಯ ಚರ್ಚೆ ಮಾಡಿ ಆ ತರುವಾಯ ಅವರಿಗೆ ರೀವೈಸ್ಡ್ ಟರ್ಮ್ಸ್ ಕೊಟ್ಟೆವು.

**ಶ್ರೀ ಎ.ಭೀಮಪ್ಪನಾಯಕ್:** ಟ್ರ್ಯಾಕ್ಟರುಗಳ ಪರಿಸ್ಥಿತಿ ಹೇಗಿದೆಯೆಂಬುದನ್ನು ನೋಡಿ ಅದರ ಮೊಬಲಗನ್ನು ರೈಟಾಫ್ ಮಾಡಬೇಕು. ಅಥವಾ ವಸೂಲು ಮಾಡಬೇಕು ಎಂದು ಟ್ರ್ಯಾಕ್ಟರ್ಸ್ ಸಮಿತಿ ಪರೀಕ್ಷಿಸಿ ವರದಿ ಮಾಡಿದೆಯೇ ?

**ಡಾ. ಆರ್ ನಾಗನಗೌಡ:** ೧೯೫೧ರಲ್ಲಿ ಈ ಟ್ರ್ಯಾಕ್ಟರುಗಳು ಬೇಕೆಂದು ಬಂದು ನೋಡಿ ಸ್ಟಾರ್ಟ್ ಮಾಡಿಸಿ ಖರೀದಿ ಮಾಡಿದರು. ಈಗ ೧೯೫೪-೫೫ರಲ್ಲಿ ಅವು ಹೀಗಿವೆ. ಆದ್ದರಿಂದ ರೈಟಾಫ್ ಮಾಡಬೇಕೆಂಬುದನ್ನು ಆಲೋಚಿಸಬೇಕೆಂದರೆ ಅದು ವ್ಯವಹಾರಕ್ಕೆ ವಿರುದ್ಧವಾಗುತ್ತದೆ.

**ಶ್ರೀ ಎ.ಭೀಮಪ್ಪನಾಯಕ್:** ಹೊಸ ಟ್ರ್ಯಾಕ್ಟರುಗಳನ್ನು ಕೊಟ್ಟಿದ್ದೀರಿ. ಅವುಗಳ ಕಂತುಗಳನ್ನಾದರೂ ಸರಿಯಾಗಿ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

**ಡಾ. ಆರ್ ನಾಗನಗೌಡ:** ಸ್ವಲ್ಪ ಸಂಖ್ಯೆ ಬಿಟ್ಟು ಮಿಕ್ಕವರೆಲ್ಲಾ ಮೊದಲನೆಯ ಕಂತನ್ನು ಕೊಟ್ಟಿದ್ದಾರೆ. ಪೂರ್ತಿಯಾಗಿ ಮೂರು ಮಂದಿ ಮಾತ್ರ ಕೊಟ್ಟಿಲ್ಲ. ಅದನ್ನು ವಸೂಲು ಮಾಡುತ್ತೇವೆ.

**ಶ್ರೀ ಎ.ಭೀಮಪ್ಪನಾಯಕ್:** ಈ ರೀತಿಯಾಗಿ ವಸೂಲು ಮಾಡುತ್ತೇವೆಂದು ಹೇಳಿ ಕೊನೆಗೆ ರೈಟಾಫ್ ಮಾಡುವ ಪರಿಸ್ಥಿತಿಗೆ ತರುವುದಕ್ಕೆ ಬದಲಾಗಿ ಯಾವ ದಿವಸ ಕಂತು ನಿಂತಿತೋ ಆ ಕೂಡಲೇ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲವೆ ?

**ಡಾ. ಆರ್ ನಾಗನಗೌಡ:** ಈಗ ೧೯ ಸಂದರ್ಭಗಳಲ್ಲಿ ಕ್ರಮತೆಗೆದುಕೊಂಡಿದ್ದಾರೆ. ಪೂರ್ಣವಾಗಿ ಏನೂ ಕೊಡದಿರುವ ಸಂದರ್ಭಗಳು ಮೂರು ಮಾತ್ರ ಇವೆ. ಅವರ ಮೇಲೆ ಕ್ರಮ ತೆಗೆದುಕೊಂಡು ನೋಟೀಸ್ ಕೊಟ್ಟಿದ್ದೇವೆ. ಇನ್ನೂ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಎ.ಭೀಮಪ್ಪನಾಯಕ್:** ಕ್ರಮವಾಗಿ ಯಾವ ಯಾವ ಕಂತುಗಳನ್ನು ವಸೂಲ್ಮಾಡಿದ್ದೀರಿ ಎನ್ನುವುದಕ್ಕೆ ನಿಮ್ಮಲ್ಲಿ ಅಂಥ ದಾಖಲೆ ಒಂದಾದರೂ ಇದೆಯೇ ಎನ್ನುವುದಕ್ಕೆ ಹೇಳಿ ನೋಡೋಣ.

**ಡಾ. ಆರ್ ನಾಗನಗೌಡ:** I have got here a statement which says 'Due date' and 'Amount paid'.

**ಶ್ರೀ ಎ.ಭೀಮಪ್ಪನಾಯಕ್:** ಅಂಥ ಬಾಕಿಗಳೊಂದನ್ನೂ ಕೂಡ ತಾವು ಆ ಡ್ಯೂ ಡೇಟಿಗೆ ಸರಿಯಾಗಿ ವಸೂಲ್ಮಾಡಿರತಕ್ಕಂಥ ಸಂದರ್ಭ ಈ ೧೯ ಕೇಸುಗಳಲ್ಲಿ ಒಂದು ಇಲ್ಲ ಅಲ್ಲವೇ?

**ಡಾ. ಆರ್ ನಾಗನಗೌಡ:** ಆ ರೀತಿ ಏನೂ ಇಲ್ಲ. ಬಾಕಿ ವಸೂಲಾಗುತ್ತಿದೆ. 'Amount paid' , from that I understand it has been paid.

**ಶ್ರೀ ಎ.ಭೀಮಪ್ಪನಾಯಕ್:** ಈಗಲಾದರೂ ತಾವು ಆ ಹಳೇ ಟ್ರ್ಯಾಕ್ಟರುಗಳ ಪೈಕಿ ಯಾವ ಯಾವವು ಕೆಲಸ ಮಾಡುತ್ತಿಲ್ಲವೋ ಅಂಥವುಗಳ ಬಗ್ಗೆ ಈ ಬಾಕಿಯನ್ನು ವಸೂಲ್ಮಾಡತಕ್ಕದ್ದು ಧರ್ಮವಲ್ಲ, ನ್ಯಾಯವಲ್ಲ ಎಂಬ ವಿಷಯಗಳನ್ನು ಪರಿಶೀಲಿಸಲು ತಾವು ಒಂದು ಸಮಿತಿಯನ್ನು ನೇಮಕ ಮಾಡಿ ಅವರಿಂದ ಒಂದು ವರದಿಯನ್ನು ತರಿಸಿಕೊಳ್ಳಲು ಪ್ರಯತ್ನ ಪಡುತ್ತೀರಾ ?

**ಡಾ. ಆರ್ ನಾಗನಗೌಡ:** I said we had a committee last year and we have gone through the whole thing and we have done whatever was found reasonable and agreeable to the whole committee and the Government have accepted the results.

**Mr.Speaker:** Question time is over.

## ೨. ಅರಣ್ಯ ವಿಷಯದ ಮೇಲಿನ ಚರ್ಚೆ

೨೫.೩.೧೯೫೭ರಂದು ಅರಣ್ಯ ಇಲಾಖೆ(Forest Department)ಗೆ ಸಂಬಂಧಿಸಿದಂತೆ ನಡೆದ ಪ್ರಶ್ನೋತ್ತರ ವೇಳೆಯಲ್ಲಿ ಸಚಿವರಾದ ನಾಗನಗೌಡರು ಸದಸ್ಯರ ಪ್ರಶ್ನೆಗಳಿಗೆ ನೀಡಿದ ಉಪಯುಕ್ತ ಮಾಹಿತಿಯನ್ನೊಳಗೊಂಡ ಉತ್ತರ ಹೀಗಿದೆ.

**ಡಾ. ಆರ್ ನಾಗನಗೌಡ:** ಸ್ವಾಮಿ, ಇಷ್ಟು ಹೊತ್ತಿನವರೆಗೆ ಮಾನ್ಯ ಸದಸ್ಯರು ಎಲ್ಲರೂ ಅಡವಿ ಸಂಪತ್ತನ್ನು ಹೆಚ್ಚಿಸಬೇಕೆಂಬ ವಿಷಯದಲ್ಲಿ ಬಹಳ ತೀವ್ರವಾದ ಆಸಕ್ತಿಯನ್ನು ತೋರಿಸಿ ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದಕ್ಕೆ ನಾನಾ ವಿಧವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅವೆಲ್ಲಕ್ಕೂ ಒಂದೊಂದಾಗಿ ತೆಗೆದುಕೊಂಡು ಜವಾಬು ಹೇಳುವುದಕ್ಕೆ ಪ್ರಾರಂಭಿಸಿದರೆ ಬಹಳ ಕಾಲ ಹಿಡಿಯಬಹುದು. ಆದ್ದರಿಂದ ಪೂರ್ಣವಾಗಿ ಎಲ್ಲಕ್ಕೂ ಈಗ ಜವಾಬು ಹೇಳುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ ಅಂದುಕೊಂಡಿದ್ದೇನೆ. ಆದಕಾರಣ ಕೆಲವು ಮುಖ್ಯವಾದ ಅಂಶಗಳೇನಿವೆಯೋ ಅವುಗಳ ವಿಷಯಗಳನ್ನು ಮಾತ್ರ ಹೇಳಿ ಆ ತರುವಾಯ ಮಾನ್ಯ ಸದಸ್ಯರೇನು ಹೇಳಿದ್ದಾರೋ ಆ ಪ್ರತಿಯೊಂದು ಅಂಶಕ್ಕೂ ನನ್ನ ತೀವ್ರವಾದ ಗಮನವನ್ನು ಕೊಟ್ಟು, ಯಾವ ವಿಧವಾಗಿ ಅವುಗಳ ಬಗ್ಗೆ ಚರ್ಯೆ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತಿದ್ದೇನೆ.

ಮುಖ್ಯವಾಗಿ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತಬೇಕೆಂದಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಫಾರೆ ಸ್ಟೇಷನ್ನಿಗೆ ಬಹಳ ಹೆಚ್ಚಿನ ಹಣ ಕೊಡುವುದಕ್ಕೂ ಈಗ ಏರ್ಪಾಡು ಮಾಡಿದ್ದೇವೆಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಈಗ ನಾವು ೮೫ ಲಕ್ಷ ರೂಪಾಯಿಗಳನ್ನು ಸಾಯಿಲ್ ಕಂಜರ್

ವೇಷನ್ನಿಗೂ ಮತ್ತು ಅಫಾರೆ ಸ್ಟೇಷನ್ನಿಗೂ ಮೀಸಲಾಗಿಟ್ಟಿದ್ದೇವೆ. Afforestation of waste lands, pilot and administrative schemes have been included in this. ಇದರಲ್ಲಿ ಎಷ್ಟು ವಿಸ್ತೀರ್ಣ ನಾವು ಅಫಾರೆಸ್ಟೇಷನ್ ಮಾಡುತ್ತೇವೆಂದರೆ ಮೈದಾನ ಪ್ರದೇಶದಲ್ಲಿ ಈ ಐದು ವರ್ಷಗಳಲ್ಲಿ ೬೦ ಸಾವಿರ ಎಕರೆ ಅಫಾರೆಸ್ಟೇಷನ್ ಮಾಡಬೇಕೆಂದು ಅಂದುಕೊಂಡಿದ್ದೇವೆ. ಅದೂ ಅಲ್ಲದೆ ಯಾವುದೇ ಒಂದು ಕೆಲಸ ಮಾಡುವುದಕ್ಕೂ ಒಂದು ಸ್ಕೀಂ ತಯಾರಾಗಬೇಕು. ಅದಾದ ಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಮಲೆನಾಡು ಪ್ರದೇಶದಲ್ಲಿ ೧೪ಸಾವಿರ ಎಕರೆ ಅಫಾರೆಸ್ಟೇಷನ್ ಮಾಡಬೇಕೆಂದಿದೆ. ಮೊದಲನೆ ಪಂಚವಾರ್ಷಿಕ ಯೋಜನೆ ತಯಾರಾದರೆ ಒಂದು ಲಕ್ಷ ಎಕರೆಯಾದರೂ ಅಫಾರೆಸ್ಟೇಷನ್ ಮಾಡಬೇಕೆಂದಿದ್ದೆವು; ಅಷ್ಟು ಸಾಧ್ಯವಾಗಲಿಲ್ಲ. ಅದಕ್ಕೆ ನಾನು ಬಹಳ ವಿಷಾದಪಡುತ್ತಿದ್ದೇನೆ. ಈ ವರ್ಷ ಅದನ್ನು ಏಳುಸಾವಿರ ಎಕರೆಯವರೆಗಾದರೂ ಮಾಡಲು ಪ್ರಯತ್ನಪಡುತ್ತಿದ್ದೇವೆ. ಆ ತರುವಾಯ ಮುಂದಿನ ಐದು ವರ್ಷ ಆಗುವವರೆಗೆ ಈಗ ಹೇಳಿರುವ ವಿಸ್ತೀರ್ಣ ತಯಾರು ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಅನೇಕ ಸದಸ್ಯರು ಅಫಾರೆಸ್ಟೇಷನ್ ವಿಷಯವನ್ನು ಬಹಳ ತೀವ್ರವಾಗಿ ಕಳಕಳಿಯಿಂದ ಹೇಳಿದ್ದಾರೆ. ಶ್ರೀ ಮುನಿಸ್ವಾಮಯ್ಯನವರು ಬೀಜ ಕೊಡಬೇಕೆಂದು ಹೇಳಿದ್ದಾರೆ. ಇನ್ನೊಬ್ಬ ಮಹನೀಯರು ಅಕ್ಕಪಕ್ಕದಲ್ಲಿರುವ ರೈತರಿಗೆ ಅಫಾರೆಸ್ಟೇಷನ್ ಮಾಡುವುದನ್ನು ವಹಿಸಿಬಿಡಿ ಎಂದು ಹೇಳಿದ್ದಾರೆ. ಈಗ ನಾವು ರೈತರ ಸಹಾಯ ಸಿಕ್ಕುವ ಕಡೆ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ.ಆದರೆ ಇಲ್ಲಿನವರೆಗೆ ನಮ್ಮ ಅನುಭವ ಅಷ್ಟು ಸುಖವಾಗಿಲ್ಲ. ಟಾಂಗಾ ಸಿಸ್ಟಂ ಇಟ್ಟು ಕುಮರಿ ಕಲ್ಟಿವೇಷನ್ನಿಗೆ ಕೊಟ್ಟಿರುವ ಕಡೆ ರೈತರು ಅಫಾರೆಸ್ಟೇಷನ್ ಮಾಡಿಲ್ಲ; ಕೆಲವರು ಮಾತ್ರ ಮಾಡಿದ್ದಾರೆ.

ಇನ್ನೊಂದು ವಿಷಯ. ಅಫಾರೆಸ್ಟೇಷನ್ ಜೊತೆಗೆ ಫಾರೆಸ್ಟು ಜಮೀನನ್ನು ರಲೀಸ್ ಮಾಡಿ ಎಂದು ಹೇಳಿದ್ದಾರೆ. ಹಿಂದೆ ಫಾರೆಸ್ಟ್ ಜಮೀನನ್ನು ರಲೀಸ್ ಮಾಡಬಾರದೆಂದು ಈ ಮಾನ್ಯ ಸಭೆ ಬಹುಮತದಿಂದ ತೀರ್ಮಾನ ಮಾಡಿದೆ. ಅದನ್ನು ಬಹಳ ಶ್ರದ್ಧೆಯಿಂದ ಪರಿಪಾಲನೆ ಮಾಡಿಕೊಂಡು ಬಂದಿದ್ದೇವೆ. ಇದರೊಳಗೆ ಮುಖ್ಯವಾದ ಕಾರಣವೇನೆಂದರೆ ಈಗ ನಮಗೆ ಶೇಕಡ ೧೪ರಷ್ಟು ಫಾರೆಸ್ಟ್ ಇದೆಯೆಂದು ಹೇಳುತ್ತಿದ್ದೇವೆ; ನಿಜವಾಗಿಯೂ ನೋಡಿದರೆ ಬೆಂಗಳೂರು, ತುಮಕೂರು, ಕೋಲಾರ ಈ ಪ್ರಾಂತಗಳಲ್ಲಿ ಕೇವಲ ಶೇಕಡ ಎಂಟರಷ್ಟು ಸಹ ಇಲ್ಲ. ನಾವು ಮಲೆನಾಡು ಮತ್ತು ಮೈದಾನ ಪ್ರದೇಶ ಎರಡೂ ಕೂಡಿಸಿದರೆ ಶೇಕಡ ೧೪ರಷ್ಟು ಬರುತ್ತದೆ. ತಮಗೆ ತಿಳಿದ ಹಾಗೆ ಮಲೆನಾಡು ಶೇಕಡ ೨೫ - ೩೦ಕ್ಕಿಂತ ಹೆಚ್ಚಾಗಿರುವುದರಿಂದ ಸರಾಸರಿ ಇಷ್ಟಾಗುತ್ತದೆ.

ಆಮೇಲೆ ಭೂಮಿ ರೈತರಿಗೆ ಕೊಡಬೇಕೆಂದು ಹೇಳಿದ್ದಾರೆ. ಅಲ್ಲಿ ಭೂಮಿ ತೆಗೆದುಕೊಂಡು ಮಳೆಯಲ್ಲಿ ಬಿಸಿಲಲ್ಲಿ ಕೆಲಸ ಮಾಡಿದರೂ ಪೈರು ಏಳುವುದಿಲ್ಲ. ಪೈರಾಗುವುದಕ್ಕೆ ಚೆನ್ನಾಗಿ ಮಳೆ ಬರಬೇಕು. ಭೂಮಿ ಬೆಳೆದರೆ ತಾನೆ ಸಾರ್ಥಕವಾಗುವುದು; ಪೈರು ಬೆಳೆಯದಿರುವ ಸ್ಥಿತಿ

ಕ್ರಿಯೇಟ್ ಮಾಡಿದರೆ ಭೂಮಿಯನ್ನು ತೆಗೆದುಕೊಂಡು ಮಾಡುವುದೇನು ? ಇಲ್ಲಿಂದ ಬಳ್ಳಾರಿ ರಸ್ತೆಯಲ್ಲಿ ಹೋದರೆ ಅನೇಕ ಪ್ರದೇಶಗಳಿವೆ. ಅಲ್ಲಿ ಏನೂ ಬೆಳೆದಿಲ್ಲ. ಹೆಚ್ಚಾಗಿ ಮಳೆಯಾಗಿ ಅಲ್ಲೇನಾದರೂ ಬೆಳೆದರೆ ಸಾರ್ಥಕವಾಗುತ್ತದೆ. ಆದಕಾರಣ ಬೇಕಾದಷ್ಟು ಫಾರೆಸ್ಟು ಇರಬೇಕು. ಕೆಲವು ಕಡೆ ಎರಡು ಎಕರೆ ಕೊಡಿ ಎಂದು ಕೆಲವರು ಸದಸ್ಯರು ಹೇಳಿದರು. ಈಗ ಒಂದು ಕಡೆ ಕೊಡಲು ಷುರುಮಾಡಿದರೆ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. It is a matter of degree. ಕೆಲವು ಕಡೆ ನೂರು ಎಕರೆ ಪ್ರದೇಶವಿದೆ. ಅಲ್ಲಿ ಫಾರೆಸ್ಟಾಗುವುದಿಲ್ಲ. ಅಂಥಾದ್ದನೇಕ ವ್ಯವಸಾಯಕ್ಕೆ ಕೊಡಬಾರದು ಎಂದು ಕೇಳುತ್ತಾರೆ. ಆದರೆ ಫಾರೆಸ್ಟ್ ಬೆಳೆಯುವುದಕ್ಕೆ ಲಾಯಕ್ಕಾಗಿಲ್ಲದ ಭೂಮಿಯಲ್ಲಿ ಭತ್ತ, ರಾಗಿ ಬೆಳೆಯಲು ಸಾಧ್ಯವೇ? ಇವರು ಮಲೆನಾಡಿನ ವಿಷಯ ಹೇಳುತ್ತಿದ್ದಾರೆ. ಆ ರೀತಿಯಾಗಿ ನಮ್ಮ ದೇಶದಲ್ಲಿ ಒಂದು ಕಾಡೂ ಕೂಡ ಬೆಳೆಯುವುದಿಲ್ಲ. ಹೌದು, ಸಾಗು ಮಾಡಿದರೆ ಆಗುತ್ತದೆ. ಅದೇ ರೀತಿ ನಮ್ಮ ಫಾರೆಸ್ಟ್ ಇಲಾಖೆಯವರೂ ಕೂಡಾ ಅಂಥ ಪ್ರದೇಶದಲ್ಲಿ ಒಂದು ಗುಂಡಿ ತೋಡಿ, ಬೀಜ ನೆಟ್ಟರೆ ಅಂಥ ಪ್ರದೇಶದಲ್ಲೂ ಗಿಡಗಳು ಬೆಳೆಯುತ್ತವೆ. ಇನ್ನು ಶ್ರೀ ಆರ್ ಮುನಿಸ್ವಾಮಯ್ಯನವರು ಅಲ್ಲಾಳಸಂದ್ರದ ಫಾರೆಸ್ಟ್ ವಿಚಾರ ಹೇಳಿದರು. ಆ ಜಮೀನನ್ನು ವ್ಯವಸಾಯಗಾರರಿಗೆ ಕೊಟ್ಟಿದ್ದೇವೆ. ಆದರೆ ಹಾಗೆ ಅಲ್ಲಿ ಜಮೀನನ್ನು ಎಂಥವರಿಗೆ ಕೊಡಲಾಗಿದೆ ಎಂದರೆ ಯಾರು ಯಾರು ತಿಪ್ಪಗೊಂಡನಹಳ್ಳಿ ಕೆರೆಯ ಕಟ್ಟಡದ ಸಂಬಂಧದಲ್ಲಿ ಜಮೀನನ್ನು ನೀರು ಮುಳುಗಡೆ ಮಾಡಿಕೊಂಡಿದ್ದರೋ ಅಂಥವರಿಗೆ ಮಾತ್ರ ಅಲ್ಲಾಳಸಂದ್ರ ಫಾರೆಸ್ಟಿನಲ್ಲಿ ಜಮೀನು ಕೊಡುವಂತೆ ಒಂದು ಏರ್ಪಾಡು ಮಾಡಿಕೊಂಡಿದ್ದೇವೆ. ಇದೇ ರೀತಿಯಾಗಿ ಇನ್ನೂ ಕೆಲಕೆಲವು ಪ್ರದೇಶಗಳಲ್ಲಿ ದೊಡ್ಡ ದೊಡ್ಡ ರಿಜರ್ವಾಯರ್ ಇತ್ಯಾದಿಗಳನ್ನು ನಿರ್ಮಿಸತಕ್ಕ ಸಂದರ್ಭಗಳಲ್ಲಿ ಯಾರ ಯಾರ ಜಮೀನುಗಳು ನೀರು ಮುಳುಗಡೆ ಆಗಿರುತ್ತವೋ ಅಂಥವರುಗಳಿಗೆ ಮಾತ್ರ ಈ ಜಂಗಲುಗಳಲ್ಲಿ ಜಮೀನು ಕೊಡಬೇಕೆಂದು ಅಂದುಕೊಂಡಿದ್ದೇವೆ. ಈ ಜನರಿಗೆ ಜಮೀನು ಕೊಡುವುದಕ್ಕೆ ಇಂಥ ಕಡೆ ಬಿಟ್ಟರೆ ಬೇರೆ ಎಲ್ಲಿಯೂ ಅವಕಾಶವಿಲ್ಲ. ಅಂಥ ನಿರ್ವಾಹವಿಲ್ಲದ ಸಂದರ್ಭಗಳು ಬಂದಾಗ ಈ ಕಾಡುಗಳಲ್ಲಿಯೇ ಅವರಿಗೆ ಜಮೀನು ಕೊಡಬೇಕಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ: ಜಮೀನಿಲ್ಲದವರಿಗೆ ಕೊಟ್ಟರೆ ಪರವಾ ಇಲ್ಲ. ಹಾಗೆ ಮಾಡದೆ ದೊಡ್ಡ ದೊಡ್ಡ ಜಮೀನ್ದಾರರಂಥ ನಮ್ಮಂಥವರಿಗೇ ತಾವು ಜಮೀನು ಕೊಡುತ್ತಿದ್ದೀರಿ. ಹೀಗೆ ಹೇಳಿ ಹಾಗೆ ಮಾಡತಕ್ಕದ್ದು ಅನ್ಯಾಯವಲ್ಲವೇ ಎಂದು ಕೇಳುತ್ತೇನೆ.

**ಡಾ. ಆರ್ ನಾಗನಗೌಡ:** ಈ ರೀತಿಯಾಗಿ ಏನಾದರೂ ಅಲ್ಲಾಳಸಂದ್ರ ಫಾರೆಸ್ಟಿನಲ್ಲಿ ಆಗಿದ್ದರೆ ಅದನ್ನು ನಾನು ವಿಚಾರ ಮಾಡುತ್ತೇನೆ. ಇನ್ನು ಶ್ರೀ ಹುಚ್ಚಮಾಸ್ತಿಗೌಡರು ಹೇಳಿದರು - ನೀರು ಮುಳುಗಡೆ ಆಗತಕ್ಕಂಥ ಪ್ರದೇಶದಲ್ಲಿರುವ ಮರಗಳನ್ನು ತೆಗೆಯುತ್ತಿಲ್ಲ ಎಂದು. ಆದರೆ ನಾವು ಈಗಾಗಲೇ ಅನೇಕ ರಿಜರ್ವಾಯರ್‌ಗಳನ್ನು ಕಟ್ಟಿಸತಕ್ಕ ಪ್ರದೇಶಗಳಲ್ಲಿ ನೀರು ಮುಳುಗಡೆಯಾಗತಕ್ಕಂಥ ಪ್ರದೇಶದಲ್ಲಿರುವ ದೊಡ್ಡ ದೊಡ್ಡ ಬೆಲೆ ಬಾಳತಕ್ಕಂಥ

ಮರಗಳನ್ನೆಲ್ಲಾ ತೆಗೆಸುತ್ತಿದ್ದೇವೆ. ನುಗು ಇತ್ಯಾದಿ ರಿಜರ್ವಾಯರ್ ಪ್ರದೇಶಗಳಲ್ಲಿ ಆ ರೀತಿ ನಡೆಸುತ್ತಿದ್ದೇವೆ. ಇನ್ನು ಶ್ರೀ ಪಿ.ಆರ್.ರಾಮಯ್ಯನವರು ವಿಚಾರ ಪ್ರಸ್ತಾಪ ಮಾಡಿದ್ದಾರೆ. Prevention of soil erosion and conservation of soil ಬಗ್ಗೆ ನಾವು ಈಗಾಗಲೇ ಖಾಯಂ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ಕೇಂದ್ರ ಸರಕಾರದವರು ಈ ರಿಸರ್ಚ ಬಾಬಿನಲ್ಲಿ ನಮಗೆ ಸಹಕಾರ ನೀಡುವುದಾಗಿ ಭರವಸೆ ಕೊಟ್ಟಿದ್ದಾರೆ. ಆದರೆ ಆ ಸ್ಕೀಮು ಇನ್ನೂ ಜಾರಿಗೆ ಬಂದಿಲ್ಲ. ಇನ್ನು ಶ್ರೀಮಾನ್ ದೇವರಾಜ ಅರಸರು ಟ್ರಿಟಿಮೆಂಟ್ ಆಫ ಟಿಂಬರ್ ಮತ್ತು ಬ್ಯಾಂಬು ಟ್ರಾನ್ಸ್ಪೋರ್ಟು ವಿಚಾರ ಹೇಳಿದರು. ನಮ್ಮಲ್ಲಿ ಟಿಂಬರ್ ಟ್ರಿಟ್‌ಮೆಂಟ್ ವಿಚಾರ ಬಹಳ ಯಶಸ್ವಿಯಾಗಿ ಆಗಿದೆ. ಆದರೆ ಬೊಂಬುಗಳನ್ನು ಸಾಗಿಸತಕ್ಕ ಖರ್ಚು ಬಹಳ ಬರುತ್ತದೆ. ಈ ದಿವಸ ಈ ಬೊಂಬುಗಳು ನಮ್ಮ ಬಳ್ಳಾರಿಗೆ ಬಂದರೆ ಅಲ್ಲಿ ನಾವು ಒಂದೊಂದಕ್ಕೆ ಒಂದೂವರೆ ರೂಪಾಯಿ ಕೊಡಬೇಕಾಗಿರುತ್ತದೆ. ಆದರೆ ಅವೇ ಬೊಂಬು ಶಿವಮೊಗ್ಗಾ ಕಾಡುಗಳಲ್ಲಿ ವಿಶೇಷವಾಗಿ ಹಾಳಾಗುತ್ತಿದೆ. ಅಂತೂ ಇದರ ಟ್ರಾನ್ಸ್‌ಪೋರ್ಟ್ರೇಷನ್ ಬಹಳ ದುಬಾರಿ.

**ಶ್ರೀ ಡಿ.ದೇವರಾಜ ಅರಸ್:** ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸುತ್ತಿರುವುದು ಈ ಬೊಂಬುಗಳ ಟ್ರಾನ್ಸ್‌ಪೋರ್ಟು ಬಹಳ ಕಷ್ಟವಾಗುತ್ತದೆ ಎಂದು. ಆದರೆ ಅದೇ ಕಷ್ಟ ಟಿಂಬರ್ ಟ್ರಾನಸ್ಪೋರ್ಟೇಷನ್ನಿಗೂ ಇದೆ. ಆದರೆ ಈ ಎರಡನ್ನೂ ಹೋಲಿಸಿ ನೋಡಿದರೆ ಟಿಂಬರ್‌ಗಿಂತ ಬೊಂಬುಗಳ ಸಾಗಾಣಿಕೆಗೆ ಖರ್ಚು ಕಡಿಮೆ ಆಗುತ್ತದೆ ಎಂದು ನಾನು ಹೇಳುತ್ತೇನೆ.

**ಡಾ. ಆರ್ ನಾಗನಗೌಡ:** ಟಿಂಬರ್‌ನಲ್ಲಿ ಕೆಲವು ಬಹಳ ವ್ಯಾಲುಬಲ್ ಮೆಟೀರಿಯಲ್ಸ್ ಆಗುತ್ತವೆ. ಈ ದಿವಸ ಕೆಲವು ಹಳ್ಳಿಗಳಲ್ಲಿ - ಎಂದರೆ ತುಂಗಭದ್ರಾ ನದಿಯ ದಡದಲ್ಲಿರತಕ್ಕಂಥ ಗ್ರಾಮಗಳಲ್ಲಿ -ಹೋಗಿ ನೋಡಿದರೆ ಕೆಲಕೆಲವು ಮನೆಗಳಿಗೆ ಭಾರಿ ತೊಲೆಗಳನ್ನು ಹಾಕಿರುತ್ತಾರೆ. ಅವರನ್ನು ಕೇಳಿದರೆ ಅವು ತೆಪ್ಪದ ತೊಲೆಗಳು ಎಂದು ಹೇಳುತ್ತಾರೆ. ಹಾಗೆ ಅವರು ಹೇಳಲು ಕಾರಣವೇನೆಂದರೆ ಆ ತೊಲೆಗಳನ್ನು ಶಿವಮೊಗ್ಗಾ ಕಡೆಯಿಂದ ತೆಪ್ಪದ ಮೂಲಕ ಸಾಗಿಸಿ ತಂದಂಥ ತೊಲೆಗಳೆಂದು ಹೇಳುತ್ತಿದ್ದಾರೆ. ಏನೇ ಆಗಲಿ ಆ ಟಿಂಬರ್ ಮತ್ತು ಬೊಂಬುಗಳನ್ನು ತೆಪ್ಪದ ಮೂಲಕವೂ ಸಾಗಿಸಲು ಪ್ರಯತ್ನ ಮಾಡಲಾಗುತ್ತದೆ. ಇನ್ನು ಕೆಲವು ಮಾನ್ಯ ಸದಸ್ಯರು ಫಾಡರ್ ವಿಚಾರ ಹೇಳಿದರು. ಈ ದಿವಸ ಬಹಳ ಉತ್ತಮ ದರ್ಜೆಯ ಹುಲ್ಲು ಸಂಡೂರ ಅರಣ್ಯದಲ್ಲಿ ಬೆಳೆಯುತ್ತಿದೆ. ಮಳೆಯಿಲ್ಲದ ಕಾಲದಲ್ಲಿ ಈ ಹುಲ್ಲನ್ನು ನಾವು ಕಡಪ ಬಳ್ಳಾರಿ ಇಂಥ ಕಡೆಗಳಿಗೆ ರವಾನೆ ಮಾಡುತ್ತಿದ್ದೇವೆ. ಆದರೆ ಬೆಂಗಳೂರಿಗೆ ಕಳುಹಿಸಬೇಕೆಂದರೆ ಚಾರ್ಜ್ ಬಹಳ ದುಬಾರಿ ಬೀಳುತ್ತದೆ. ಇನ್ನು ಶಿವಮೊಗ್ಗಾ ಕಡೆಗಳಲ್ಲಿ ಈ ಹುಲ್ಲನ್ನು ಸೇಖರಣೆ ಮಾಡಿಕೊಂಡು ಬರಲು ಒಂದು ಹೊಸ ವಿಧಾನವನ್ನು (silage) ಆಚರಣೆಗೆ ತಲಾಗುತ್ತಿದೆ. ಈಗಾಗಲೇ ಈ ರೀತಿ ಈ ದನಗಳ ಮೇವನ್ನು ಗುಂಡಿಗಳಲ್ಲಿ ಶೇಖರಣೆ ಮಾಡತಕ್ಕ ವಿಧಾನವನ್ನು ಜಾರಿಗೆ ತರಲು ೬-೭ ಗುಂಡಿಗಳಲ್ಲಿ ಪ್ರಯೋಗ ನಡೆಸಲಾಗುತ್ತಿದೆ.

ಇನ್ನು ಅರಣ್ಯಗಳಿಗೆ ಬೆಂಕಿ ಬೀಳತಕ್ಕ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂದು ಹೇಳಿದ್ದಾರೆ. ನಾವೂ ಸಹ ಹಾಗೇ ಮಾಡಬೇಕೆಂದು ಅಂದುಕೊಂಡಿದ್ದೇವೆ. ಇನ್ನು ನಾವು ಈ ದಿವಸ ಮಾಡುತ್ತಿರುವ ಪ್ಲಾಂಟಿಂಗ್ ವಿಚಾರವಾಗಿ ಖರ್ಚು ಬಹಳ ದುಬಾರಿ ಆಯಿತು ಎಂದು ರೈತರು ನೋಡಿ ನಗುತ್ತಿದ್ದಾರೆ ಎಂಬುದಾಗಿ ಕೆಲವರು ತಿಳಿಸಿದ್ದಾರೆ. ಆದರೆ ನಾವು ಈ ಬಾಬನ್ನು ಎಷ್ಟು ಮಿತವ್ಯಯದಿಂದ ನಡೆಸುತ್ತಿದ್ದೇವೆ. ಇನ್ನು ನಮ್ಮ ಫಾರೆಸ್ಟ್ ಇಲಾಖೆಯವರು ಖಾಸಗೀ ಜನರಿಗೆ ಮರಗಳನ್ನು ಕೊಯ್ಯತಕ್ಕ ಗುಂಡಿಗಲ ಬಗ್ಗೆ ಲೈಸನ್ಸ್ ಕೊಡುತ್ತಿದ್ದಾರೆ. ಇದರಿಂದ ಅನೇಕ ರೀತಿಯಲ್ಲಿ ಅರಣ್ಯದಲ್ಲಿ ಮರಗಳ ಕಳವು ನಡೆಯುತ್ತದೆಂದೂ ಅದಕ್ಕಾಗಿ ಈ ಲೈಸನ್ಸ್ ಕೊಡತಕ್ಕ ಪದ್ಧತಿಯನ್ನೇ ವಜಾ ಮಾಡಬೇಕೆಂದೂ ಹೇಳಿದ್ದಾರೆ. ಆದರೆ ಹೀಗೆ ಗುಂಡಿಗಳನ್ನು ಹಾಕಲು ಲೈಸನ್ಸ್ ತೆಗೆದುಕೊಳ್ಳಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ.

ಇನ್ನು ಗಂಧದ ಮರಗಳನ್ನು ಖಾಸಗೀ ಜನರ ಜಮೀನುಗಳಲ್ಲಿ ಬೆಳೆಸಿದರೆ ಅವರಿಗೆ ಇದರಿಂದ ಯಾವ ಪ್ರೋತ್ಸಾಹವೂ ದೊರೆಯುತ್ತಿಲ್ಲವೆಂದು ಹೇಳಿದರು. ಹೀಗೆ ಖಾಸಗೀ ಜಮೀನುಗಳಲ್ಲಿ ಬೆಳೆಸಿರತಕ್ಕ ಗಂಧದ ಮರಗಳಿಗೆ ಒಂದು ರೂಪಾಯಿನಿಂದ ೨೦ ರೂಪಾಯನವರೆಗೂ ಕಾಂಪೆನ್‌ಸೇಷನ್ ಮೊಬಲಗನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇದು ಆಯಾ ಮರದ ಸೈಜಿನ ಮೇಲೆ ಹೋಗುತ್ತದೆ.

ಇನ್ನು ಕಾಡಾನೆ ಇತ್ಯಾದಿ ಮೃಗಗಳಿಂದ ಆದ ತಕ್ಕ ಹಾವಳಿಯನ್ನು ತಡೆಗಟ್ಟಲು ಆ ಸಿಬ್ಬಂಧಿ ವರ್ಗದವರಿಗೆ ಸಾಕಷ್ಟು ಕಾರ್ಟ್‌ರಿಡ್ಜ್‌ಗಳನ್ನು ಒದಗಿಸಿರಲಿಲ್ಲ ಎಂದು ಆಕ್ಷೇಪಣೆ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ನಮಗೂ ಕೂಡ ಒಂದೆರಡು ಕಂಪ್ಲೇಟ್ಸ್‌ಗಳು ಬಂದಿದ್ದವು. ಅಂಥಾದ್ದನ್ನು ತಡೆಗಟ್ಟಲು ನಾವು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಅನೇಕ ಮಾನ್ಯ ಸದಸ್ಯರುಗಳು ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ನಾವು ಸತತವಾಗಿ ಈ ಅರಣ್ಯ ಬಾಬಿನಿಂದ ಹೆಚ್ಚು ಲಾಭ ಬರುವಂತೆ ಮಾಡುವುದಕ್ಕೂ ಮತ್ತು ಈ ಅರಣ್ಯವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯುವುದಕ್ಕೂ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೇವೆ. ಆದರೆ ಈ ಇಲಾಖೆಗೇನೂ ಅಷ್ಟು ಹೆಚ್ಚು ಖರ್ಚಾಗುತ್ತಿಲ್ಲ. ತಾವು ಹಿಂದಿನ ಸಾಲುಗಳ ಖರ್ಚುವೆಚ್ಚಗಳನ್ನು ನೋಡಿದರೆ ಅದು ೪೧ ಲಕ್ಷ, ಅದರ ಮಾರನೆಯ ವರ್ಷ ೪೪ ಲಕ್ಷ, ಅದರ ಮಾರನೆಯ ವರ್ಷ ೪೭ ಲಕ್ಷ ರೂಪಾಯಿಗಳು ಖರ್ಚಾಗಿವೆ. ಈ ವರ್ಷ ಈ ಬಾಬಿಗೆ ೫೪ ಲಕ್ಷದ ೮೮ ಸಾವಿರ ರೂಪಾಯಿಗಳನ್ನು ಮಾತ್ರ ಕೇಳಿದ್ದೇವೆ.

ಹೋದ ವರ್ಷ ಡೆವಲಪ್‌ಮೆಂಟ್ ಸ್ಕೀಂಗೆ ೨ ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿತ್ತು. ಈ ವರ್ಷ ೧೦ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ತಾವು ದಯಮಾಡಿ ಬಡ್ಜೆಟ್ ವಾಲ್ಯೂಂ II ಪೇಜ್ ೩ರಲ್ಲಿ ನೋಡಿದರೆ ಡೆವಲಪ್‌ಮೆಂಟ್ ಏನೇನು ಮಾಡಬೇಕೆಂದು ಅಂದುಕೊಂಡಿದ್ದೇವೆ ಎಂಬುದು ಗೊತ್ತಾಗುತ್ತದೆ.

ಶ್ರೀಮಾನ್ ಹನುಮಯ್ಯನವರು ತಂಗಡಿ ಚಕ್ಕೆ ವಿಷಯ ಹೇಳಿದರು. ಹರಿಜನರೇ ಇದರಲ್ಲಿ ಕೆಲಸ ಮಾಡುವವರು, ಬಹಳ ಮಂದಿ ಇದರಿಂದ ಜೀವನ ಮಾಡುತ್ತಾ ಇದ್ದಾರೆ. ಅವರಿಗೆ ಸೊಸೈಟಿ ಮುಖಾಂತರ ಸಹಾಯ ಕೊಡಬೇಕು ಎಂದು ಹೇಳಿದರು. ಸರಕಾರದವರು ಏನೊಂದು ಸಹಾಯ ಮಾಡಿದರೂ ಕೂಡ ಅದು ಆ ಜನಗಳಿಗೆ ನೇರವಾಗಿ ಸಹಾಯವಾಗಬೇಕು. ಆ ಕೆಲಸದಲ್ಲಿ ಯಾರು ನಿರತರಾಗಿದ್ದಾರೋ ಅವರು ಒಂದು ಕೋ ಅಪರೇಟೀವ್ ಸೊಸೈಟಿ ಮಾಡಿಕೊಂಡರೆ ಅವರಿಗೆ ಲೈಸನ್ಸ್ ಕೊಡುತ್ತೇವೆ. ಮದರಾಸಿನಲ್ಲಿ ಅನೇಕ ಕಡೆ ಕೊಟ್ಟಿದ್ದಾರೆ. ತಪ್ಪು ಮಾಡುವುದಕ್ಕೆ ಸಾಧ್ಯವುಂಟು, ಇಲ್ಲ ಎಂದು ಹೇಳುವುದಿಲ್ಲ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಅಲ್ಲಿರುವ ತಂಗಡಿ ಚಕ್ಕೆ ತೆಗೆಯುವ ಹೆಣ್ಣುಮಕ್ಕಳು, ಗಂಡುಮಕ್ಕಳು ಎಲ್ಲಾ ಸೇರಿ ಒಂದು ಸೊಸೈಟಿ ಮಾಡಿಕೊಂಡರೆ ಅದರ ಲಾಭ, ಲುಕ್ಷಾನು ಎಲ್ಲಾ ಅವರಿಗೇ ಹೋಗುತ್ತದೆ. ಪ್ರೆಸಿಡೆಂಟರು, ಸೆಕ್ರೆಟರಿ ಮುಂತಾದವರು ಆನರೆರಿ ಆಗಿ ಕೆಲಸ ಮಾಡಬಹುದು ಅಥವಾ ನೂರಾರು ರೂಪಾಯಿ ಸಂಬಳ ಕೊಡುತ್ತೇವೆ ಎಂದರೆ ಕೊಡಿ, ಆಕ್ಷೇಪಣೆ ಏನೂ ಇಲ್ಲ. ಅಲ್ಲಿ ಆ ರೀತಿಯ ಒಂದು ಸಂಸ್ಥೆ ಇಲ್ಲ. ಆ ರೀತಿಯ ಒಂದು ಸಂಸ್ಥೆಯನ್ನು ಇಟ್ಟುಕೊಂಡರೆ ಚನ್ನಾಗಿರುತ್ತದೆ. ತಂಗಡಿಚಕ್ಕೆ ಹೊಡೆಯುವವರ ಕಷ್ಟ ಎಷ್ಟಿದೆ ಎಂಬುದು ನನಗೆ ಚನ್ನಾಗಿ ಗೊತ್ತು. ಆದ್ದರಿಂದ ಯಾರು ತಂಗಡಿಚಕ್ಕೆ ಹೊಡೆಯುತ್ತಾರೆಯೋ ಅವರನ್ನು ಆ ಸೊಸೈಟಿಯ ಮೆಂಬರುಗಳನ್ನಾಗಿ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಆಗಲಿಕ್ಕಿಲ್ಲ ಎಂದು ನನ್ನ ಮನಸ್ಸಿಗೆ ತಿಳಿಯುತ್ತದೆ.

**Mr.Speaker :** Who is to finance?

**Dr.R.Naganagouda :** We can get plenty of finance from the co-operative movement, if the actual workers are the members. For instance there is a Marketing Society for jaggery producers.The members are all jaggery producers. Similarly society for sugarcanegrowers. ಯಾವುದೇ ಆಗಲಿ ಹಣ ಕೊಡುವುದಕ್ಕೆ ಅನುಕೂಲ ಇದೆ. ಆದರೆ ಸದಸ್ಯರು ಯಾರು ಆಗಬೇಕು? ಅವರೇ ಆಗಬೇಕು. ಇದು ತಪ್ಪು. ಈ ವಿಷಯವಾಗಿ ಒಂದು ದಿವಸ ಕುಳಿತುಕೊಂಡು ಆಲೋಚನೆ ಮಾಡಬೇಕೆಂದು ನನ್ನ ಅಭಿಪ್ರಾಯ ಇದೆ.

ಹೀಗೆ ನಾಗನಗೌಡರು ಸದನದಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿದ ವಿಷಯಗಳ ಕುರಿತ ಪ್ರಶ್ನೆಗಳಿಗೆ ಅತ್ಯಂತ ಸಮರ್ಥವಾಗಿ ಅಂಕಿಅಂಶಗಳ ಸಮೇತ ಉತ್ತರ ನೀಡುತ್ತಿದ್ದರು. ಕುರಿಕುಪ್ಪೆಯಲ್ಲಿ ಕ್ಯಾಟಲ್ ಫೀಲ್ಡ್ ಸ್ಥಾಪನೆ, ಕುರಿಕುಪ್ಪೆ ಎನ್ನುವ ಹೆಸರನ್ನು ಬದಲಾಯಿಸಬೇಕು ಎನ್ನುವ ಸದಸ್ಯರ ವಾದವನ್ನು ಗೌಡರು ತಿರಸ್ಕರಿಸಿದ್ದು ಹೀಗೆ "ಕುರಿಕುಪ್ಪೆ ಎಂಬ ಹೆಸರನ್ನು ತೆಗೆಯಬಾರದು ಎನ್ನುವವರಲ್ಲಿ ನಾನೂ ಒಬ್ಬ. It is one of the finest industries in india. ಛಳಿಯಾದಾಗ ಹೊದ್ದುಕೊಳ್ಳುವುದಕ್ಕೆ ಮಾತ್ರ ಬೇಕು. ಆದರೆ ಈ ಹೆಸರು

ಬದಲಾಯಿಸಬೇಕು ಎನ್ನುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ. ಈ ಪ್ರಾಂತದಲ್ಲಿ ಕುರಿಗಳು ಬಹಳವಾಗಿ ಇರುವುದರಿಂದ ಈ ಹೆಸರು ಬಂದಿದೆ" ಎಂದು ಸಮರ್ಥಿಸಿಕೊಂಡಿರುವುದು ಗೌಡರ ವಿಶಾಲತೆಗೆ ನಿದರ್ಶನ.

ವಿಧಾನಮಂಡಲದಲ್ಲಿ ಸದಸ್ಯರೊಬ್ಬರು ಒಕ್ಕಲುತನ ಮಾರ್ಕೆಟುಗಳ ಆದಾಯ ಕುರಿತ ಚರ್ಚೆಯ ಮೇಲೆ ಪ್ರಶ್ನೆ ಕೇಳಿದಾಗ ಸಚಿವರಾದ ನಾಗನಗೌಡರು "ರೈತರಿಗೆ ಮಾರ್ಕೇಟುಗಳಲ್ಲಿ ಸರಿಯಾದ ವ್ಯಾಪಾರ ಸರಿಯಾದ ತೂಕ ಮುಂತಾದುವು ದೊರೆಯುವುದೇ ಆದಾಯವೆಂದು ಭಾವಿಸಬೇಕು" ಎಂದರು. ರೈತರ ಬಗೆಗೆ ಗೌಡರು ಎಷ್ಟೊಂದು ಕಾಳಜಿವಹಿಸಿದ್ದರೆಂಬುದಕ್ಕೆ ಈ ಮಾತುಗಳೇ ಸಾಕ್ಷಿ. ಹೀಗೆ ನಾಗನಗೌಡರು ಸದನದಲ್ಲಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ್ದನ್ನು ಪ್ರತ್ಯೇಕವಾಗಿಯೇ ದಾಖಲೆ ಮಾಡಿ ಚರ್ಚಿಸಬೇಕಾದ ಅಗತ್ಯವಿದೆ.

ಇಂದಿನ ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ನಡೆಯುವ ಚರ್ಚೆಯನ್ನು ಗಮನಿಸಿದರೆ ಅಂದು ನಡೆಯುತ್ತಿದ್ದ ಚರ್ಚೆಗಳಿಗೂ ಇಂದೂ ನಡೆಯುತ್ತಿರುವ ಚರ್ಚೆಗಳಿಗೂ ಎಷ್ಟೊಂದು ವ್ಯತ್ಯಾಸವನ್ನು ಕಾಣಬಹುದು. ಅಂದು ಬಹುತೇಕ ಸದಸ್ಯರು ಒಬ್ಬರನ್ನೊಬ್ಬರು ಗೌರವದಿಂದ ಕಾಣುತ್ತಿದ್ದರು. ಪ್ರತಿಯೊಬ್ಬ ಸದಸ್ಯನು ಸದನದಲ್ಲಿ ಮಾತನಾಡುವಾಗ ಇತರೆ ಸದಸ್ಯರು ಗಂಭೀರವಾಗಿ ಆ ಮಾತುಗಳನ್ನು ಆಲಿಸುವ ರೀತಿ, ಮರಳಿ ಉತ್ತರ ಕೊಡುವ ಸಂದರ್ಭದಲ್ಲಿ ಅತ್ಯಂತ ಸೌಮ್ಯವಾಗಿ ವರ್ತಿಸುತ್ತಿದ್ದರು. ಯಾವ ಸದಸ್ಯನೂ ಉದ್ವೇಗ ಕೋಪ ಮಾಡಿಕೊಂಡ ಸಂದರ್ಭಗಳು ತುಂಬ ಕಡಿಮೆ ಎಂದೇ ಹೇಳಬೇಕು. ಆದರೆ ಇಂದಿನ ಕೆಲವು ಸದಸ್ಯರು ತಮ್ಮ ಮಾತು ಮತ್ತು ಚರ್ಚೆಯಲ್ಲಿ ಬಳಸುವ ಭಾಷೆ, ರೀತಿನೀತಿ, ನಡವಳಿಕೆಯಲ್ಲಿ ತುಂಬ ವ್ಯಗ್ರರಾಗಿ ವರ್ತಿಸಿರುವುದನ್ನು ಮಾಧ್ಯಮಗಳಲ್ಲಿ ಕಂಡಿದ್ದೇವೆ. ಅಷ್ಟೇ ಏಕೆ, ಕೆಲವು ಸಂದರ್ಭಗಳಲ್ಲಿ ಕೆಟ್ಟದಾದ ಬೈಗಳುಗಳು, ಕೈ ಕೈ ಮಿಲಾಯಿಸುವುದು, ಹೊಡೆದಾಟಗಳಂಥ ಅಸಂಬದ್ಧ ನಡೆವಳಿಕೆಗಳು ಸದನದ ಗಾಂಭೀರ್ಯಕ್ಕೆ ಶೋಭೆ ತರುವಂಥವುಗಳಲ್ಲ.

## ೧೧. ಮೈಸೂರು ಹಿಂದುಳಿದ ವರ್ಗಗಳ ಆಯೋಗದ ಮೊದಲ ಅಧ್ಯಕ್ಷರಾಗಿ

ಕರ್ನಾಟಕ ಹತ್ತು ಹಲವು ಜಾತಿ ಜನಸಮುದಾಯಗಳನ್ನು ಹೊಂದಿದ ರಾಜ್ಯ. ಸಮಾಜದ ಸರ್ವಜನತೆಗೆ ಸಾಮಾಜಿಕ ನ್ಯಾಯ ದೊರಕಬೇಕೆನ್ನುವ ದೃಷ್ಟಿಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಬುಡಕಟ್ಟು, ಹಿಂದುಳಿದ ವರ್ಗಗಳ ಆಯೋಗಗಳನ್ನು ಆಯಾ ಸರಕಾರಗಳು ಕಾಲಕಾಲಕ್ಕೆ ರಚಿಸುತ್ತ ಬಂದಿವೆ. ಈ ಹಿನ್ನಲೆಯಲ್ಲಿ ವಿದ್ಯಾಸಂಸ್ಥೆಗಳಲ್ಲಿ ಹಿಂದುಳಿದವರಿಗೆ ಶೇಕಡಾ ೬೫ರಷ್ಟು ಮೀಸಲಾತಿ ಇರಬೇಕೆಂದು ೧೯೫೯ರಲ್ಲಿ ಸರಕಾರ ಆಜ್ಞೆಯನ್ನು ಹೊರಡಿಸಿತು. ಈ ಆಜ್ಞೆಯನ್ನು ಉಚ್ಚನ್ಯಾಯಾಲಯವು ಊರ್ಜಿತಗೊಳಿಸಿದಾಗ ೧೯೬೦ರಲ್ಲಿ ಡಾ.ನಾಗನಗೌಡರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಅದಕ್ಕೆ ಮೈಸೂರು ಹಿಂದುಳಿದ ವರ್ಗಗಳ ಸಮಿತಿ ಎಂದು ಕರೆಯಲಾಗಿದೆ. ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಮಾನದಂಡವನ್ನು ಸೂಚಿಸಬೇಕು. ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶ, ಸರ್ಕಾರಿ ಹುದ್ದೆಗಳಿಗೆ

ಆಯ್ಕೆಯ ಧೋರಣೆ ಮತ್ತು ನಿಯಂತ್ರಿಸುವ ರೀತಿಯನ್ನು ಹೇಗೆ ಮಾಡಬೇಕೆಂಬುದನ್ನು ಸೂಚಿಸಬೇಕೆಂದು ಸರ್ಕಾರ ಸಮಿತಿಗೆ ತಿಳಿಸಿತ್ತು.

ಅದರನ್ವಯ ನಾಗನಗೌಡ ಅಧ್ಯಕ್ಷತೆಯ ಸಮಿತಿ ಸುದೀರ್ಘವಾಗಿ ಅಧ್ಯಯನ ಮಾಡಿತು. ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣ, ಸರ್ಕಾರಿ ಸೇವೆಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಇಲ್ಲದಿರುವಿಕೆ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವಿಕೆ ಹೀಗೆ ಮೂರು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಮಿತಿ ಅಧ್ಯಯನ ನಡೆಸಿತು. ಅದರ ಫಲವಾಗಿ ಇಪ್ಪತ್ತು ಗುಂಪುಗಳ ಒಂದು ಪಟ್ಟಿಯನ್ನು ತಯಾರಿಸಿ, ಅದರಲ್ಲಿ ಒಂಭತ್ತು ಗುಂಪುಗಳನ್ನು ಹಿಂದುಳಿದ ವರ್ಗಗಳೆಂದು, ಉಳಿದವುಗಳನ್ನು ತೀವ್ರ ಹಿಂದುಳಿದ ಸಮೂಹಗಳೆಂದು ವರ್ಗೀಕರಿಸಿತು. ಸಾಮಾಜಿಕವಾಗಿ ಹಿಂದುಳಿದಿರುವಿಕೆಯನ್ನು ಗುರುತಿಸಲು ಎಲ್ಲ ಜಾತಿಗಳ ಮತ್ತು ಸಾಮಾಜಿಕವಾಗಿ ಕೆಳಮಟ್ಟದಲ್ಲಿರುವ ಜಾತಿಗಳ ಪಟ್ಟಿಯನ್ನು ತಯಾರಿಸಿತು. ಯಾವ ಸಮುದಾಯಗಳ ಶಿಕ್ಷಣಮಟ್ಟ, ರಾಜ್ಯದ ಸರಾಸರಿ ಶಿಕ್ಷಣಮಟ್ಟದ ಶೇಕಡಾ ೫೦ಕ್ಕಿಂತ ಕಡಿಮೆಯಿದೆಯೋ, ಅವುಗಳನ್ನು ತೀವ್ರ ಹಿಂದುಳಿದ ವರ್ಗಗಳೆಂದು ಸಮಿತಿ ಪರಿಗಣಿಸಿತು. ಇದನ್ನು ಆಧರಿಸಿ ತಾಂತ್ರಿಕ ಸಂಸ್ಥೆಗಳಲ್ಲಿರುವ ಒಟ್ಟು ಸ್ಥಾನಗಳಲ್ಲಿ ಶೇಕಡಾ ೫೦ರಷ್ಟನ್ನು ಹಿಂದುಳಿದ ವರ್ಗಗಳ ಪ್ರವೇಶಕ್ಕೆ ಮೀಸಲಿಡಬೇಕು. ಅದರಲ್ಲಿ ಶೇಕಡಾ ೨೮ರಷ್ಟನ್ನು ಹಿಂದುಳಿದ ಸಮೂಹಗಳಿಗೂ, ಉಳಿದ ಶೇಕಡ ೨೨ರಷ್ಟನ್ನು ತೀವ್ರ ಹಿಂದುಳಿದ ಸಮೂಹಗಳಿಗೆ ಕಾಯ್ದಿರಿಸಬೇಕೆಂದು ಅಭಿಪ್ರಾಯಪಟ್ಟಿತು. ಜೊತೆಗೆ ಸರ್ಕಾರಿ ಸೇವೆಗಳಿಗೆ ಶೇಕಡಾ ೪೫ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಕ್ಕೆ ಕಾಯ್ದಿರಿಸಬೇಕೆಂದು, ಇವುಗಳಲ್ಲಿ ೨೦ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಕ್ಕೂ, ಉಳಿದ ೨೫ರಷ್ಟನ್ನು ತೀವ್ರ ಹಿಂದುಳಿದ ಸಮೂಹಗಳಿಗೆ ಕಾಯ್ದಿಡ ಬೇಕೆಂದು ಶಿಫಾರಸ್ಸು ಮಾಡಿತು. ಈ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿ ಸೂಕ್ತ ಆಜ್ಞೆಯ ಮೂಲಕ ೧೯೬೨ರಲ್ಲಿ ಜಾರಿಗೆ ತಂದಿತು.

ಈ ವರದಿಯು ರಾಜ್ಯದಲ್ಲಿ ಅನೇಕ ಚರ್ಚೆಗಳಿಗೆ ಗ್ರಾಸವಾಯಿತು. ಮೇಲಾಗಿ ನಾಗನಗೌಡರ ರಾಜಕೀಯ ಕುಂಠಿತಕ್ಕೂ ಕಾರಣವಾಯಿತೆಂಬುದನ್ನು ಅವರ ಸ್ನೇಹಿತರಾದ ಕೆ.ಚನ್ನಬಸವನಗೌಡರು ತಮ್ಮ ಆತ್ಮಚರಿತ್ರೆ ನಾನೊಬ್ಬ ಸಾರ್ವಜನಿಕ ಎಂಬ ಕೃತಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. "೧೯೬೧ರಲ್ಲಿ ಹಿಂದುಳಿದ ವರ್ಗಗಳ ವರದಿಯಲ್ಲಿ ವೀರಶೈವರನ್ನು ಮುಂದುವರಿದ ವರ್ಗಕ್ಕೆ ಸೇರಿಸಿದ್ದರು. ಶ್ರೀ ನಿಜಲಿಂಗಪ್ಪನವರ ಆಡಳಿತದಲ್ಲಿ ಆರ್ಥಿಕವಾಗಿ ಹಿಂದುಳಿದ ವೀರಶೈವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದರು. ಅವರಿಗೆ ನೇಮಕಾತಿಯಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಿತ್ತು. ಈ ಅನುಕೂಲ ಡಾ.ನಾಗನಗೌಡರ ವರದಿಯಿಂದ ತಪ್ಪಿಹೋಯಿತು. ಡಾ.ನಾಗನಗೌಡರು ಈ ವರದಿಯ ಪರಿಣಾಮದಿಂದ ೧೯೬೨ರ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡರು." ಅದೇನೆ ಇದ್ದರೂ ನಾಗನಗೌಡ ಸಮಿತಿ ಹಿಂದುಳಿದ ವರ್ಗಗಳ ವಾಸ್ತವ ಚಿತ್ರಣವನ್ನು ಅಂಕಿಸಂಖ್ಯೆಗಳ

ಆಧಾರಸಹಿತ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದು ಯಾರಾದರೂ ಮೆಚ್ಚಲೇಬೇಕು. ಈ ಸಮಿತಿಯಲ್ಲಿ ನಾಗನಗೌಡರೊಂದಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಎಂ.ಎಸ್.ಪಾಟೀಲ, ಬಿ.ಕೊರಗಪ್ಪ, ವಿಧಾನಸಭಾ ಸದಸ್ಯರಾದ ಭೀಮಪ್ಪ ನಾಯ್ಕ, ಕೆ.ಪುಟ್ಟಸ್ವಾಮಿ, ವಿಧಾನಪರಿಷತ್ ಸದಸ್ಯರಾದ ರಾಮಚಂದ್ರರಾವ್ ಜಂಗೆ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಎಫ್.ಡಿ.ಘೋಡಕೆ ಸದಸ್ಯರಾಗಿದ್ದರು. ಸರಕಾರದ ಅಧೀನ ಕಾರ್ಯದರ್ಶಿಯಾದ ಎಂ.ಬಿ.ಶೆಟ್ಟಿ ಅವರು ಸಮಿತಿಯ ಕಾರ್ಯದರ್ಶಿಯಾಗಿದ್ದರು. ನಂತರದ ದಿನಗಳಲ್ಲಿ ಅನೇಕ ಆಯೋಗಗಳು ರಚನೆಗೊಂಡು ಹಿಂದುಳಿದ ವರ್ಗಗಳಲ್ಲಿಯೇ ಮತ್ತೆ ಒಳಮೀಸಲಾತಿ ತರಬೇಕೆನ್ನುವ ಚರ್ಚೆಗಳು ಇಂದು ನಡೆಯುತ್ತಿರುವುದನ್ನು ನೋಡಬಹುದು.

## ೧೨. ಸಮಾಜ ಸೇವೆ

ನಾಗನಗೌಡರು ಸಾರ್ವಜನಿಕ ಕೆಲಸಕಾರ್ಯಗಳ ಮಧ್ಯೆಯೂ ತಮ್ಮ ಕುರುಬ ಸಮಾಜದ ಸರ್ವಾಂಗೀಣ ಪ್ರಗತಿಗೆ ಸದಾ ಚಿಂತನೆ ಮಾಡುತ್ತಿದ್ದರು. ಇದಕ್ಕೆ ಅವರು ಕುರುಬ ಸಮಾಜದ ಸಭೆ ಸಮ್ಮೇಳನಗಳಲ್ಲಿ ಮಾಡಿದ ಭಾಷಣಗಳೇ ನಿದರ್ಶನವಾಗಿವೆ. ಆ ಮೂಲಕ ಹಲವಾರು ವಿಧಾಯಕ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ೧೯೪೭ರಿಂದ ೧೯೫೫ರವರೆಗೆ ಹತ್ತು ವರ್ಷಗಳ ಕಾಲ ಮೈಸೂರು ಪ್ರದೇಶ ಕುರುಬರ ಸಂಘದ ಅಧ್ಯಕ್ಷರಾಗಿ ರಾಜ್ಯಾದ್ಯಂತ ಪ್ರವಾಸ ಕೈಕೊಂಡು ಸಮಾಜ ಸಂಘಟನೆ, ಜನಜಾಗೃತಿ ಕಾರ್ಯವನ್ನು ಕೈಕೊಂಡಿದ್ದಾರೆ. ಬೆಂಗಳೂರಿನ ಗಾಂಧೀನಗರದಲ್ಲಿ ನಿರ್ಮಾಣವಾಗುತ್ತಿದ್ದ ಸಂಘದ ಕಟ್ಟಡದ ನಿರ್ಮಾಣ ಕಾರ್ಯ ಕುಂಟುತ್ತ ಸಾಗಿತ್ತು. ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಕೂಡಲೇ ಕಟ್ಟಡವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸಂಪನ್ಮೂಲವನ್ನು ಕ್ರೋಢೀಕರಿಸಲು ಹಲವು ಯೋಜನೆಗಳನ್ನು ಕೈಕೊಂಡರು. ಇದಕ್ಕಾಗಿ ನಾಡಿನಾದ್ಯಂತ ಇದ್ದ ಕುರುಬ ಸಮಾಜದ ದಾನಿಗಳ ನೆರವನ್ನು ಪಡೆದುಕೊಂಡರು. ಅವರಲ್ಲಿ ಎನ್.ಕೆ.ಸಿದ್ಧಪ್ಪ ಮತ್ತು ಬೀರಮ್ಮ, ಆರ್.ತಮ್ಮಯ್ಯ ಮತ್ತು ಜಯಮ್ಮ ದಂಪತಿಗಳು, ಅಲ್ಲದೇ ಅನೇಕ ಗಣ್ಯಮಾನ್ಯರು, ವರ್ತಕರು, ಉದ್ಯಮಿಗಳು, ಕೃಷಿಕರು, ನೌಕರರು ಹೀಗೆ ಅನೇಕ ಜನರು ದಾನ ನೀಡುವುದರ ಮೂಲಕ ಸಂಘದ ಬೃಹತ್ ಕಟ್ಟಡದ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ಜೊತೆಗೆ ಗೌಡರು ಅಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ, ಅದಕ್ಕೆ ಬಿ.ವೆಂಕಟಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಹನ್ನೊಂದು ಮಂದಿ ಸದಸ್ಯರನ್ನೊಳಗೊಂಡ ಉಪಸಮಿತಿಯೊಂದನ್ನು ರಚಿಸಿದರು. ಆ ಸಮಿತಿಯ ನಿರ್ಣಯದಂತೆ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟದ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಹೀಗೆ ಇವರ ಆಡಳಿತಾವಧಿಯಲ್ಲಿ ಕುರುಬರ ಸಂಘ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿತು. ಬೆಂಗಳೂರಿನ ಹೃದಯ ಭಾಗದಂತಿರುವ ಗಾಂಧೀನಗರದಲ್ಲಿ ಆ ಕಟ್ಟಡದ ವಿನ್ಯಾಸವನ್ನು ನೋಡಿಯೇ ಅನುಭವಿಸಬೇಕು. ಅಂಥ ಪಾರಂಪರಿಕ ಉತ್ಕೃಷ್ಟ ಶೈಲಿಯಲ್ಲಿರುವ ಆ ಕಟ್ಟಡ ಕಾಂಕ್ರೀಟ್ ಕಟ್ಟಡಗಳ ಮಧ್ಯೆ ಇಂದಿಗೂ ತನ್ನ ಸೌಂದರ್ಯವನ್ನು ವಿಶಿಷ್ಟತೆಯನ್ನು

ಕಾಪಾಡಿಕೊಂಡು ಬಂದಿದೆ. ಅಂಥ ಸಂಘದ ಬೆಳವಣಿಗೆಯಲ್ಲಿ ಗೌಡರ ಪಾಲೂ ಸಾಕಷ್ಟು ಇದೆ ಎಂಬುದನ್ನು ಸಮಾಜ ಮರೆಯಬಾರದು.

ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರಾಗಿ ನಾಗನಗೌಡರು ವಿದ್ಯಾರ್ಥಿ ನಿಲಯ ಸ್ಥಾಪನೆ, ಸಮಾಜದ ಸಂಘಟನೆಗಾಗಿ ಅವಿರತ ಶ್ರಮಿಸಿದವರು. ೨೫.೧೦.೧೯೬೫ರಲ್ಲಿ ಬಳ್ಳಾರಿಯಲ್ಲಿ ಸಾರ್ವಜನಿಕ ವಿದ್ಯಾರ್ಥಿ ನಿಲಯವನ್ನು ಸ್ಥಾಪನೆ ಮಾಡಿ ಆ ಭಾಗದ ಸಮಾಜದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅಂದಿನ ಬಳ್ಳಾರಿ ಜಿಲ್ಲಾಧಿಕಾರಿಗಳಾಗಿದ್ದ ಐ.ಎ.ಎಸ್.ಅಧಿಕಾರಿ ಡಿ.ಎಸ್.ರಾಘವೇಂದ್ರಾಚಾರ್ ಅವರನ್ನು ಸಂಘಕ್ಕೆ ಬರಮಾಡಿಕೊಂಡು ಕಟ್ಟಡದ ಶಂಕುಸ್ಥಾಪನೆ ಮಾಡಿಸಿದ್ದರು. ಅಲ್ಲದೇ ಹೊಸಪೇಟೆಯ ರೇಲ್ವೆ ನಿಲ್ದಾಣ ರಸ್ತೆಗೆ ಕನಕದಾಸ ರಸ್ತೆಯೆಂದು ನಾಮಕರಣ ಮಾಡಿ ಸರ್ಕಲ್‌ನಲ್ಲಿ ಕನಕದಾಸರ ಪ್ರತಿಮೆಯನ್ನು ಸ್ಥಾಪಿಸಿದ ಕೀರ್ತಿ ಗೌಡರಿಗೆ ಸಲ್ಲುತ್ತದೆ.

ನಾಡಿನಲ್ಲಿ ಮತ್ತು ಇತರೆ ರಾಜ್ಯಗಳಲ್ಲಿ ನಡೆಯುತ್ತಿದ್ದ ಕುರುಬರ ಸಭೆಸಮ್ಮೇಳನಗಳಲ್ಲಿ ಭಾಗವಹಿಸಿ ಉದ್ಬೋಧಕವಾದ ಭಾಷಣದ ಮೂಲಕ ಕುಲಬಾಂಧವರಿಗೆ ಭೂತ ವರ್ತಮಾನ ಕಾಲದ ಅನೇಕ ವಿಷಯಗಳನ್ನು ತಿಳಿಸಿಕೊಡುತ್ತಿದ್ದರು. ೧೯೩೭ರಲ್ಲಿ ರಾಣೇಬೆನ್ನೂರಿನಲ್ಲಿ ನಡೆದ ಮೂರನೆಯ ಕುರುಬ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾಡಿದ ಭಾಷಣ ಇದಕ್ಕೆ ನಿದರ್ಶನವಾಗಿದೆ. ಕುರುಬರ ಮುಖ್ಯ ಉದ್ಯೋಗವಾದ ಕುರಿ ಸಾಕಾಣಿಕೆ, ದೇಶ ವಿದೇಶ ಗಳಲ್ಲಿರುವ ಕುರಿ ತಳಿಗಳ ವೈವಿಧ್ಯತೆ, ಕಂಬಳಿ ನೇಯ್ಗೆ, ಕಂಬಳಿ ಮಾರುಕಟ್ಟೆ, ರಾಜಕೀಯದಲ್ಲಿ ಪ್ರಾತಿನಿಧ್ಯ, ಸರಕಾರಿ ಹಾಗೂ ಸಾರ್ವಜನಿಕ ಸಂಘಸಂಸ್ಥೆಗಳ ಸಮಿತಿಗಳಲ್ಲಿ ಕುರುಬರಿಗೆ ಪ್ರಾತಿನಿಧ್ಯ, ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಅಭಿವೃದ್ಧಿ ಇವೇ ಮುಂತಾದ ವಿಚಾರಗಳ ಬಗೆಗೆ ಗೌಡರು ಆ ಸಮ್ಮೇಳನದಲ್ಲಿ ಸುದೀರ್ಘವಾಗಿ ಮಾತನಾಡಿದ್ದಾರೆ. (ಆ ಭಾಷಣದ ಪೂರ್ಣ ಪಾಠವನ್ನು ಭಾಗ ೨ರಲ್ಲಿದೆ.) ಆ ಮೂಲಕ ಜನರಲ್ಲಿ ಜಾಗೃತಿಗೊಳಿಸಲು ಪ್ರಯತ್ನಿಸಿರುವುದು ಗೌಡರ ಸಾಮಾಜಿಕ ಕಳಕಳಿಯನ್ನು ತೋರಿಸುತ್ತದೆ. ಆ ಮೂಲಕ ಸಮಾಜದ ಋಣ ಸಲ್ಲಿಸಿದ್ದಾರೆ.

## ೧೩. ಸಾಹಿತ್ಯ ಸಂಸ್ಕೃತಿ ಪೋಷಕರು

ಸಾಹಿತ್ಯ ಸಂಸ್ಕೃತಿಯ ಬಗೆಗೂ ಗೌಡರಿಗೆ ವಿಶೇಷ ಆಸಕ್ತಿ. ೧೯೫೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ವಸಂತ ಸಾಹಿತ್ಯೋತ್ಸವವನ್ನು ಉದ್ಘಾಟಿಸುತ್ತಾ "ಸಾಹಿತ್ಯ ನಮ್ಮ ಮನಸ್ಸನ್ನು ವಿಕಾಸಗೊಳಿಸಿ, ನಮ್ಮ ಸಂಸ್ಕೃತಿಯನ್ನು ಭದ್ರಗೊಳಿಸಿದರೆ, ಕೃಷಿಯು ನಮ್ಮ ದೇಹದ ಬೆಳವಣಿಗೆಗೆ ಬೇಕಾದ ಆಹಾರ ವಸ್ತುಗಳನ್ನು ಒದಗಿಸಿ, ನಮ್ಮನ್ನು ದೃಢಕಾಯರನ್ನಾಗಿ ಮಾಡಿ ಸಾಹಿತ್ಯ ಸಂಸ್ಕೃತಿಗಳ ಉನ್ನತಿಗೆ ನೆರವಾಗುವುದು" ಎಂಬ ಮಾತುಗಳು ಕೃಷಿಯ ಬಗೆಗಿದ್ದ ಅವರ ಅಪಾರ ಒಲವನ್ನು ವ್ಯಕ್ತಪಡಿಸುತ್ತದೆ. ಇನ್ನೂ ಮುಂದುವರೆದು ನಾಡಿನ ಪ್ರಕೃತಿ ಸಂಪತ್ತು, ಕೃಷಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಕಥೆ ಕಾದಂಬರಿಗಳ ಮೂಲಕ ಜನತೆಗೆ

ತಿಳಿಸಿಕೊಡಬೇಕಾದ ಅಗತ್ಯತೆಯನ್ನು ಸಾಹಿತಿಗಳು ಮಾಡಬೇಕೆಂದು ಕರೆಕೊಟ್ಟಿದ್ದಾರೆ. ಅಂದು ಅವರು ಪ್ರಯೋಗ ಮಾಡಿ ಬೆಳಕಿಗೆ ತಂದ ಕಬ್ಬು, ಭತ್ತ, ವಿವಿಧ ನಮೂನೆಯ ಹಣ್ಣು ಹಂಪಲ ಮತ್ತು ತರಕಾರಿಗಳ ತಳಿಗಳನ್ನು ಈ ಭಾಗದಲ್ಲಿ ಇಂದಿಗೂ ಬೆಳೆಯಲಾಗುತ್ತಿದೆ.

೧೯೫೪ರ ಡಿಸೆಂಬರ್ ೭ರಂದು ಬಳ್ಳಾರಿಯಲ್ಲಿ ನಡೆದ ಸಂಸ್ಕೃತಿ ಪ್ರಸಾರ ದಿನಾಚರಣೆಯ ಉತ್ಸವದ ಅಧ್ಯಕ್ಷರಾಗಿ ಗೌಡರು ಮಾಡಿದ ಭಾಷಣ ಅತ್ಯಂತ ಮಹತ್ವದ್ದು. ಸಂಸ್ಕೃತಿ ಪ್ರಸಾರ ಕಾರ್ಯದಲ್ಲಿ ಸರಕಾರ ಕೈಕೊಂಡ ಯೋಜನೆಗಳ ಸ್ವರೂಪ, ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗೆ ಸರಕಾರ ಮಂಜೂರು ಮಾಡಿದ ಯೋಜನೆಗಳ ವಿವರಗಳನ್ನು ನೀಡುತ್ತ ಸಾಹಿತ್ಯ ಸಂಸ್ಕೃತಿ ಪೋಷಣೆ ಮತ್ತು ಪ್ರಸಾರ ಕುರಿತು ಹೇಳಿದ ಮಾತುಗಳು ಮನನೀಯವಾಗಿವೆ:

"ದೇಹಕ್ಕೆ ಅನ್ನವನ್ನೊದಗಿಸುವಂತೆಯೇ ಮನಸ್ಸಿಗೂ ಆಹಾರ ಬೇಕು. ಸರ್ಕಾರದವರು ಸಂಸ್ಕೃತಿ ಯೋಜನೆಯನ್ನು ಏರ್ಪಡಿಸಿರುವುದು ಅದನ್ನು ಒದಗಿಸುವುದಕ್ಕಾಗಿ. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪ್ರಾಚೀನ ಕಾವ್ಯಗಳೂ ಇತರ ಸಾಹಿತ್ಯ ಕೃತಿಗಳೂ, ಶಿವಶರಣರ ವಚನಗಳೂ, ಹರಿದಾಸರ ಕೃತಿಗಳೇ ಮುಂತಾದುವೂ, ನಮ್ಮ ಸಂಸ್ಕೃತಿಯ ಭಂಡಾರದಂತಿವೆ. ಅವುಗಳನ್ನು ಜನರಿಗೆ ಪರಿಚಯ ಮಾಡಿಕೊಟ್ಟಷ್ಟೂ ನಮ್ಮ ದೇಶ ಬಾಂಧವರ ಸಂಸ್ಕೃತಿಯ ಮತ್ತು ನೀತಿಯ ಮಟ್ಟವು ಏರದಿರುವುದು ಸಾಧ್ಯವೇ ಇಲ್ಲ. ಉತ್ತಮವಾದ ಗ್ರಂಥಗಳ ಪ್ರಸಾರದಿಂದ ಜನಜೀವನವು ಹಸನಾಗುತ್ತದೆ. ನಮ್ಮ ದೇಶದ ಧಾರ್ಮಿಕ ಗ್ರಂಥಗಳ ಮತ್ತು ಸಾಹಿತ್ಯ ಕೃತಿಗಳ ಪ್ರಸಾರವು ಮಾತ್ರವೇ ಈ ಯೋಜನೆಯ ಉದ್ದೇಶವಲ್ಲ. ಇತರ ದೇಶದ ಧಾರ್ಮಿಕ ಗ್ರಂಥಗಳ ಮತ್ತು ಸಾಹಿತ್ಯ ಕೃತಿಗಳ ಪ್ರಸಾರವೂ ಅದರಲ್ಲಿ ಸೇರಿದೆ. ವಿಜ್ಞಾನ ಸಂಬಂಧವಾದ ವಿಚಾರಗಳನ್ನು ಕುರಿತ ಭಾಷಣಗಳನ್ನೇರ್ಪಡಿಸುವ ಕೆಲಸವೂ ಈ ಯೋಜನೆಯ ಅಂಗವಾಗಿ ಸೇರಿದೆ. ಬೋಧಪ್ರದವಾದ ಪ್ರಾಚೀನ ಕೃತಿಗಳನ್ನು ಗಮಕಿಗಳಿಂದ ಓದಿಸುವುದಕ್ಕೂ ಏರ್ಪಾಡು ಆಗಿದೆ. ಜನಪದ ಗೀತೆಗಳನ್ನೂ ಲಾವಣಿಗಳನ್ನೂ ಹಾಡಿಸುವ ಕೆಲಸವೂ ನಡೆಯುತ್ತದೆ. ಮುಂದೆ, ಸಂಗೀತ ವಿದ್ವಾಂಸರಿಂದ ಶಿವಶರಣರ ಮತ್ತು ಹರಿದಾಸರ ಕೃತಿಗಳ ಹಾಡುಗಾರಿಕೆಯನ್ನೂ, ಕೀರ್ತನ ವಿದ್ವಾಂಸರುಗಳಿಂದ ಕೀರ್ತನೆಗಳನ್ನೂ ಏರ್ಪಡಿಸಬೇಕೆಂಬ ವಿಚಾರವೂ ಪರ್ಯಾಲೋಚನೆಯಲ್ಲಿದೆ. ಈ ಕಾರ್ಯಕಲಾಪಗಳ ಜೊತೆಗೆ ಗ್ರಂಥ ಪ್ರಕಟಣ ಕಾರ್ಯವೂ ನಡೆಯುವುದಾಗಿದೆ. ಇವುಗಳಿಂದ ಜನಜೀವನದ ಮಟ್ಟವನ್ನೂ, ನೀತಿ ನಿಷ್ಠೆಯ ಮಟ್ಟವನ್ನೂ, ಹೆಚ್ಚಿಸಲು ಸಹಾಯವಾಗುತ್ತದೆ. ಹೀಗಾಗಬೇಕೆಂಬ ಘನವಾದ ಉದ್ದೇಶದಿಂದ ಸರ್ಕಾರದವರು ಈ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಕೈಕೊಂಡಿದ್ದಾರೆ. ಈ ದಿನ ಇಲ್ಲಿ ನಡೆದ ಕಾವ್ಯವಾಚನದಿಂದಲೂ, ಭಾಷಣದಿಂದಲೂ ನಮ್ಮ ಮನಸ್ಸಿನ ಮೇಲೆ ಆಗಿರುವ ಉತ್ತಮ ಪರಿಣಾಮವನ್ನು ಪರಿಗಣಿಸಿದರೆ, ಸಂಸ್ಕೃತಿ ಪ್ರಸಾರ ಯೋಜನೆಗೆ ವಿರುದ್ಧವಾಗಿ ಮಾತನಾಡಲು ಯಾರಿಗೂ ಮನಸ್ಸು ಬರಲಾರದೆಂದು ನಾನು ನಂಬಿದ್ದೇನೆ. ಒಂದು ದೃಷ್ಟಿಯಿಂದ ನೋಡಿದರೆ, ಸಂಸ್ಕೃತಿ ಪ್ರಸಾರವೆಂದರೆ ಸಾಹಿತ್ಯ ಮತ್ತು ಕಲೆಗಳ ಪ್ರಸಾರ;

ವಿಜ್ಞಾನ ವಿಚಾರಗಳ ಮತ್ತು ಧಾರ್ಮಿಕ ವಿಚಾರಗಳ ಪ್ರಸಾರ. ಇವು ಬೇಡವೆಂದು ಯಾರೂ ಭಾವಿಸಲಾರರು; ಇವು ಬೇಡವೆಂದು ಯಾರೂ ಭಾವಿಸಲೂಬಾರದು. ವಿದೇಶಗಳಲ್ಲಿ ಇವು ಬಹಳ ಭಾರೀ ಪ್ರಮಾಣದಲ್ಲಿ ನಡೆಯುತ್ತಿವೆ. ನಾನು ಅಮೇರಿಕಾ ಮುಂತಾದ ದೇಶಗಳಲ್ಲಿದ್ದ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸಾಹಿತ್ಯದ ಮತ್ತು ಕಲೆಗಳ ಅಭಿವೃದ್ಧಿಗೆ ಅಲ್ಲಿಯವರು ವೆಚ್ಚ ಮಾಡುವಷ್ಟು ಹಣವನ್ನು ವೆಚ್ಚ ಮಾಡುವುದು ಕನಸಿನಲ್ಲೂ ನಮಗೆ ಸಾಧ್ಯವಿಲ್ಲ. ನಮ್ಮಿಂದ ಸಾಗುವಷ್ಟನ್ನು ಮಾಡುವುದು ಮಾತ್ರವೇ ನಮಗೆ ಸಾಧ್ಯ. ಜನರ ನೀತಿ ನಿಷ್ಠೆಯನ್ನು ಹೆಚ್ಚಿಸುವ ಪ್ರಯತ್ನಗಳು ಕೂಡ, ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಬಹಳವಾಗಿ ನಡೆಯುತ್ತಿವೆ. ಆದ ಕಾರಣ, ಮೈಸೂರು ಸರ್ಕಾರದವರು ಸಕಾಲದಲ್ಲೇ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಕೈಕೊಂಡಿದ್ದಾರೆ.

ಈ ಯೋಜನೆಯ ಕಾರ್ಯಕಲಾಪಗಳು ವಿಶೇಷ ರೀತಿಯಲ್ಲಿ ವೃದ್ಧಿ ಹೊಂದಿ, ಅದನ್ನು ಕೈಕೊಂಡುದು ಸಾರ್ಥಕವಾಗುವಂತೆ ಭಗವಂತನು ಅನುಗ್ರಹಿಸಿ ಕೃಪೆ ಮಾಡಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ". (ಭಾಷಣದ ಪೂರ್ಣ ಭಾಗವನ್ನು ಭಾಗ ೨ರಲ್ಲಿ ನೋಡಿರಿ.)

## ೧೪. ವ್ಯಕ್ತಿ ವಿಶೇಷತೆ

ಎತ್ತರದ ನಿಲುವು, ಎಣ್ಣೆಗಪ್ಪು ಬಣ್ಣವನ್ನು ಹೊಂದಿದ ಗೌಡರು ಖಾದಿ ಧೋತ್ರ, ಟೊಪ್ಪಿಗೆ, ಜುಬ್ಬಾ, ಶಲ್ಯವನ್ನು ಧರಿಸುತ್ತಿದ್ದರು. ಮನೆಯಲ್ಲಿ ಮಾತ್ರ ಲುಂಗಿ ಜುಬ್ಬಾ ಹಾಕಿಕೊಳ್ಳುತ್ತಿದ್ದರು. ಯಾವಾಗಲೊಮ್ಮೆ ಲಾನ್ ಕೋಟನ್ನು ಸಹ ಧರಿಸುತ್ತಿದ್ದರು. ಅಪ್ಪಟ ಗಾಂಧೀವಾದಿಗಳಾಗಿದ್ದರಿಂದ ಅವರು ಸದಾ ಖಾದಿ ಬಟ್ಟೆಗಳನ್ನೇ ಹಾಕಿಕೊಳ್ಳುತ್ತಿದ್ದರು. ಸರಳತೆ, ಸಾತ್ವಿಕ ಹಾಗೂ ಶಿಸ್ತು, ಸಂಯಮ, ಸಮಯ ಪಾಲನೆ, ಪ್ರಾಮಾಣಿಕತೆ, ಶ್ರದ್ಧೆ ಇತ್ಯಾದಿ ಗುಣಗಳನ್ನು ಮೈಗೂಡಿಸಿಕೊಂಡಿದ್ದ ನಾಗನಗೌಡರು ಎಲ್ಲರನ್ನೂ ಸರಿಸಮಾನವಾಗಿ ಕಾಣುತ್ತಿದ್ದರು. ಮಾತು ಬೆಳ್ಳಿ ಮೌನ ಬಂಗಾರ ಎಂಬಂತೆ ಹೇಳಬೇಕಾದುದನ್ನು ಸ್ಪಷ್ಟ ನೇರವಾಗಿ ಮಾತನಾಡುತ್ತಿದ್ದರು.

ದಿನಾಲು ಕನ್ನಡ ಇಂಗ್ಲಿಷ್ ಸಂಸ್ಕೃತ ಸಾಹಿತ್ಯ ಸಂಸ್ಕೃತಿಯ ಅಭ್ಯಾಸ ಮಾಡುತ್ತಿದ್ದರು. ಬೆಳಗಿನ ಜಾವ ವಾಕಿಂಗ್ ಯೋಗ ವ್ಯಾಯಾಮವನ್ನು ತಪ್ಪದೇ ಮಾಡುತ್ತಿದ್ದರು. ಹೀಗಾಗಿ ಅವರು ತುಂಬ ಉಲ್ಲಾಸಭರಿತರಾಗಿ ದಿನಂಪ್ರತಿ ಇರುತ್ತಿದ್ದರು. ಇನ್ನೊಬ್ಬರ ಮೇಲೆ ಅವಲಂಬಿತರಾಗದೇ ತಮ್ಮ ದೈನಂದಿನ ಎಲ್ಲ ಕೆಲಸಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸುತ್ತಿದ್ದರು. ಚಿಕ್ಕವನಿರಲಿ, ದೊಡ್ಡವನಿರಲಿ, ಬಲ್ಲಿದವನಿರಲಿ ಬಡವನಿರಲಿ ಯಾರೇ ಬಂದರೂ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಮೇಲಾಗಿ ನೆರವನ್ನು ಬಯಸಿ ಬಂದ ಜನರನ್ನು ಅತ್ಯಂತ ಪ್ರೀತಿಯಿಂದ ಮಾತನಾಡಿಸಿ, ಅವರ ನ್ಯಾಯಯುತ ಬೇಡಿಕೆಗಳನ್ನು ಪರಿಹರಿಸುತ್ತಿದ್ದರು. ನೌಕರಿಗಾಗಿ ಶಿಫಾರಸ್ಸು ಕೇಳಿ ಬಂದವರ ಸಮಗ್ರ ಮಾಹಿತಿಯನ್ನು ತೆಗೆದುಕೊಂಡು ಕಾನೂನು ಚೌಕಟ್ಟಿನಲ್ಲಿ ಸಹಾಯ ಮಾಡುವಂತೆ ಸಂಬಂಧಿಸಿದವರಿಗೆ

ದೂರವಾಣಿ ಅಥವಾ ಪತ್ರದ ಮೂಲಕ ತಿಳಿಸುತ್ತಿದ್ದರು. ಸರ್ಕಾರಿ ಮತ್ತು ಸಾರ್ವಜನಿಕ ವಲಯಗಳಲ್ಲಿ ನೌಕರಿ, ಶಿಕ್ಷಣ ಸಂಸ್ಥೆ, ಹಾಸ್ಟೇಲ್‌ಗಳಲ್ಲಿ ಪ್ರವೇಶಕ್ಕಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾದಾಗ ಸಹಾಯ ಮಾಡಿದ್ದನ್ನು ಇಂದಿಗೂ ಕೆಲವರು ಸ್ಮರಿಸುತ್ತಾರೆ.

ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಹೊಸಪೇಟೆಯ ಸಿದ್ದರಾಮಯ್ಯನವರು ನಾಗನಗೌಡರ ವ್ಯಕ್ತಿತ್ವವನ್ನು ಕುರಿತು ೨೬.೧೧.೨೦೦೩ರಂದು ನನಗೆ ಮೌಖಿಕವಾಗಿ ಹೇಳಿದ ಮಾತುಗಳು ಹೀಗಿವೆ: ಅಮರಾವತಿಯ ಪ್ರಾಥಮಿಕ ಶಾಲೆಯ ಶಿಕ್ಷಕರ ಹುದ್ದೆಗೆ ನಾನು ಆಯ್ಕೆಯಾಗಿದ್ದೆ. ಬಳ್ಳಾರಿಯ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ (District Education Office)ಗೆ ನನ್ನ ದಾಖಲೆಗಳು ಪರಿಶೀಲನೆಗೊಂಡು ಮೂರು ತಿಂಗಳಾದರೂ ನೇಮಕಾತಿ ಆದೇಶ ಬಂದಿರಲಿಲ್ಲ. ಅದಕ್ಕಾಗಿ ಒಂದು ದಿವಸ ಸಾಯಂಕಾಲ ನಾಗನಗೌಡರನ್ನು ಭೇಟಿ ಮಾಡಲು ಹೋದೆ. ಆಗ ಗೌಡರು ಬ್ರೆಡ್ ಚಹಾ ತೆಗೆದುಕೊಳ್ಳುತ್ತಿದ್ದರು. ನನ್ನನ್ನು ನೋಡಿದ ಗೌಡರು ನನಗೂ ಚಹ ಕುಡಿಯಲು ಹೇಳಿದರು. ನಂತರ ಎಲ್ಲ ವಿವರಗಳನ್ನು ಪಡೆದುಕೊಂಡು ನಾಳೆ ಬೆಳಿಗ್ಗೆ ಕಛೇರಿ ಆರಂಭವಾಗುವ ವೇಳೆಗೆ ೧೦ ಗಂಟೆಗೆ ಬಾ, ವಿಚಾರಿಸೋಣ ಎಂದು ಹೇಳಿ ಕಳುಹಿಸಿದರು. ಅದರಂತೆ ನಾನು ಮರುದಿನ ಬೆಳಿಗ್ಗೆ ಹೋದೆ. ಬಳ್ಳಾರಿಯ ಜಿಲ್ಲಾ ಶಿಕ್ಷಣ ಕಛೇರಿಗೆ ದೂರವಾಣಿ ಮೂಲಕ ವಿಚಾರಿಸಿದರು. ನಾಲ್ಕೈದು ದಿನಗಳಲ್ಲಿ ನೇಮಕಾತಿ ಆದೇಶವನ್ನು ಕಳುಹಿಸುತ್ತೇವೆ ಎಂಬ ಉತ್ತರ ಅಧಿಕಾರಿಗಳಿಂದ ಬಂತು. ಆಗ ಗೌಡರು-ಇದು ನಿಜಾನಾ ಅಥವಾ ನಾನೇ ಮತ್ತೆ ಫೋನ ಮಾಡಬೇಕೆ? ಎಂದು ಅಧಿಕಾರಿಯನ್ನು ಕೇಳಿದರು. ನನಗೆ ಮುಂದೆ ನೇಮಕಾತಿ ಆದೇಶ ಬಂದಿತು. ಕೆಲಸಕ್ಕೆ ಹಾಜರಾಗಿ ಒಂದು ದಿನ ಸಾಯಂಕಾಲ ಕೃತಜ್ಞತೆ ಸಲ್ಲಿಸಲು ಗೌಡರ ಮನೆಗೆ ಹೋದೆ. ಆಗ ನನ್ನನ್ನು ಕೂಡ್ರಿಸಿಕೊಂಡು "ಶಿಕ್ಷಕ ಹುದ್ದೆ ಪವಿತ್ರವಾದುದು. ಆ ಹುದ್ದೆಗೆ ಕುಂದು ಬರದ ಹಾಗೆ ನಡೆದುಕೊಳ್ಳಬೇಕು. ಒಬ್ಬರಿಗೆ ಅಸಹ್ಯವಾಗಬೇಡ. ನಾಲ್ಕು ಮಂದಿಗೆ ಗೌರವ ತರುವ ಕೆಲಸವನ್ನು ಮಾಡಬೇಕು. ನಿಮ್ಮಿಂದ ಹತ್ತು ವಿದ್ಯಾರ್ಥಿಗಳು ಉದ್ಧಾರವಾಗಬೇಕು" ಎಂದು ಕೆಲವು ಹಿತವಚನಗಳನ್ನು ಹೇಳಿದರು. ಅವರು ಹೇಳಿದ ಆ ಮಾತುಗಳು ನನ್ನಲ್ಲಿ ಇಂದಿಗೂ ಅಚ್ಚೊತ್ತಿದಂತಾಗಿವೆ. ಗೌಡರ ತಾಳ್ಮೆ, ಸಹಕಾರ ಮನೋಭಾವನೆ ಮೆಚ್ಚುವಂಥವುಗಳಾಗಿದ್ದವು. ಹೊಸಪೇಟೆಯ ರೈತರು, ಜನರು ದಿನಾಲು ಅವರ ಹೆಸರನ್ನು ನೆನಪಿಸಿಕೊಳ್ಳಬೇಕು.

ಅಷ್ಟೇ ಏಕೆ, ಗೌಡರ ಮಗಳಾದ ಮೀನಾಕ್ಷಮ್ಮನವರಿಗೆ ಬೆಂಗಳೂರಿನ ಕಾಲೇಜೊಂದರಲ್ಲಿ ಸಿಕ್ಕ ಬಿ.ಎಸ್.ಸಿ. ಅಗ್ರಿ ಪದವಿ ವ್ಯಾಸಂಗಕ್ಕಾಗಿ ಪ್ರವೇಶ ದೊರಕಿತ್ತು. ಇನ್ನೇನು ಪ್ರವೇಶ ಮಾಡಿಸಬೇಕೆನ್ನುವಷ್ಟರಲ್ಲಿ ಒಂದು ದಿವಸ ಅದೇ ಕಾಲೇಜಿನಲ್ಲಿ ವ್ಯಾಸಂಗಕ್ಕಾಗಿ ಬೇರೆಯವರು ಬಂದು ಪ್ರವೇಶಕ್ಕಾಗಿ ಶಿಫಾರಸ್ಸು ಕೋರಿ ಗೌಡರನ್ನು ಕೇಳಿದರು. ಬಂದವರಿಗೆ ಅದನ್ನು ಬಿಟ್ಟುಕೊಟ್ಟಿದ್ದನ್ನು ಗೌಡರ ಮಗಳು ಮೀನಾಕ್ಷಮ್ಮನವರು ಇಂದಿಗೂ ನೆನಪಿನಲ್ಲಿಟ್ಟುಕೊಂಡಿದ್ದಾರೆ. ಅಂಥ ಧಾರಾಳತನವನ್ನು ಗೌಡರು ತಮ್ಮ ಜೀವನದುದ್ದಕ್ಕೂ ಅನುಸರಿಸಿಕೊಂಡು ಬಂದ ಕಾರಣ ಕೆಲವು ಸಂದರ್ಭಗಳಲ್ಲಿ ಅವರು ಮನೆಯವರ ಕೋಪಕ್ಕೂ ಗುರಿಯಾಗುತ್ತಿದ್ದರು.

ಗೌಡರು ಕೈಗಾರಿಕೆ ಸಚಿವರಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನ ಪ್ರಸಿದ್ಧ ಅಬಕಾರಿ ಉದ್ಯಮಿಯೊಬ್ಬರು ಹಬ್ಬಕ್ಕೆಂದು ಬಾಗಿನ ಕೊಡಲು ಬೆಳ್ಳಿಯ ಅರಿಷಿಣ ಕುಂಕುಮ ಭರಣಿ, ರೇಷ್ಮೆ ಸೀರೆ, ಹಣ್ಣುಹಂಪಲು ಹೂವುಗಳನ್ನು ತಟ್ಟೆಯಲ್ಲಿಟ್ಟು ಮನೆಗೆ ಕಳುಹಿಸಿದ್ದರು. ಮನೆಗೆ ಬಂದ ಮೇಲೆ ಗೌಡರಿಗೆ ಈ ವಿಷಯ ಗೊತ್ತಾದಾಗ ತುಂಬ ಕೋಪಗೊಂಡು, ಕೇವಲ ಹೂವು ಹಣ್ಣುಗಳನ್ನುಳಿಸಿಕೊಂಡು ಇತರೆ ವಸ್ತುಗಳನ್ನು ವಾಪಸ್ಸು ಕಳುಹಿಸಿದ್ದನ್ನು ನೋಡಿದರೆ ಅವರ ದೃಢಮನಸ್ಸು, ಪ್ರಾಮಾಣಿಕತೆ, ಕಾರ್ಯದಕ್ಷತೆ ನಮಗೆ ಅರಿವಾಗದಿರದು. ಯಾರ ಮನಸ್ಸಿಗೂ ನೋವಾಗದ ಹಾಗೆ ನಡೆದುಕೊಳ್ಳುತ್ತಿದ್ದ ಸೌಜನ್ಯಶೀಲ ವ್ಯಕ್ತಿ ಎಂಬುದನ್ನು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ.

ಸಮಕಾಲೀನ ಸಮಾಜ ಮತ್ತು ರಾಜಕಾರಣದ ಸಂದರ್ಭವನ್ನು ಗಮನಿಸಿದರೆ ನಾಗನಗೌಡರ ವ್ಯಕ್ತಿತ್ವ ಎಷ್ಟೊಂದು ಉತ್ಕೃಷ್ಟವಾಗಿತ್ತು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಇಂದಿನ ಕೆಲವು ರಾಜಕಾರಣಿಗಳು ಮಾನಮರ್ಯಾದೆ ಬಿಟ್ಟು ಭ್ರಷ್ಟಾಚಾರ ಅತ್ಯಾಚಾರಕ್ಕಿಳಿದಿರುವುದನ್ನು ನೋಡಿದರೆ ಅಸಹ್ಯವಾಗುತ್ತದೆ. ನಾಲ್ಕೈದು ತಲೆಮಾರುಗಳಿಗಾಗುವಷ್ಟು ಹಣ ಸಂಪತ್ತು ಆಸ್ತಿ ಇದ್ದರೂ ಸಹಿತ ನಾಲ್ಕು ಕಾಸಿಗಾಗಿ ಕೈಯೊಡ್ಡುವ ರಾಜಕಾರಣಿಗಳಿಗೇನೂ ನಮ್ಮಲ್ಲಿ ಬರವಿಲ್ಲ.

ಗೌಡರಿಗೆ ಗೆಳೆಯರ ಬಳಗ ದೊಡ್ಡದು. ಸಾರ್ವಜನಿಕವಾದಂಥ ಏನೇ ಕಾರ್ಯಗಳನ್ನು ಮಾಡಿದರೆ ಗೌಡರು ಎಲ್ಲ ಗೆಳೆಯರನ್ನು ಕಟ್ಟಿಕೊಂಡು ಮುಂದುವರೆಯುತ್ತಿದ್ದರು. ಅವರ ಸಲಹೆ ಸಹಕಾರ ಮಾರ್ಗದರ್ಶನಗಳನ್ನು ಪಡೆದುಕೊಳ್ಳುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯನ್ನೂ ಗೌರವದಿಂದ ಕಾಣುತ್ತಿದ್ದರು. ಅವರ ವಿಚಾರಗಳಿಗೆ ಸ್ಪಂದಿಸುತ್ತಿದ್ದ ಕಾರಣವಾಗಿ ಅನೇಕ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಗೌಡರಿಗೆ ಸಾಧ್ಯವಾಯಿತು. ಅವರ ಎಲ್ಲ ಯೋಚನೆ ಯೋಜನೆಗಳಿಗೆ ಹೆಗಲಿಗೆ ಹೆಗಲು ಕೊಟ್ಟು ನಿಂತವರು ಅನೇಕರು. ಅವರಲ್ಲಿ ಬೆಲ್ಲದ ಚನ್ನಪ್ಪ, ಭರಮಲಿಂಗನಗೌಡ, ಪತ್ತಿಕೊಂಡ ಗುರುನಾಥಪ್ಪ, ಕೆ. ಚೆನ್ನಬಸವನಗೌಡ, ಸೀತಾರಾಮಸಿಂಗ್, ಬೆಲ್ಲದ ಚನ್ನಪ್ಪ, ಶಂಕರಗೌಡ, ಸರ್ವೇಶ್ವರ ಮುಂತಾದವರು ಪ್ರಮುಖರು.

## ೧೫. ಕೊನೆಯ ದಿನಗಳು

ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗಾಗಿ ನಿರಂತರ ಶ್ರಮಿಸಿದ ನಾಗನಗೌಡರು ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಾಗಿ ರಾಜ್ಯ ರಾಷ್ಟ್ರ ಮಟ್ಟದಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡಿದ್ದರು. ಅವರ ಸಾಧನೆಯನ್ನು ಗಮನಿಸಿ ಅನೇಕ ಸಂಘಸಂಸ್ಥೆಗಳು ಅಧ್ಯಕ್ಷ ಸ್ಥಾನವನ್ನು ನೀಡಿ ಗೌರವಿಸಿವೆ. ಅಖಿಲ ಭಾರತ ಉಣ್ಣೆ ನೇಕಾರರ ಸಂಘವು ಗೌಡರನ್ನು ಗೌರವಾಧ್ಯಕ್ಷರನ್ನಾಗಿ ನಿಯಮಿಸಿ ತನ್ನ ಗೌರವವನ್ನು ಹೆಚ್ಚಿಸಿಕೊಂಡಿತು. ಹಾಗೆಯೇ ಅಖಿಲ ಭಾರತ ಕುರುಬರ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದಾಗ ನಾಗನಗೌಡರು "ನನಗಿಂತಲೂ ಸೂಕ್ತವಾದ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡಿರಿ" ಎಂದು ಹೇಳಿರುವುದು ಅವರ ದೊಡ್ಡ ಗುಣವಾಗಿದೆ. ೧೯೭೦ರ ನಂತರ ರಾಜ್ಯ ರಾಷ್ಟ್ರ ಮಟ್ಟದಲ್ಲಾದ ರಾಜಕೀಯ ಸಾಮಾಜಿಕ ಸ್ಥಿತ್ಯಂತರಗಳಿಂದಾಗಿ ನಾಗನಗೌಡರು ತುಂಬ ವ್ಯಥೆಪಟ್ಟರು. ಸ್ವಾರ್ಥ, ಭ್ರಷ್ಟಾಚಾರ, ಜಾತೀಯತೆ, ಲಂಚಗುಳಿತನಗಳು

ಮಿತಿಮೀರಿ ಬೆಳೆದು ಸಮಾಜದಲ್ಲಿ ಒಂದು ರೀತಿಯ ಕಲುಷಿತ ವಾತಾವರಣ ನಿರ್ಮಾಣಗೊಳ್ಳುತ್ತಿರುವುದನ್ನು ಖಂಡಿಸುತ್ತ ಬಂದರು. ಸಾತ್ವಿಕರಿಗೆ ಸೌಜನ್ಯಶೀಲರಿಗೆ ಚುನಾವಣೆಗಳು ನೋವನ್ನುಂಟು ಮಾಡುತ್ತವೆ ಎಂಬುದನ್ನು ಗೌಡರು ಮನಗಂಡಿದ್ದರು. ಕೊನೆಕೊನೆಗೆ ಗೌಡರು ಹೃದಯ ಬೇನೆಯಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ೧೯೬೯ರ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಎ.ಐ.ಸಿ.ಸಿ. ಸಭೆಯಲ್ಲಿ ಪಾಲ್ಗೊಂಡು ಮರಳಿ ಹೊಸಪೇಟೆಗೆ ಬರುವಾಗ ಬಳ್ಳಾರಿಯಲ್ಲಿ ಕೊನೆಯುಸಿರೆಳೆದದ್ದು(೧೯.೭.೧೯೬೯) ಮಾತ್ರ ರಾಜ್ಯಕ್ಕಾದ ದೊಡ್ಡ ನಷ್ಟವೆಂದೇ ಹೇಳಬೇಕು. ಗೌಡರು ನಿಧನರಾದ ವಾರ್ತೆಯನ್ನು ಕೇಳಿದ ಸ್ನೇಹಿತರು, ಅಭಿಮಾನಿಗಳು ದುಃಖಿತಪ್ತರಾಗಿ ಅವರ ಸಾಧನೆಯನ್ನು ಸ್ಮರಿಸಿದರು.

### ೧೬. ಹಿರಿಯರು ಕಂಡಂತೆ ನಾಗನಗೌಡರು

ನಾಗನಗೌಡರ ವ್ಯಕ್ತಿತ್ವ ಮತ್ತು ಕರ್ತೃತ್ವ ಶಕ್ತಿ ಅಗಾಧವಾದುದು. ಅವರ ಸ್ನೇಹಿತರು, ಸಹೋದ್ಯೋಗಿಗಳು, ಅವರನ್ನು ತುಂಬ ಹತ್ತಿರದಿಂದ ಕಂಡವರು ನಾಗನಗೌಡರ ವ್ಯಕ್ತಿತ್ವವನ್ನು ನಾನಾ ರೀತಿಯಿಂದ ಸ್ಮರಿಸಿದ್ದಾರೆ. ಅವರಲ್ಲಿ ಪ್ರಮುಖರಾದವರು ಕರ್ನಾಟಕ ಸರಕಾರದ ಮಾಜಿಮುಖ್ಯಮಂತ್ರಿಗಳಾದ ಕಡಿದಾಳ ಮಂಜಪ್ಪ, ಮದ್ರಾಸ ಸರಕಾರದ ಮುಖ್ಯಮಂತ್ರಿಯಾಗಿದ್ದ ರಾಜಾಜಿಯವರು, ಬೆಲ್ಲದ ಚನ್ನಪ್ಪ, ಮ.ನಿ.ಪ್ರ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಎಚ್.ಸರ್ವೇಶ್ವರ, ಜಂಭುನಾಥ, ಜಿ.ನಾಗಲಿಂಗಪ್ಪ ಮುಂತಾದವರು ಗೌಡರ ವ್ಯಕ್ತಿತ್ವವನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

೧. **ಸಿ.ರಾಜಗೋಪಾಲಚಾರಿ,** ಮದ್ರಾಸ ಸರಕಾರದ ಅಂದಿನ ಮುಖ್ಯಮಂತ್ರಿ ನಾಗನಗೌಡರು ಮೈಸೂರು ಸರಕಾರದಲ್ಲಿ ಮಂತ್ರಿಯಾಗಿ ಹೋಗುವ ಸಂದರ್ಭದಲ್ಲಿ ರಾಜಗೋಪಾಲಚಾರಿಯವರು "ನನ್ನ ಮಂತ್ರಿಮಂಡಲದ ಒಬ್ಬ ಮುತ್ಸದ್ದಿ ಸದಸ್ಯರನ್ನು ಬಿಟ್ಟುಕೊಡುವುದು ನನಗೆ ಖೇದವೆನಿಸುತ್ತದೆ. ನಾಗನಗೌಡರು ನನ್ನ ಮಂತ್ರಿಮಂಡಳದ ರತ್ನ" (jewells of my ministry) ಎಂದು ಮನಸಾರೆ ಕೊಂಡಾಡಿ ಬೀಳ್ಕೊಟ್ಟರಂತೆ.

೨. **ಕಡಿದಾಳ ಮಂಜಪ್ಪ** ಮೈಸೂರು ಸರಕಾರದ ಅಂದಿನ ಮುಖ್ಯಮಂತ್ರಿ ಡಾ.ನಾಗನಗೌಡರು ಹಳೆಯ ಸ್ವಾತಂತ್ರ್ಯಯೋಧರೂ, ಅಪ್ಪಟ ಗಾಂಧೀವಾದಿಗಳೂ ಆಗಿದ್ದರು. ಬಹಳ ಸರಳ ಸ್ವಭಾವದವರಾದ ಇವರು ನಿಗರ್ವಿಗಳು ಹಾಗೂ ಸಾತ್ವಿಕ ಸ್ವಭಾವದವರಾಗಿದ್ದರು. ಅತ್ಯಂತ ಸತ್ಯವಂತ ರಾಜಕಾರಣಿಯಾಗಿದ್ದರು. (ನನಸಾಗದ ಕನಸು, ಪುಟ. ೧೩೧)

೩. **ಎಚ್.ಸರ್ವೇಶ್ವರ,** ನಾಗನಗೌಡರ ಅತ್ಯಂತ ನಿಕಟವರ್ತಿಗಳು ನಾಗನಗೌಡರು ಎತ್ತರದ ಆಳು. ಅವರ ಜೀವನವೂ ಉನ್ನತ ಅವರ ಸಾಧನೆಯೂ ಹಾಗೆಯೇ ದೊಡ್ಡದು. ಸುದೀರ್ಘ ಜೀವನದುದ್ದಕ್ಕೂ ಒಳಿತನ್ನೆ ಬಗೆದು, ಒಳ್ಳೆಯದನ್ನೆ ಮಾಡಿ ಘನವಾದುದನ್ನೆ ಸಂಪಾದಿಸಿ ಆದರ್ಶ ಪ್ರಾಯರಾದರು. ಕೃಷಿ ಅವರ ಜೀವನದ ಒಂದು ಕಣ್ಣು. ಸಹಕಾರ ಇನ್ನೊಂದು ದೃಷ್ಟಿ. ಇವೆರಡರ ಸಮಗ್ರ ಅಭಿವೃದ್ಧಿಯಿಂದಲೇ ನಾಡಿನ

ಸೌಭಾಗ್ಯ ಸಿದ್ಧಿ ಎಂದವರ ಖಚಿತ ಅಭಿಪ್ರಾಯ. ಅದಕ್ಕಾಗಿಯೇ ಅವರದು ದುಡಿತ, ಅವಿರತ ಸೇವೆ. ಗೌಡರು ಸ್ಥಿತಪ್ರಜ್ಞರು. ಉನ್ನತ ಸ್ಥಾನದಲ್ಲಿ ಎಷ್ಟು ವಿನಯರಾಗಿದ್ದರೋ ಅಷ್ಟೇ ಔನ್ನತ್ಯವನ್ನು ಯಾವ ಸ್ಥಾನದಲ್ಲಿರದಿದ್ದರೂ ತೋರಿದ್ದರು. ಅವರ ವ್ಯಕ್ತಿತ್ವ ಹಾಗೂ ಯೋಗ್ಯತೆಯನ್ನು ಬೆಂಬಲಿಸಿ ಬಂದ ಮಂತ್ರಿಪದವಿಯಿಂದ ವಿಚಲಿತ ರಾಗಲಿಲ್ಲ. ಅಮೇರಿಕೆಯಲ್ಲಿ ಹತ್ತು ವರ್ಷಕ್ಕೂ ಮೇಲ್ಪಟ್ಟು ಜ್ಞಾನಾರ್ಜನೆ ಮಾಡಿ ಹಿರಿಯ ಪದವಿಗಳನ್ನು ಪಡೆದುದರಿಂದ ಅವರು ದಲಿತರಿಂದ ಬೇರೆಯವರಾಗಲಿಲ್ಲ. ದೊಡ್ಡ ಸ್ಥಾನದಲ್ಲಿರಲಿ ಬಿಡಲಿ ಅವರದು ತುಂಬಿದ ಕೊಡ. ಎಂದೂ ತುಳುಕಲೇ ಇಲ್ಲ. (ಸಹನೀತಿ, ಪುಟ. ೩೭)

೪. ಮ.ನಿ.ಪ್ರ.ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು

ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ ಹೊಸಪೇಟೆ ಪ್ರಾಂತದ ರೈತರು ಸಂಘಟಿತರಾಗಿ ಕಳೆದ ೫೦-೬೦ ವರ್ಷಗಳಿಂದ ಸರಕಾರದ ನೀತಿ, ಉದ್ಯಮದಾರರ ಶೋಷಣೆ ವಿರುದ್ಧ ಹೋರಾಟ ನಡೆಸಿಕೊಂಡು ಬಂದಿರುವುದು ಅಭಿಮಾನದ ಸಂಗತಿ. ಈ ಸಂಘಟನೆಯ ಹರಿಕಾರರು ದಿವಂಗತ ಡಾ.ಆರ್.ನಾಗನಗೌಡರು. ಈ ದಿಸೆಯಲ್ಲಿ ಡಾ.ನಾಗನಗೌಡರ ತ್ಯಾಗ, ಪರಿಶ್ರಮ ಅವಿಸ್ಮರಣೀಯ. (ಕಬ್ಬು ಬೆಳೆಗಾರರ ಹೋರಾಟ, ಬೆನ್ನುಡಿಯಿಂದ)

೫. ಮೈದೂರ ಆನಂದ ಸಕ್ಕರೆ ಉದ್ದಿಮೆ ಸಲಹೆಗಾರರು ಕೀರ್ತಿಶೇಷ ಡಾ.ಆರ್. ನಾಗನಗೌಡರಂತಹ ನಿಸ್ವಾರ್ಥ ಮುಂದಾಳುಗಳು ಸಿಕ್ಕಿದ್ದು ಹೊಸಪೇಟೆಯ ಭಾಗ್ಯ. ಆಗಿನ ಕಾಲದಲ್ಲಿ ಅತಿವಿರಳವಾದ ಕೃಷಿ ವಿಜ್ಞಾನದಲ್ಲಿ ಎಂ.ಎಸ್.ಸಿ.,ಪಿಎಚ್.ಡಿ. ಪದವಿ ಪಡೆದು ತಂತ್ರಜ್ಞರಾದ ಶ್ರೀ ಗೌಡರು ಸ್ವತಃ ಕೃಷಿಯನ್ನು ಅವಲಂಬಿಸಿ , ರೈತರ ಮುನ್ನಡೆಗೆ ಉದಾಹರಣೆಯಾಗಿ, ಜನತೆಯ ಕಲ್ಯಾಣಕ್ಕೆ ನಂದಾದೀಪವಾಗಿ ನಿಂತರು.
(ಕಬ್ಬು ಬೆಳೆಗಾರರ ಹೋರಾಟ, ಮುನ್ನುಡಿ, ಪುಟ.vii)

೬. ಶ್ರೀ ಜಂಬುನಾಥ ಪ್ರಾಚಾರ್ಯರು, ಶ್ರೀ ಜಂಬುನಾಥೇಶ್ವರ ಉಚಿತ ವಾಣಿಜ್ಯ ವಿದ್ಯಾಲಯ ಹೊಸಪೇಟೆ ಪ್ರತಿಭಾ ಸಂಪನ್ನರು, ಸಹೃದಯರು, ಸರಳ ಜೀವಿಗಳು, ರೈತರೆಂದರೆ ಅವರಿಗೆ ತುಂಬಾ ಪ್ರೀತಿ. ಧರ್ಮ ಸಂಸ್ಕೃತಿ ಸಮಾಜಸೇವೆ ಶಿಕ್ಷಣ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಮಹಾನುಭಾವರು. ಸ್ವಾತಂತ್ರ ಚಳುವಳಿಯಲ್ಲಿ ಪಾಲ್ಗೊಂಡವರು. ಮದ್ರಾಸು ಪ್ರಾಂತದಲ್ಲಿರುವ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿಯೊಬ್ಬರ ಪ್ರೀತಿಗೆ ಪಾತ್ರರಾದವರು. ಇವರು ವ್ಯವಸಾಯ ಮಂತ್ರಿಗಳಾಗಿ ರೈತರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಸಕ್ಕರೆ ಕಾರ್ಖಾನೆ, ರೈತ ಭವನ, ಸಹಕಾರ ಕೇಂದ್ರ ಬ್ಯಾಂಕ, ಸಹಕಾರಿ ಪತ್ತಿನ ಸಂಘ ಹೀಗೆ ಅನೇಕ ಸಂಸ್ಥೆಗಳನ್ನು ಹುಟ್ಟು ಹಾಕಿದ ಮಹಾತ್ಮರು. ೧೯೬೮ರಲ್ಲಿ ನಮ್ಮ ಶ್ರೀ ಜಂಬುಕೇಶ್ವರ ಉಚಿತ ವಾಣಿಜ್ಯ

ವಿದ್ಯಾಲಯದಲ್ಲಿ ನಾನು ಪಾಠ ಮಾಡುವಾಗ ಗೌಡರು ಆ ಸಮಯಕ್ಕೆ ಬಂದು ವಿದ್ಯಾರ್ಥಿಗಳಿಗೆ ಸೂಕ್ತವಾದ ತಿಳುವಳಿಕೆಯನ್ನು ಕೊಟ್ಟಿದ್ದು ಈ ರೀತಿ ಇದೆ. ಮಕ್ಕಳೇ, ನಿಮ್ಮ ಗುರುಗಳು ನಿಜವಾದ ಸೇವೆಯನ್ನು ಕೈಕೊಂಡಿದ್ದಾರೆ. ಅವರು ಹೇಳಿಕೊಡುವ ಪ್ರತಿಯೊಂದು ಅಭ್ಯಾಸವನ್ನು ನಾನು ಶ್ರೀಯುತ ಪುಣ್ಯಮೂರ್ತಿ ಪಂಪಣ್ಣನವರಿಂದ ಹಾಗೂ ಡ್ರಾಯಿಂಗ್ ಅಧ್ಯಕ್ಷರಾದ ವೆಂಕಣ್ಣನವರು ಹಾಗೂ ಶ್ರೀ ವಸ್ತ್ರದ ಜಂಬಯ್ಯ ನವರು ಹೇಳಿದ ಪ್ರಕಾರ ಇಲ್ಲಿ ನನಗೆ ನಿಜಾಂಶ ತಿಳಿದು ಸಂತೋಷ ಆಗಿದೆ. ಆದರೆ ತಾವು ಹೇಗಿರಬೇಕೆಂದರೆ ಕಲ್ಪವೃಕ್ಷ ಅಂದರೆ ತೆಂಗಿನಗಿಡ ಬೇರಿನಿಂದ ಹಿಡಿದು ಎಲೆಯ ತುದಿಯವರೆಗೂ ಉಪಯೋಗವಾಗುವಂತೆ ತಾವು ತಮ್ಮನ್ನು ಜನರ ಸೇವೆಗಾಗಿ ಮುಡುಪಾಗಿಡಿರಿ. ಸುಸಂಸ್ಕೃತರಾಗಿ ಬಾಳಿರಿ ಎನ್ನುವ ನುಡಿಮುತ್ತುಗಳಿಂದ ಆಶೀರ್ವಾದ ಮಾಡಿದರು. ಒಬ್ಬ ಮಾಜಿ ಮಂತ್ರಿಯವರು ಎನ್ನುವ ಅಹಂಕಾರ ರಹಿತರಾದ ಗೌಡ್ರು ತುಂಬ ಸರಳ ಜೀವಿಗಳು ಎನ್ನುವ ವಿಷಯ ತಿಳಿದು ಮನಸ್ಸಿಗೆ ಬಹಳ ಆನಂದವಾಯ್ತು.

೭. ಎನ್.ಬಿ.ಬಿಜ್ಜೂರ ನಿವೃತ್ತ ನ್ಯಾಯಾಧೀಶರ, ಹುರುಳಿಕುಪ್ಪಿ, ಸವಣೂರ ತಾಲೂಕು, ಹಾವೇರಿ ಜಿಲ್ಲೆ ಡಾ.ಆರ್.ನಾಗನಗೌಡರು ಪಿಎಚ್.ಡಿ ಅಮೇರಿಕ ಅವರನ್ನು ರಾಜಾಜಿಯವರು ಮದ್ರಾಸ್ ಸರಕಾರದಲ್ಲಿ ಮಂತ್ರಿಯಾಗಿ ಮಾಡಿದ್ದರು. ಗೌಡರು ಒಬ್ಬರೇ ಕುರುಬ ಸಮಾಜದ ಎಂ.ಎಲ್.ಎ ಯಾಗಿದ್ದರು. ೧೯೬೧ರಲ್ಲಿ ಗೌಡರು ನಂದೀಬೆಟ್ಟದಲ್ಲಿ ಕುಳಿತು ಹಿಂದುಳಿದವರ ಸಮಿತಿಯ ರಿಪೋರ್ಟು ಬರೆದರು. ಆ ರಿಪೋರ್ಟು ಶ್ರೀ ಕೆ.ಎಚ್.ಪಾಟೀಲ ಹುಲಕೋಟಿ ಹುಲಿ ಅವರಿಗೆ ಎಲ್ಲ ಸಹಾಯ ಮಾಡಿತ್ತು. ರಾಣೆಬೆನ್ನೂರಲ್ಲಿ ಕುರುಬರ ಮಹಾಸಭಾದ ಅಧ್ಯಕ್ಷರಾಗಿದ್ದರು. ಮುಂಬಯಿ ಮುಖ್ಯಮಂತ್ರಿ ಶ್ರೀ ಬಿ.ಜಿ.ಖೇರ ಅವರ ಕಡೆಗೆ ಕುರುಬರ ಬಗ್ಗೆ ನಿಯೋಗವನ್ನು ಒಯ್ದಿದ್ದರು. ಮುಂಬಯಿ ಕರ್ನಾಟಕದಲ್ಲಿ ಕುರಿ ಉಣ್ಣೆ, ಕಂಬಳಿ ನಿಗಮ ಇತ್ಯಾದಿ ಗಳು ಅವರ ಸಲಹೆಯ ಮೇರೆಗೆ ಆಗಿದ್ದವು. ನನಗೆ ಗೌಡರ ಬಗೆಗೆ ಬಹಳ ಅಭಿಮಾನ, ಗೌರವ. (೧೫.೫.೨೦೦೮ರಂದು ಶ್ರೀ ಬಿಜ್ಜೂರ ಅವರು ನನಗೆ ಬರೆದ ಪತ್ರದಲ್ಲಿ)

೮. ಜಿ.ನಾಗಲಿಂಗಪ್ಪ ವರ್ತಕರು ಮತ್ತು ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಘಟಕ, ಹೊಸಪೇಟೆ ನಾಗನಗೌಡರು ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗಾಗಿ ಹಗಲಿರುಳು ದುಡಿದವರು. ಸಾದಾ ಸೀದಾ ಬದುಕನ್ನು ಸಾಗಿಸುತ್ತಿದ್ದ ಅವರು ಮಂತ್ರಿಯಾಗಿ ಹೊಸಪೇಟೆಗೆ ಬಂದರೆ ಸರಕಾರಿ ವಾಹನವನ್ನು ಬಳಸುತ್ತಿದ್ದಿಲ್ಲ. ಬದಲಾಗಿ ತಮ್ಮ ಸೈಕಲ್ ಮೂಲಕ ಸ್ನೇಹಿತರನ್ನು ಬಂಧುಗಳನ್ನು ಭೇಟಿಮಾಡುವುದು, ಗದ್ದೆಗೆ ಹೋಗುವುದು, ಸಾಮಾಜಿಕ ಕಾರ್ಯಗಳಿಗೆ ಹೋಗುತ್ತಿದ್ದರು. ಇಂದಿನ ರಾಜಕಾರಣಿಗಳು

ಹೇಗಿರಬೇಕೆಂಬುದಕ್ಕೆ ಅವರು ಮಾದರಿಯಾಗಿದ್ದರು. ಚುನಾವಣೆಯಲ್ಲಿ ಸೋತವ್ಯಕ್ತಿಯ ಮನೆಗೆ ಹೋಗಿ ಅವರಿಗೆ ಹೂಮಾಲೆ ಹಾಕಿ, ನಿಮ್ಮ ಸೇವೆಗೆ ನಾನು ಸಿದ್ಧನಿದ್ದೇನೆ. ಎಲ್ಲರೂ ಸೇರಿ ಹೊಸಪೇಟೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸೋಣ ಎಂದು ಹೇಳುತ್ತಿದ್ದರು.

೯. ಎಂ.ಕರಿಯಪ್ಪ ನಿವೃತ್ತ ಜಂಟಿ ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು ಮದರಾಸು ಪ್ರಾಂತ್ಯದಲ್ಲಿ ರಾಜಾಜಿಯವರಂತಹ ರಾಜಕೀಯ ಮುತ್ಸದ್ಧಿಗಳ ಜೊತೆಗೆ ಬಳ್ಳಾರಿ ಜಿಲ್ಲೆಯ ಹೊಸಪೇಟೆಯವರಾದ ಡಾ.ಆರ್.ನಾಗನಗೌಡರು ತಮ್ಮ ಪ್ರತಿಭೆಯಿಂದಾಗಿ ಮುಂದುವರಿದ ಎಲ್ಲ ರಾಜಕಾರಿಣಿಗಳಿಗೆ ಸಮಾನರಾಗಿ ಸಚಿವರೂ ಆಗಿ ಬಾಳಿದವರಾಗಿದ್ದರು. ಬಹುಶಃ ಹಡಗಿನಲ್ಲಿ ಸಾಗರೋತ್ತರ ಪಯಣ ಮಾಡಿ ಕೃಷಿಯಲ್ಲಿ ಡಾಕ್ಟರೇಟ್ ಪಡೆದ ಪ್ರಥಮರೆನಿಸಿ ಡಾ.ಆರ್.ನಾಗನಗೌಡರು ಈ ಸಮಾಜಕ್ಕೆ ಕೀರ್ತಿಯನ್ನು ತಂದು ಕೊಟ್ಟ ಘನತೆವೆತ್ತ ರಾಜಕಾರಣಿ ಎನಿಸಿಕೊಂಡಿರುವರು. ತಾವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ಹೋದ ಕಾಲದಲ್ಲಿ ಭಾರತದ ನವಮನ್ವಂತರದ ಗಾಂಧೀಜಿ ಎನಿಸಿದ ಜಯಪ್ರಕಾಶ್ ನಾರಾಯಣ ಅವರಿಗೆ ಕೆಲಕಾಲ ಆಶ್ರಯ ನೀಡಿದ್ದರೆಂಬ ಹೆಗ್ಗಳಿಕೆಗೆ ಡಾ.ನಾಗನ ಗೌಡರು ಪಾತ್ರರಾಗಿದ್ದುದು ಕುರುಬ ಸಮಾಜದ ನಮಗೆಲ್ಲ ಹೆಮ್ಮೆಯ ವಿಷಯ. (ಮೇಷ ವಿಜಯ, ಪುಟ. ೧೯೯)

## ೧೭. ನಾಗನಗೌಡರ ಸ್ಮರಣೆ

ಇಂಥ ಒಬ್ಬ ಅಪರೂಪದ ವ್ಯಕ್ತಿಯ ಸ್ಮರಣಾರ್ಥವಾಗಿ ರೈತ ಸಮುದಾಯವು ಹೊಸಪೇಟೆಯಲ್ಲಿ ರೈತ ಭವನವನ್ನು ನಿರ್ಮಿಸಿದೆ. ಅನಂತಶಯನಗುಡಿಯಲ್ಲಿ ಅವರ ಹೆಸರಿನಲ್ಲಿ ಸಾರ್ವಜನಿಕ ಗ್ರಂಥಾಲಯವೊಂದನ್ನು ಸ್ಥಾಪಿಸಲಾಗಿದೆ. ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಾಗನಗೌಡರ ಸ್ಮರಣಾರ್ಥ ಕ್ರೆಡಿಟ್ ಕಾರ್ಡ ಪಾಸ ಪುಸ್ತಕವನ್ನು ಹೊರತಂದಿದೆ. ಆದರೆ ಇದು ಸಾಲದು. ಗೌಡರ ಹೆಸರಿನಲ್ಲಿ ಕೃಷಿ ಅಧ್ಯಯನ ಕೇಂದ್ರದ ಸ್ಥಾಪನೆ, ರಾಜ್ಯದ ಯಾವುದಾದರೂ ಕೃಷಿ ವಿಶ್ವವಿದ್ಯಾಲಯಕ್ಕೆ ನಾಗನಗೌಡರ ಹೆಸರನ್ನು ಇಡಬೇಕು. ಹೊಸಪೇಟೆಯ ಪ್ರಮುಖ ಬೀದಿಗೆ ನಾಗನಗೌಡ ರಸ್ತೆ, ವರ್ತುಲ ನಾಮಕರಣ, ಹೊಸಪೇಟೆ ಮತ್ತು ಬಳ್ಳಾರಿಯ ಪ್ರಮುಖ ಸ್ಥಳದಲ್ಲಿ ನಾಗನಗೌಡ ಪ್ರತಿಮೆಯನ್ನು ಪ್ರತಿಷ್ಠಾಪಿಸುವುದು. ಪ್ರತಿವರ್ಷ ಪ್ರಗತಿಪರ ರೈತರನ್ನು ಗುರುತಿಸಿ ಡಾ. ನಾಗನಗೌಡ ಪ್ರಶಸ್ತಿ ನೀಡಿ ಸನ್ಮಾನಿಸುವಂಥ ಅನೇಕ ವಿಧಾಯಕ ಕಾರ್ಯಗಳನ್ನು ಜಾರಿಗೆ ತಂದರೆ ಅದೇ ಅವರನ್ನು ಮತ್ತೆ ಮತ್ತೆ ನೆನಪಿಸುವಂತಾಗುತ್ತದೆ. ಈ ನಿಟ್ಟಿನಲ್ಲಿ ಸರಕಾರ, ಸಮಾಜ, ಸಾರ್ವಜನಿಕ ಸಂಘಸಂಸ್ಥೆಗಳು, ನಾಗನಗೌಡರ ಮನೆತನದವರು ತೀವ್ರ ಗಮನಹರಿಸಬೇಕಾದ ಅಗತ್ಯವಿದೆ.

## ೧೮. ನಾಗನಗೌಡ ಅವರ ಜೀವನದ ಪ್ರಮುಖ ಘಟನೆಗಳು

- ಜನನ ೧೫.೦೨.೧೮೯೪
- ಇಂಟರ್ ಮಿಡಿಯೆಟ್ ಶಿಕ್ಷಣ, ಕ್ರಿಶ್ಚಿಯನ್ ಕಾಲೇಜು ಮದ್ರಾಸ್ ೧೯೦೯
- ಬಿ.ಎಸ್‌ಸಿ ಅಗ್ರಿ, ಯು.ಎಸ್.ಎ ೧೯೧೨
- ಎಂ.ಎಸ್‌ಸಿ ಅಗ್ರಿ,ಯು.ಎಸ್.ಎ ೧೯೧೬
- ಪಿಎಚ್.ಡಿ, soil bacterology ಯು.ಎಸ್.ಎ ೧೯೧೯
- Central Govt of British, Director of Agriculture officer, ೧೯೨೧
- ಮದ್ರಾಸ್ ಸರಕಾರದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ನೇಮಕ ೧೯೨೬-೩೫
- ಮುಂಬಯಿ, ಮದರಾಸ್ ಮತ್ತು ಕಂಡಗು ಪ್ರಾಂತ್ಯಗಳನ್ನು ಸೇರಿಸಿ
  ಕರ್ನಾಟಕ ಪ್ರಾಂತ್ಯ ರಚನೆಗೆ ಒತ್ತಾಯ ೮.೮.೧೯೨೯
- ಹೊಸಪೇಟೆ ಪುರಸಭೆಯ ಅಧ್ಯಕ್ಷ ೪.೧೧.೧೯೨೯ ರಿಂದ ೩೧.೧೦.೧೯೩೧
- ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ೧೯೩೪
- ಸಾವಿತ್ರಿಬಾಯಿಯವರೊಡನೆ ಮದುವೆ ೨೧.೦೨.೧೯೩೫
- ಮಗಳು ಮೀನಾಕ್ಷಿ ಜನನ ೨೪.೦೪.೧೯೩೬
- ಮಗ ಚಾರುಚಂದ್ರನ ಜನನ ೧೯೩೮
- ಸೊಲ್ಲಾಪುರದಲ್ಲಿ ನಡೆದ ಕರ್ನಾಟಕ ಏಕೀಕರಣ ಸಂಘದ
  ೮ನೆಯ ಪರಿಷತ್ತಿನ ಅಧ್ಯಕ್ಷತೆ, ಏಪ್ರಿಲ್ ೧೯೪೦
- ಸ್ವಾತಂತ್ರ್ಯ ಹೋರಾಟಕ್ಕಾಗಿ ವೈಯಕ್ತಿಕ ಸತ್ಯಾಗ್ರಹ ಮಾಡಿ ಜೈಲಿಗೆ
  ಹೋಗಿದ್ದು, ಹೊಸಪೇಟೆಯ ಜನತೆ ಸನ್ಮಾನ ಮಾಡಿ ಗೌರವಿಸಿದ್ದು ೧೯೪೦
- ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ೧೯೪೬ರಿಂದ ೧೯೫೫
- ತುಂಗಭದ್ರಾ ಅಣೆಕಟ್ಟು ಯೋಜನೆಯಲ್ಲಿ ಮುಳುಗಡೆಯಾದ ಮೂವತ್ತೂರು
  ಹಳ್ಳಿಗಳ ಜನರಿಗೆ ಪರಿಹಾರ ಧನ ಹೆಚ್ಚಿಸುವಂತೆ ಇವರ ನೇತೃತ್ವದಲ್ಲಿ
  ಮದ್ರಾಸ್‌ಗೆ ತೆರಳಿ ಮುಖ್ಯಮಂತ್ರಿಗಳಾದ ರಾಜಾಜಿ ಹಾಗೂ ಕಂದಾಯ ಮಂತ್ರಿ
  ಭಕ್ತವತ್ಸಲಂ ಅವರನ್ನು ಆಗ್ರಹಪಡಿಸಿದ್ದು ೧೯೪೬
- ಬಳ್ಳಾರಿ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ೧.೪.೧೯೪೭ ರಿಂದ ೧೮.೪.೧೯೪೭

- ತುಂಗಭದ್ರಾ ಆಣೆಕಟ್ಟಿನ ಉದ್ಘಾಟನೆಯ ಸಂದರ್ಭದಲ್ಲಿ ಗಿಣಿಗೇರಿಯ ಸಮೀಪ ನಿರ್ಮಿಸಿದ ತಾತ್ಕಾಲಿಕ ವಿಮಾನ ನಿಲ್ದಾಣದಲ್ಲಿ ಪಂಡಿತ ನೆಹರು ಅವರನ್ನು ಸ್ವಾಗತಿಸಿದ ಮುಖ್ಯರಲ್ಲಿ ನಾಗನಗೌಡರು ಪ್ರಮುಖರು ೧೯೫೧
- ಮೈಸೂರಿನೊಡನೆ ಬಳ್ಳಾರಿ ವಿಲೀನವಾದ ಸಂದರ್ಭದಲ್ಲಿ *ವೆಲ್‌ಕಂ ಬಳ್ಳಾರಿ* ಸ್ಮರಣ ಸಂಚಿಕೆಗೆ Agriculture in Bellary District ಲೇಖನ ಪ್ರಕಟ ೧.೧೦.೧೯೫೩
- ಬಳ್ಳಾರಿ ಮೈಸೂರು ವಿಲೀನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದು ೨.೧೦.೧೯೫೩
- ಮದ್ರಾಸ್ ಪ್ರಾಂತದ ಶಾಸಕರಾಗಿ ಆಯ್ಕೆ ಏಪ್ರಿಲ್೧೯೫೨- ಅಕ್ಟೋಬರ್೧೯೫೩
- ಮೈಸೂರು ವಿಧಾನ ಸಭೆಯ ಸದಸ್ಯ ೧೯೫೩-೫೭
- ಬಳ್ಳಾರಿಯಲ್ಲಿ ರಾಜ್ಯ ಪುನರ್ವಿಂಗಡನಾ ಆಯೋಗಕ್ಕೆ ಕರ್ನಾಟಕ ಏಕೀಕರಣದ ಪರವಾಗಿ ಮನವಿ ಸಲ್ಲಿಕೆ, ೬.೯.೧೯೫೪
- ಬಳ್ಳಾರಿಯಲ್ಲಿ ನಡೆದ ಸಂಸ್ಕೃತಿ ಪ್ರಸಾರ ದಿನಾಚರಣೆಯ ಉತ್ಸವದ ಅಧ್ಯಕ್ಷತೆ ೬.೧೨.೧೯೫೪
- ಇಟಗಿ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ನಾಡಹಬ್ಬ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದು ೭,೮,೯, ಅಗಷ್ಟ ೧೯೫೫
- ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸತ್ಕಾರ ಸನ್ಮಾನ ೨೯.೦೮.೧೯೫೬
- ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಕನ್ನಡ ರಾಜ್ಯೋದಯ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದು ೧.೧೧.೧೯೫೬
- ಹೊಸಪೇಟೆ ವಿಧಾನಸಭಾ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಆಯ್ಕೆ೧೯೫೭
- ರೈತ ಸಮ್ಮೇಳನವನ್ನು ಏರ್ಪಡಿಸಿದ ಮುಖಂಡರಲ್ಲಿ ಒಬ್ಬರಾಗಿ ೨೦.೦೯.೧೯೫೯
- ಕೃಷಿ ಖಾತೆ ಸಚಿವರಾಗಿ,ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿ , ೧೯೬೨
- ಮೂರನೇ ವಿಧಾನಸಭಾ ಚುನಾವಣೆಯಲ್ಲಿ ಸೋಲು ೧೯೬೨
- ಹಿಂದುಳಿದ ವರ್ಗಗಳ ಅಧ್ಯಯನ ಸಮಿತಿ ಅಧ್ಯಕ್ಷರಾಗಿ ಸೇವೆ, ೧೯೫೭-೬೨
- ಕರ್ನಾಟಕ ವಿಧಾನ ಸಭೆಗೆ ಅದೇ ಕ್ಷೇತ್ರದಿಂದ ಆಯ್ಕೆ ೧೯೬೭
- ನಾಗನಗೌಡರ ನಿಧನ ೧೯.೦೭.೧೯೬೯
- ಸಾವಿತ್ರಿಬಾಯಿಯವರ ನಿಧನ ೦೪.೦೮.೧೯೮೨

* * *

೧೯. ಆರ್. ನಾಗನಗೌಡ ಅವರ ಸ್ವ ಹಸ್ತಾಕ್ಷರದ ಮಾದರಿ

Hospet
16.9.62

Dear Shri Bhaskar:

This is to introduce to you Shri G. Posappa and three of his friends who are appearing for the SSLC supplementary exam. this month in your High School. Please give them accommodation in your Hostel & oblige.

Yours truly
R. Nagangoud

Shri J. P. Bhaskar
Wardlaw High School

## ೨೦. ಆರ್. ನಾಗನಗೌಡ ಅವರ ವಂಶಾವಳಿ

**ರಾಯದುರ್ಗದ ಗೋವಿಂದಪ್ಪ**(ನಾಗನಗೌಡರ ತಂದೆ)

- ವೆಂಕಮ್ಮ
- ಆರ್.ನಾಗನಗೌಡ (ಪತ್ನಿ - ಸಾವಿತ್ರಿಬಾಯಿ)
  - ಚಾರುಚಂದ್ರ (ಪತ್ನಿ - ಭಾನುಮತಿ)
    - ವಿದ್ಯಾ (ಮಗಳು)
  - ಮೀನಾಕ್ಷಿ (ಪತಿ - ಬಸವರಾಜು)
    - ಮೋಹನಕುಮಾರ(ಮಗ)
    - ಪ್ರಮೀಳಾ ಪ್ರಿಯದರ್ಶಿನಿ(ಮಗಳು)
  - ರವೀಂದ್ರನಾಥ(ನಿಧನ)
- ಅಂಜನಪ್ಪ
- ವೆಂಕಟಮ್ಮ

# ಭಾಗ ೨

## ಡಾ. ಆರ್. ನಾಗನಗೌಡ ಅವರ ಭಾಷಣಗಳು ಬರಹಗಳು ಮತ್ತು ಛಾಯಾಚಿತ್ರಗಳು

೧. ಮೂರನೆಯ ಕುರುಬರ ಪರಿಷತ್ತಿನ ಸರ್ವಾಧ್ಯಕ್ಷ ಭಾಷಣ

೨. ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಸಾಹಿತ್ಯೋತ್ಸವದ ಭಾಷಣ

೩. ಸಂಸ್ಕೃತಿ ಪ್ರಸಾರ ದಿನಾಚರಣೆಯ ಅಧ್ಯಕ್ಷ ಭಾಷಣ

೪. AGRICULTURE IN BELLARY DISTRICT ಲೇಖನ

೫. ಸಹಾಯಕ ಗ್ರಂಥಗಳು

೬. ಛಾಯಾಚಿತ್ರಗಳು

೧

## ೧೯೩೭ ರಲ್ಲಿ ರಾಣೇಬೆನ್ನೂರಿನಲ್ಲಿ ನಡೆದ ಮೂರನೆಯ ಕುರುಬರ ಪರಿಷತ್ತಿನ ಸರ್ವಾಧ್ಯಕ್ಷರಾದ ಡಾ.ಆರ್.ನಾಗನಗೌಡರು ಮಾಡಿದ ಭಾಷಣ

ಇಲ್ಲಿ ಸಮಾವೇಶಗೊಂಡಿರುವ ಕುರುಬರ ಸಮಾಜದ ಸೋದರ ಮತ್ತು ಸೋದರಿಯರೇ, ಮಹಿಳೆಯರೆ ಹಾಗೂ ಮಹನೀಯರೆ,

ಕರ್ನಾಟಕದ ಮೂರನೆಯ ಕುರುಬರ ಪರಿಷತ್ತಿನ ಅಧ್ಯಕ್ಷನಾಗಿ ನನ್ನನ್ನು ಇಂದು ಆರಿಸುವುದರ ಮೂಲಕ ನನಗೆ ವಿಶೇಷ ಗೌರವವನ್ನು ನೀಡಿರುವಿರಿ. ಮೊದಲ ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರಸ್ತುತ ಜಿಲ್ಲೆಯ ದೊಡ್ಡ ಭೂ ಹಿಡುವಳಿದಾರರಾದ ದಿವಂಗತ ಶ್ರೀ ಸೋಮನಗೌಡ ಬಸವನಗೌಡ ಪಾಟೀಲರು ವಹಿಸಿದ್ದರೆ, ಎರಡನೆಯ ಸಮ್ಮೇಳನವನ್ನು ಎಲ್ಲರೂ ಬಲ್ಲ ನಾಗರಿಕ ಗಣ್ಯವ್ಯಕ್ತಿ ಹಾಗೂ ನಮ್ಮ ಜನಾಂಗದ ಮುಖಂಡರಾದ ಮೈಸೂರಿನ ನೀಲಗಿರಿ ಜಿ.ಎಸ್. ಸಂಜೀವಯ್ಯ. ದೇಶವುಪ್ರಗತಿಯತ್ತ ಸಾಗುತ್ತಿರುವಾಗ ಸರಕಾರ ಮತ್ತು ಜನಸಾಮಾನ್ಯರಿಂದ ಕೃಷಿಗೆ ಮತ್ತು ಗುಡಿಕೈಗಾರಿಕೆಗೆ ಆದ್ಯತೆ ಮತ್ತು ಪ್ರಾಮುಖ್ಯತೆಯನ್ನು ಪಡೆಯುತ್ತಿರುವ ಈ ಸಂದರ್ಭದಲ್ಲಿ ಕುರಿಗಳ ಮಾಲೀಕರನ್ನೋ ಅಥವಾ ಕಂಬಳಿ ನೇಕಾರರನ್ನೋ ಮತ್ತು ಮಾರಾಟಗಾರರನ್ನೋ ಈ ಸಮ್ಮೇಳನದ ಅಧ್ಯಕ್ಷರ ಸ್ಥಾನಕ್ಕೆ ಆಯ್ದು ಗೌರವಿಸಿದ್ದರೆ ನಾನು ಇನ್ನೂ ಅಧಿಕ ಸಂತೋಷಪಡುತ್ತಿದ್ದೆ. ನಾನೊಬ್ಬ ಸಾಮಾನ್ಯ ರೈತನಾಗಿರುವುದರಿಂದ ಪ್ರಸ್ತುತ ಸಮ್ಮೇಳನದಲ್ಲಿ ಜರುಗುವ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಲ್ಲಿ ಕೆಲವು ಇತಿಮಿತಿಗಳು ಇರುತ್ತವೆ;ಇವೆ. ಏಕೆಂದರೆ ಕುರಿಸಾಕಣೆ ಮತ್ತು ಉಣ್ಣೆಯ ಕೈಗಾರಿಕೆಯನ್ನು ಕುರಿತು ನನಗೆ ಇನ್ನೂ ಅಧಿಕ ಕಾಳಜಿ ಇರಬೇಕು. ಕುರುಬ ಜನಾಂಗದ ಬಹುತೇಕ ಜನರು ಇಂದು ಕೃಷಿಯಲ್ಲಿ ತೊಡಗಿದ್ದಾರೆ. ಆದರೆ ಕೃಷಿಯು ಅಧಿಕ ಆದಾಯವನ್ನು ತರುತ್ತಿಲ್ಲ. ಇಂದು ಅದು ಅಧಿಕಗೊಂಡಿದ್ದು ಕುರುಬರಾದ ನಾವು ನಮ್ಮ ಪಾರಂಪರಿಕ ಜ್ಞಾನವಾದ ಕುರಿಸಾಕಣೆ ಮತ್ತು ಉಣ್ಣೆಯ ಉದ್ಯಮಗಳನ್ನು ಹೆಚ್ಚಾಗಿ ಅಭಿವೃದ್ಧಿಗೊಳಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಮೊದಲಿಗೆ ಈ ಸಮ್ಮೇಳನದ ಚರ್ಚೆಗಳಲ್ಲಿ ನನಗಿರುವ ತೊಡಕುಗಳತ್ತ ತಮ್ಮನ್ನು ಎಚ್ಚರಿಸಿ ಗಮನವನ್ನು ಸೆಳೆದು ತಮ್ಮ ಸಹಾಯ ಮತ್ತು ಸಲಹೆಗಳನ್ನು ಪಡೆದುಕೊಂಡು ಈ ನಿಟ್ಟಿನಲ್ಲಿ ಯೋಚಿಸುತ್ತೇನೆ.

ಮೊದಲಿಗೆ ಈ ಹಿಂದಿನ ಸಮ್ಮೇಳನಗಳಲ್ಲಿ ನಡೆದ ಕೆಲಸಗಳ ಬಗೆಗೆ ಪರಾಮರ್ಶಿಸುವುದು ಸೂಕ್ತವೆಂದು ಭಾವಿಸುತ್ತೇನೆ. ೩.೭.೧೯೨೦ರಂದು ನಲವಡಿ(ಧಾರವಾಡ ಜಿಲ್ಲೆ, ನವಲಗುಂದ ತಾಲೂಕ)ಯಲ್ಲಿ ನಡೆದ ಮೊದಲಿನ ಪರಿಷತ್ತನ್ನು ಮರೆಯಲಾಗುವುದಿಲ್ಲ. ಇದು ನಮ್ಮ ಸಮಾಜದ ಇತಿಹಾಸವನ್ನೇ ಬದಲಾಯಿಸಿದ ದಿನವಾಗಿದೆ. ಅದರಲ್ಲಿ ತೆಗೆದುಕೊಂಡ ನಿರ್ಣಯದಂತೆ ಸಮಾಜದ ಶಾಶ್ವತ ಸಂಘವನ್ನು ರಚಿಸಲು ಹಾಗೂ ಅದರಂತೆ ಕರ್ನಾಟಕ ಕುರುಬರ ಸಂಘವು ಸ್ಥಾಪಿತವಾಯಿತು. ಕುರುಬ ಜನಾಂಗದ ಸಾಮಾಜಿಕ, ನೈತಿಕ, ಶೈಕ್ಷಣಿಕ, ಆರ್ಥಿಕ, ವಾಣಿಜ್ಯ ಮತ್ತು ಕೈಗಾರಿಕಾಭಿವೃದ್ಧಿಗಳಿಗೆ ಮತ್ತು ಸಮಾಜದ ಏಳಿಗೆಗಾಗಿ ದುಡಿಯುವುದು ಸಂಘದ ಉದ್ದೇಶವಾಗಿದೆ. ಅಂದಿನಿಂದ ಸಂಘವು ಸಮಾಜದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಇತರೆ ಸೌಲಭ್ಯಗಳನ್ನು ನೀಡಿ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತ ಬಂದಿದೆ. ಈ ಕಾರ್ಯಕ್ಕಾಗಿ ಸಂಘವು ಹತ್ತುಸಾವಿರ ರೂಪಾಯಿಗಳ ನಿಧಿಯನ್ನು ಸಂಗ್ರಹಿಸಿದೆ. ಪ್ರಾರಂಭಿಕ ಹಂತದಲ್ಲಿ ಶ್ರೀ ಫಕೀರಪ್ಪ ನಲವಡಿ, ರಾವ್ ಬಹದ್ದೂರ್ ಕೆ.ವಿ.ಭದ್ರಾಪುರ ಮತ್ತು ಶ್ರೀ ಡಿ.ಎಲ್.ಪಾಟೀಲ ಇವರುಗಳು ನಮ್ಮ ಜನಾಂಗದ ಸದಸ್ಯರಲ್ಲದಿದ್ದರೂ ಅವರು ನೀಡಿರುವ ಸಹಕಾರಕ್ಕೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಸಂಘದ ಮೊದಲ ಕಾರ್ಯದರ್ಶಿಗಳಾದ ಶ್ರೀ ಬಿ.ಎಫ್.ಕಲ್ಲಣ್ಣವರ್ ಅವರು ಸಂಘವನ್ನು ಸಂಘಟಿಸಲು ಮತ್ತು ನಿಧಿಯನ್ನು ಸಂಗ್ರಹಿಸಲು ಮಾರ್ಗದರ್ಶನ ನೀಡಿರುತ್ತಾರೆ. ಅವರ ಉತ್ಸಾಹ, ಶಕ್ತಿ ಮತ್ತು ಸೇವೆಯನ್ನು ಸಂಘವು ಸದಾ ಸ್ಮರಿಸುತ್ತದೆ.

ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಸಂಘವು ನೀಡಿದೆ. ಸರಾಸರಿಯಾಗಿ ಹತ್ತು ರೂಪಾಯಿಯ ಹತ್ತು ಶಿಷ್ಯವೇತನವನ್ನು ವಾರ್ಷಿಕವಾಗಿ ನೀಡುತ್ತಲಿದೆ. ಪ್ರಸ್ತುತ ಹತ್ತು ಪ್ರೌಢಶಿಕ್ಷಣ ಮತ್ತು ಐದು ಸ್ನಾತಕೋತ್ತರ ಪದವೀಧರರಿಗೆ ಸಂಘವು ಶಿಷ್ಯವೇತನ ನೀಡಿದೆ. ಈಗ ಪ್ರೌಢಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹದಿನಾಲ್ಕು ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುತ್ತಿದೆ. ೧೯೩೩ರಲ್ಲಿ ಬಾಂಬೆಕರ್ನಾಟಕ ಕುರುಬರ ಸಹಕಾರ ಸಂಘವು ನೋಂದಾವಣೆಗೊಂಡಿತು. ಅತ್ಯಲ್ಪ ಶೇರು ಹೂಡಿಕೆಯಿಂದ ಪ್ರಾರಂಭಗೊಂಡು ಇದೀಗ ಬ್ಯಾಂಕಾಗಿ ಪರಿವರ್ತನೆಗೊಂಡಿದೆ. ಇದರಲ್ಲಿ ೯೦೦೦ ಷೇರು ಬಂಡವಾಳ ಹೊಂದಿದ್ದು ಮತ್ತು ಚಾಲ್ತಿ ಬಂಡವಾಳ (Working Capital) ೭೦,೦೦೦ ಸಾವಿರ ರೂಪಾಯಿದೊಂದಿಗೆ ಮತ್ತು ೬೦೦ ಸದಸ್ಯರಿಂದ ಬ್ಯಾಂಕಾಗಿ ಕಾರ್ಯನಿರ್ವಹಿಸುತ್ತಿದೆ.

ಎರಡನೆಯ ಸಮ್ಮೇಳನವು ೨೫, ಮೇ ೧೯೨೪ರಂದು ಬಂಕಾಪುರದಲ್ಲಿ ನಡೆಯಿತು. ತರುವಾಯ ಧಾರವಾಡ ಜಿಲ್ಲೆಯ ಸಮ್ಮೇಳನವು ಶ್ರೀ ಕೆ.ಬಿ.ಭದ್ರಾಪುರ (ಪ್ರಸ್ತುತ ರಾವ್ ಬಹದ್ದೂರ) ಅವರ ಅಧ್ಯಕ್ಷತೆಯಲ್ಲಿ ೧೨, ಜೂನ್ ೧೯೨೬ ರಂದು ದೇವಿಹೊಸೂರಿನಲ್ಲಿ ನಡೆಯಿತು.

ಇವುಗಳೊಂದಿಗೆ ಕಿರುಸಮ್ಮೇಲನಗಳು, ಕೌನ್ಸಿಲ್ ಮತ್ತು ಸಮಿತಿಯ ಸಭೆಗಳು ಜರುಗಿದ್ದು, ನಡಾವಳಿಗಳನ್ನು ಸರಕಾರಕ್ಕೆ ಕಳಿಸಲಾಗಿದೆ.

ಈ ಹಿಂದಿನ ಕೆಲಸಗಳನ್ನು ನೆನೆಯುವಾಗ ಶೈಕ್ಷಣಿಕ ನಿಧಿಯಿಂದ ಯುವಕರಲ್ಲಿ ವಿದ್ಯಾಶಕ್ತಿಯನ್ನು ಮೂಡಿಸುವ ಉತ್ತಮ ಕಾರ್ಯಗಳನ್ನು ನೆನೆಯುವುದು ಇಲ್ಲಿ ಸೂಕ್ತ. ಸಂಗ್ರಹವಾಗಿರುವ ನಿಧಿಯನ್ನು ನಮ್ಮ ಜನಾಂಗದ ಗಾತ್ರಕ್ಕೆ ಹೋಲಿಸಿದರೆ ಅದು ಕಡಿಮೆಯಿದೆ. ಮತ್ತು ಅದು ಕೈಗೊಂಡಿರುವ ಉತ್ತಮಕಾರ್ಯಗಳನ್ನು ಗಮನಿಸಿದಾಗ ಕರ್ನಾಟಕದಲ್ಲಿ ನಮ್ಮ ಜನಾಂಗದ ಲಕ್ಷಾಂತರ ಜನಗಳ ಸಂಖ್ಯೆಗನುಗುಣವಾಗಿ ಉದಾರವಾಗಿ ದೇಣಿಗೆಯನ್ನು ನೀಡಿ ವ್ಯವಸ್ಥಿತವಾಗಿ ನಿಧಿಯನ್ನು ಹಳ್ಳಿಗಳಿಂದ ಸಂಗ್ರಹಿಸಿ ಕುರುಬರ ಮದುವೆಗಳಲ್ಲಿ ಮತ್ತು ಹಬ್ಬಹುಣ್ಣಿಮೆಗಳಲ್ಲಿ ಸಣ್ಣಮೊತ್ತದ ಹಣವನ್ನು ಸಂಗ್ರಹಿಸಿ ನಿಧಿಯನ್ನು ಬೆಳೆಸಬೇಕೆಂದು ಇಲ್ಲಿ ನಾನು ಸೂಚಿಸುತ್ತೇನೆ. ಶಿಕ್ಷಣವು ನಮ್ಮ ಜನಾಂಗದ ಮುಖ್ಯ ಅವಶ್ಯಕತೆಯಾಗಿದೆ. ಎಲ್ಲಾ ಕುರುಬ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವು ಅವಶ್ಯವಾಗಿ ಇರಬೇಕೆಂದು ನಾನು ವಾದಿಸುತ್ತೇನೆ. ಮನೆಯನ್ನು ಶುಚಿಯಾಗಿಡಲು ನೆಲ್ಲಿ ಮಾಡುವ ಹಾಗೂ ಮನೆಯ ಹೊರಗೆ ಕುರಿಮಂದೆಯನ್ನು ಕಾಯುವ ತಮ್ಮ ಹೆತ್ತವರಿಗೆ ಬುತ್ತಿಯನ್ನು ತೆಗೆದುಕೊಂಡು ಹೋಗುವ ಕೆಲಸಗಳಲ್ಲಿ ಸಹಾಯಕವಾಗಿರುವ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಲ್ಲಿ ತೊಂದರೆಯಾಗ ಬಹುದೆಂದು ಭಾವಿಸುವವರಿದ್ದಾರೆ. ಉಣ್ಣೆ ಮತ್ತು ಕುರಿಕೈಗಾರಿಕೆ ಹಾಗೂ ನಮ್ಮ ಜನಾಂಗದ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗೆ ನಮ್ಮ ಮಕ್ಕಳು ಕನಿಷ್ಠ ಪ್ರಾಥಮಿಕ ಶಿಕ್ಷಣ ಹೊಂದಿರಬೇಕು. ಪ್ರಸ್ತುತ ಶಾಲೆಗಳಲ್ಲಿ ನೀಡಲಾಗುತ್ತಿರುವ ಪ್ರಾಥಮಿಕ ಶಿಕ್ಷಣವು ಅಷ್ಟಾಗಿ ಸಹಾಯವಾಗುವುದಿಲ್ಲ. ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟನಂತರ ಅನಕ್ಷರಸ್ತರಾಗದಂತೆ ತಡೆಯುವುದು ಪ್ರಾಥಮಿಕ ಶಿಕ್ಷಣವಾಗಿರಬೇಕು. ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಹತ್ತಿರ ಇರುವ ಉಣ್ಣೆ ಮತ್ತು ಕುರಿ ಕೈಗಾರಿಕೆಗಳ ಬಗೆಗೆ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮಗಳನ್ನು ಹೊಂದಿದ ಪಾಠವಿರಬೇಕು. ಮಕ್ಕಳ ದಿನನಿತ್ಯದ ಗೃಹಚಟುವಟಿಕೆ ಮತ್ತು ಮುಂದಿನ ಜೀವನದ ಕಸಬುಗಳಿಗೆ ಶಿಕ್ಷಣವು ಜೊತೆಗೂಡಿದರೆ ಗ್ರಾಮಸ್ಥರ ಏಳಿಗೆಯು ಸಾಧ್ಯ.

ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ಕಡ್ಡಾಯವಾಗಬೇಕೆಂದು ನಾನು ಪ್ರತಿಪಾದಿಸುತ್ತಿರುವಾಗಲೇ ಬುದ್ಧಿವಂತರು ಮತ್ತು ಸ್ಥಿತಿವಂತರು ಉನ್ನತವ್ಯಾಸಂಗಕ್ಕೆ ನಿರ್ಧಿಷ್ಟ ಗುರಿಯನ್ನು ಹೊಂದಿ ಉನ್ನತವ್ಯಾಸಂಗ ಮಾಡಬೇಕೆಂದು ಭಾವಿಸುತ್ತೇನೆ. ಸಾಮಾನ್ಯವಾಗಿ ಕುರಿಸಾಕಾಣಿಕೆಯು ಸರಳ ವ್ಯವಹಾರವಾಗಿದ್ದು ಇದನ್ನು ನಮ್ಮ ಯುವಜನಾಂಗವು ಲಾಭದಾಯಕವಾಗಿ ಪರಿವರ್ತಿಸಿ ಕೊಳ್ಳಬಹುದು. ಇದರೊಂದಿಗೆ ಹಲವಾರು ಸಮಸ್ಯೆಗಳು ಸಹ ಸೇರಿಕೊಂಡಿವೆ. ಉನ್ನತ ಶಿಕ್ಷಣ, ತರಬೇತಿ ಮತ್ತು ಸಲಕರಣೆಗಳು ಈ ಉದ್ಯಮಕ್ಕೆ ಬೇಕಾಗಿವೆ. ಕುರುಬರು ಕುರಿಸಾಕಾಣಿಕೆಯಿಂದ ಮಾತ್ರವಲ್ಲದೇ ಕುರಿವ್ಯಾಪಾರ ಉಣ್ಣೆ, ಕಂಬಳಿ ಉದ್ಯಮದಿಂದ ಅಧಿಕಲಾಭವನ್ನು ಪಡೆಯಬೇಕು. ಪ್ರಸ್ತುತ ಕುರುಬರೇತರರ ಕೈಯಲ್ಲಿಯೂ ಸಹ ಅಂತಹ ವ್ಯವಹಾರವಿದೆ.ಚರ್ಮ ಮತ್ತು ತೊಗಲಿನ ವ್ಯವಹಾರ ಅತ್ಯಂತ ಆಕರ್ಷಕವಾಗಿರುವುದರಿಂದ ಕುರುಬರ ಕೈಮೀರಿವೆ.

ಕುರುಬ ಜನಾಂಗದ ಯುವಕರು ಈ ಉದ್ಯಮದಲ್ಲಿ ತೊಡಗಿಕೊಳ್ಳಲು ಆಶಿಸಬೇಕು. ಇದಕ್ಕೆ ವಾಣಿಜ್ಯ, ವ್ಯವಹಾರ ಬ್ಯಾಂಕನಲ್ಲಿ ಉನ್ನತವ್ಯಾಸಂಗ ಮತ್ತು ಉದ್ಯಮದಲ್ಲಿ ಪ್ರತ್ಯಕ್ಷ ಅನುಭವಗಳು ಬೇಕಾಗಿದ್ದು, ಯುವಜನಾಂಗವು ಈ ನಿಟ್ಟಿನಲ್ಲಿ ಅರ್ಹತೆಯನ್ನು ಗಳಿಸಿ ಉದ್ಯಮದಲ್ಲಿ ಹಿಡಿತ ಸಾಧಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ಶಕ್ತಿಗಳು ಕೆಲಸ ಮಾಡುತ್ತವೆಯಾದರೂ ಕುರಿಸಾಕಾಣಿಕೆಯಲ್ಲಿ ತೊಡಗಿರುವ ಕುರುಬರು ಅಂತಿಮವಾಗಿ ಸಫಲರಾಗುವರೆಂಬುದು ನನ್ನ ಅನಿಸಿಕೆ.

ಮೆಕಾನಿಕಲ್ ಹಾಗೂ ಇಂಜನಿಯರಿಂಗ್ ವಿಷಯಾಸಕ್ತ ಯುವ ಕುರುಬರಿಗೆ ಈ ನಿಟ್ಟಿನಲ್ಲಿ ತರಬೇತಿಯನ್ನು ನೀಡಿ ಅವರಿಗೆ ಕಂಬಳಿ ನೇಯುವ ಉದ್ಯಮದಲ್ಲಿ ತೊಡಗಿಕೊಳ್ಳಲು ಉತ್ತೇಜಿಸಬೇಕು. ಕುರುಬರು ಪ್ರಸ್ತುತ ಉತ್ಪಾದಿಸಲಾಗುತ್ತಿರುವ ಉತ್ಪನ್ನಗಳ ಗುಣಮಟ್ಟ, ವಿನ್ಯಾಸ ಮತ್ತು ಮೃದುತನವನ್ನು ಅಧಿಕಗೊಳಿಸಬೇಕು. ಉಣ್ಣೆ ತಯಾರಿಸುವ ಸಲಕರಣೆ, ಉಣ್ಣೆ ನೂಲುವ (Spinning)ಯಂತ್ರಗಳನ್ನು ಅಭಿವೃದ್ಧಿಗೊಳಿಸಬೇಕು. ಮಗ್ಗಗಳನ್ನೂ ಇನ್ನೂ ಅಧಿಕವಾಗಿ ಸಮರ್ಥಗೊಳಿಸಬೇಕು. ಇವೆಲ್ಲವೂ ಅನಕ್ಷರಸ್ಥ ಕುರುಬರಿಂದ ಕೈಗೊಳ್ಳಲು ಹಾಗೂ ಕುರುಬರಾಗಿ ಜನಿಸದವರಿಂದ ಮತ್ತು ವೃತ್ತಿಪರ ಕಂಬಳಿ ನೇಕಾರರಿಂದ ಇಂತಹ ಉಪಕರಣಗಳನ್ನು ತೃಪ್ತಿಕರವಾಗಿ ವಿನ್ಯಾಸಗೊಳಿಸುವುದನ್ನು ನಾವು ನಿರೀಕ್ಷಿಸುವಂತಿಲ್ಲ. ಕಲಾತ್ಮಕ ಅಭಿರುಚಿ ಮತ್ತು ಕಂಬಳಿ ನೇಯ್ಗೆಯ ಹೊಳಹುಗಳು ಅಂತಿಮವಾಗಿ ಕಂಬಳಿ ನೇಕಾರರಿಗೆ ಮಾತ್ರ ಸೀಮಿತವಾಗಿದ್ದು ಅವರುಗಳು ಮಾತ್ರವೇ ತಮ್ಮ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಕೊಳ್ಳಲು ಸಮರ್ಥರು. ಆದ್ದರಿಂದ ಈ ಕೆಲಸದಲ್ಲಿ ತೊಡಗುವ ಪ್ರತಿಭಾವಂತ ಯುವ ಜನಾಂಗದವರು ಮೆಕ್ಯಾನಿಕಲ್ ಮತ್ತು ಇಂಜನಿಯರಿಂಗ್ ಕ್ಷೇತ್ರದಲ್ಲಿ ತರಬೇತಿಯನ್ನು ಪಡೆಯಬೇಕೆಂಬುದು ನನ್ನ ಸಲಹೆ. ವ್ಯವಸಾಯ ಮತ್ತು ಹೈನುಗಾರಿಕೆಗಳಲ್ಲಿ ತರಬೇತಿಯನ್ನು ಯುವಜನಾಂಗವು ಹೊಂದಿ ಕುರಿಗಳ ಆಯ್ಕೆ, ಸಾಕಾಣಿಕೆ ಮತ್ತು ಅಭಿವೃದ್ಧಿಯನ್ನು ಅಲ್ಪವೆಚ್ಚ ದಲ್ಲಿ ಮಾಡಿ ಯುವಜನಾಂಗವನ್ನೇ ತರಬೇತುಗೊಳಿಸಬೇಕು.

ಇಂದಿನ ದಿನಗಳಲ್ಲಿ ಸರ್ಕಾರಿ ನೌಕರಿಗಳು ವಿರಳವಾಗುತ್ತಿವೆ. ಹಾಗೂ ಪ್ರತಿಯೊಬ್ಬ ವಿದ್ಯಾವಂತ ಯುವಕರಿಗೆ ನೌಕರಿ ದೊರಕುತ್ತದೆ ಎಂದು ನಿರೀಕ್ಷಿಸುವುದು ಮೂರ್ಖತನ. ಸರಕಾರವು ತನ್ನ ಕೆಲಸಗಳನ್ನು ಮುಂದುವರಿಸಲು ಸಮಾಜದ ಎಲ್ಲಾ ವರ್ಗಕ್ಕೆ ಸೇರಿದ ನೌಕರರ ಪ್ರಾತಿನಿಧ್ಯವಿರುವುದು ಸಮಂಜಸ. ಇದರಿಂದ ಎಲ್ಲಾ ವರ್ಗಕ್ಕೆ ಸೇರಿದವರು ಸರಕಾರದ ಕೆಲಸವನ್ನೇ ಮಾಡುವ ಅವಕಾಶವಾಗುತ್ತದೆ. ಸರಕಾರದ ಕೆಲಸವನ್ನು ನಿರ್ವಹಿಸಲು ಉನ್ನತಶಿಕ್ಷಣ ಪಡೆದವರು ಬೇಕಾಗುತ್ತಾರೆ. ಆದ್ದರಿಂದ ಇತರೆ ಜನಾಂಗದವರೊಂದಿಗೆ ಸ್ಪರ್ಧಾತ್ಮಕವಾಗಿ ನಿಲ್ಲಬಲ್ಲಂತಹ ನಮ್ಮ ಜನಾಂಗದ ಪ್ರತಿಭಾವಂತರು ಅದರಲ್ಲಿ(ಸರಕಾರದಲ್ಲಿ) ಸೇರಲು ಪ್ರಯತ್ನಿಸಬೇಕು.

ಅಧಿಕ ಸಂಖ್ಯೆಯಲ್ಲಿ ಸಾರ್ವಜನಿಕ ಕೆಲಸಗಾರರನ್ನೇ ದೇಶಕ್ಕೆ ನಮ್ಮ ಜನಾಂಗವು ನೀಡಬೇಕು ಮತ್ತು ಅಂಥವರ ಸಂಖ್ಯೆಯು ಅಧಿಕಗೊಂಡಲ್ಲಿ ಆದರ ಕೀರ್ತಿಯು ಸಹ ಇಮ್ಮಡಿಸುತ್ತದೆ.

ಕುರುಬರಾದ ನಾವು ನಮ್ಮ ದೇಶಬಾಂಧವರು ಮತ್ತು ದೇಶಕ್ಕೆ ನಮ್ಮ ಭಾಗವನ್ನು ನೀಡಲು ವಿಫಲರಾಗಬಾರದು. ನಮ್ಮ ಹಿತ ಲಾಭ ಮತ್ತು ಸಿರಿತನಕ್ಕೆ ಅಧಿಕವಾಗಿ ಒತ್ತು ನೀಡಿ ಸದಾ ನಮ್ಮ ಸಾಮಾನ್ಯ ಕೆಲಸಗಳಲ್ಲಿ ಮುಳುಗಿರಬಾರದು. ನಮ್ಮಲ್ಲಿ ಯಾರಿಗೆ ಸಂಪತ್ತು ಇದೆಯೋ ಅವರು ಸಾರ್ವಜನಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಶ್ರಮಿಸಬೇಕು. ನಮ್ಮ ಜನಾಂಗಕ್ಕೆ ಸಲ್ಲಿಸುವ ಸೇವೆಯೇ ಸಾರ್ವಜನಿಕ ಕೆಲಸವಾಗುತ್ತದೆ. ಇಂತಹ ಕೆಲಸಕ್ಕೆ ಶಿಕ್ಷಣ ತರಬೇತಿ ಬೇಕಾಗುತ್ತದೆ ಮತ್ತು ಅವೆರಡಕ್ಕೂ ಸಜ್ಜುಗೊಳ್ಳಬೇಕು.

ಕುರುಬರು

ಮುಂಬಯಿ ಪ್ರಾಂತದಲ್ಲಿ ಸುಮಾರು ೮ ಲಕ್ಷ ಕುರುಬರಿದ್ದರೆ, ಮದ್ರಾಸ್ ಪ್ರಾಂತದಲ್ಲಿ ೩ ಲಕ್ಷದಷ್ಟಿದ್ದಾರೆ. ಧಾರವಾಡ, ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಒಟ್ಟು ೨೭.೮ ಲಕ್ಷ ಜನಸಂಖ್ಯೆಯಲ್ಲಿ ೩.೨ ಲಕ್ಷ ಅಥವಾ ಶೇಕಡಾ ೧೧ ಕುರುಬರಿದ್ದಾರೆ. ಅವರ ಮುಖ್ಯ ಕಸುಬು ಕುರಿಸಾಕಣೆ, ಕಂಬಳಿ ನೇಯ್ಗೆ ಮತ್ತು ಕೃಷಿಯಾಗಿದೆ.

ಈ ಮೂರು ಜಿಲ್ಲೆಗಳ ಕುರುಬರ ಬಳಿಯಿರುವ ಕುರಿಗಳ ಸಂಖ್ಯೆಯು ಸುಮಾರು ೪ ಲಕ್ಷ ಅಥವಾ ಒಟ್ಟು ಬಾಂಬೆ ಪ್ರೆಸಿಡೆನ್ಸಿಯ ಶೇಕಡಾ ೨೫ರಷ್ಟಾಗಿದೆ. ಒಂದು ವೇಳೆ ಇದಕ್ಕೆ ಪಕ್ಕದ ಜಿಲ್ಲೆಗಳಾದ ಸೋಲಾಪುರ ಮತ್ತು ಸತಾರದ ಕುರಿಗಳ ಸಂಖ್ಯೆಯನ್ನು ಸೇರಿಸಿದರೆ ೮ ಲಕ್ಷಕ್ಕೂ ಅಧಿಕವಾಗುತ್ತದೆ ಅಥವಾ ಪ್ರೆಸಿಡೆನ್ಸಿಯಲ್ಲಿರುವ ಅರ್ಧದಷ್ಟಾಗುತ್ತದೆ.

ಮದ್ರಾಸ್ ಕರ್ನಾಟಕದ ಬಳ್ಳಾರಿಯಲ್ಲಿ ೨.೭೫ ಲಕ್ಷ ಮತ್ತು ನೆರೆಯ ಭಾಗಶಃ ಕರ್ನಾಟಕ ಅನಂತಪುರ ಜಿಲ್ಲೆಯಲ್ಲಿ ೮.೫ ಲಕ್ಷ ಕುರಿಗಳಿವೆ.

ಭಾರತದ ಕುರಿಗಳು

ಮುಂಬಯಿ ಮತ್ತು ಮದ್ರಾಸ್ ಪ್ರಾಂತದಲ್ಲಿರುವ ಒಟ್ಟು ಕುರಿಗಳ ಸಂಖ್ಯೆಯು ಭಾರತದಲ್ಲಿರುವ ಕುರಿಗಳ ಒಟ್ಟು ಸಂಖ್ಯೆಯ ಅರ್ಧದಷ್ಟಿದೆ. ಭಾರತದಲ್ಲಿರುವ ಒಟ್ಟು ಕುರಿಗಳ ಸಂಖ್ಯೆಯು ೨ ಕೋಟಿ ೩೦ ಲಕ್ಷಕ್ಕೂ ಅಧಿಕವಾಗಿದ್ದರೆ ಮುಂಬಯಿ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ೧ ಕೋಟಿ ೩೦ ಲಕ್ಷ ಕುರಿಗಳಿವೆ. ಮದ್ರಾಸ್ ಪ್ರಾಂತದಲ್ಲಿ ೧ ಕೋಟಿ ೧೨ ಲಕ್ಷವಿದ್ದರೆ, ಮುಂಬಯಿಯಲ್ಲಿ ೧೭ ಲಕ್ಷಗಳಿವೆ. ಆದ್ದರಿಂದ ನಮ್ಮ ಜಿಲ್ಲೆಗಳು ದೇಶದ ಮುಖ್ಯ ಕುರಿಸಾಕಾಣಿಕೆ ಕೇಂದ್ರಗಳಾಗಿ ನಾವು ನೋಡಬಹುದಾಗಿದೆ.

ಬೇರೆ ಪ್ರಾಣಿಗಳು ಅತ್ಯಂತ ಕಷ್ಟಪಡುವ ಸ್ಥಳಗಳಲ್ಲಿಯೂ ಕುರಿಗಳು ಸೊಗಸಾಗಿ ಬದುಕುತ್ತವೆ ಎಂಬುದಾಗಿ ಹೇಳಲಾಗುತ್ತಿದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಅಲ್ಪಪ್ರಮಾಣದ ಮಳೆಯಾಗುವುದರಿಂದ ಮೇವಿನ ಕೊರತೆಯಿಂದುಂಟಾಗುವ ಹಸಿವಿನಿಂದ ಬಳಲುತ್ತಿವೆಯೆಂದು ಇಲ್ಲಿ ಒಪ್ಪಬೇಕಾಗುತ್ತದೆ. ಬಿಜಾಪುರ ಪ್ರದೇಶ ಅಂತಹ ಪ್ರದೇಶವಾಗಿದ್ದು ಮದ್ರಾಸ್ ಪ್ರಾಂತದ ಬಳ್ಳಾರಿ ಮತ್ತು ಅನಂತಪುರ ಕೆಲವು ಪ್ರದೇಶಗಳು ಅವುಗಳಿಗೆ ಹೋಲುತ್ತವೆ. ಕುರಿಸಾಕಾಣಿಕೆಗೆ ಸಾಧಾರಣವಾಗಿ ಮಳೆಯಾಗುವ ಅಥವಾ ಅಲ್ಪಮಳೆಯಾಗುವ ಪ್ರದೇಶಗಳು ಅನುಕೂಲ

ಕರವಾಗಿವೆ. ಇವುಗಳು ಬಳ್ಳಾರಿ ಮತ್ತು ದಕ್ಷಿಣ ಕನ್ನಡದ ಅಂಕಿಅಂಶಗಳಿಗೆ ಹೋಲಿಸಿ ನಿದರ್ಶಿಸಬಹುದು. ಮೊದಲು ಉಲ್ಲೇಖಿಸಿದ್ದಲ್ಲಿ ೨,೬೭,೭೩೩ರಷ್ಟಿದ್ದರೆ ನಂತರದಲ್ಲಿ ೨೫೨ ಕುರಿಗಳು ಇಡೀ ಜಿಲ್ಲೆಯಲ್ಲಿವೆ. ಆದ್ದರಿಂದ ಕರ್ನಾಟಕದ ಬಹುಪಾಲು ಪ್ರದೇಶವು ಕುರಿಸಾಕಾಣಿಕೆಗೆ ಸೂಕ್ತವಾಗಿದೆ. ಆದರೂ ನಮ್ಮಲ್ಲಿರುವ ಕುರಿಗಳ ಸಂಖ್ಯೆಯು ಕಡಿಮೆ ಎಂದು ಹೇಳಲಾಗುವುದಿಲ್ಲ. ಒಟ್ಟು ಭಾರತದಲ್ಲಿರುವ ಕುರಿಗಳ ಸಂಖ್ಯೆಯು, ಇಷ್ಟೇ ಗಾತ್ರದ ಇನ್ನಾವುದೇ ದೇಶಕ್ಕಿಂತ ಕಡಿಮೆಯೇ ಸರಿ. ಭಾರತದಲ್ಲಿ ಒಟ್ಟು ೨.೩ ಕೋಟಿ ಕುರಿಗಳಿದ್ದರೆ, ಗ್ರೇಟ್‌ಬ್ರಿಟನ್‌ನಲ್ಲಿ ೨.೯ ಕೋಟಿ ಮತ್ತು ಭಾರತದ ೧.೧೬ರಷ್ಟು ಪ್ರದೇಶವು ಗ್ರೇಟ್‌ಬ್ರಿಟನ್‌ನಲ್ಲಿ ಇಲ್ಲ. ಭಾರತದ ಮೂರನೆಯ ಒಂದರಷ್ಟು ಜನಸಂಖ್ಯೆಯನ್ನು ಹೊಂದಿರುವ ಅಮೇರಿಕ (United States of America) ದಲ್ಲಿ ೫ ಕೋಟಿ ಮತ್ತು ನಮಗಿಂತ ದಟ್ಟ ಜನಸಂಖ್ಯೆಯನ್ನು ಹೊಂದಿದ ಯುರೋಪಿನಲ್ಲಿ ೧೩ ಕೋಟಿ ಇವೆ. ಆಸ್ಟ್ರೇಲಿಯಾ ನ್ಯೂಜಿಲೆಂಡ್‌ಗಳನ್ನು ಒಟ್ಟುಗೂಡಿಸಿದಲ್ಲಿ ೧೧.೫ ಕೋಟಿ, ದಕ್ಷಿಣ ಅಮೇರಿಕದಲ್ಲಿ ೧೨ ಕೋಟಿ ಮತ್ತು ದಕ್ಷಿಣ ಆಫ್ರಿಕೆಯಲ್ಲಿ ೬ ಕೋಟಿ ಕುರಿಗಳಿವೆ.

ಕುರಿಸಾಕಾಣಿಕೆಯು ಅತ್ಯಂತ ಪ್ರಪಂಚದ ಪ್ರಚಲಿತ ಕಸುಬಾಗಿದೆಯೆಂದು ಮೇಲಿನ ಉಲ್ಲೇಖಗಳಿಂದ ತಿಳಿದುಬರುತ್ತದೆ. ಇದು ಅಗೋಚರ ಕಾರಣಗಳಿಂದ ಅಲ್ಲ. ವ್ಯವಸಾಯ ಮತ್ತು ಹೈನುಗಾರಿಕೆಯು ಅತ್ಯಂತ ಲಾಭದಾಯಕ ಕಸುಬುಗಳಲ್ಲಿ ಒಂದಾಗಿವೆ. ಇಂಗ್ಲೆಂಡ್‌ನಲ್ಲಿ ಅವರು ಉಣ್ಣೆಗಳನ್ನು ಕುರಿತಂತೆ ಹೇಳುವಂತೆ The flower and strength and revenue and blood of England. ಪ್ರಾಚೀನ ಕಾಲದಿಂದ ವ್ಯವಸಾಯವು ಇಂಗ್ಲಿಶ್‌ರ ವಾಣಿಜ್ಯಕ್ಕೆ ತಳಹದಿ ಮತ್ತು ವ್ಯವಸಾಯಕ್ಕೆ ಮುಖ್ಯ ಮೂಲ ಆಧಾರವಾಗಿದೆ.

**ಕುರಿಗಳ ಗುಣಮಟ್ಟ**

ಯುರೋಪ ಮತ್ತು ಇತರೆ ಪ್ರದೇಶಗಳಲ್ಲಿ ಕುರಿಗಳಿಗೆ ಪ್ರಾಮುಖ್ಯತೆಯನ್ನು ನೀಡಲು ಕಾರಣವೇನೆಂದರೆ ಅವುಗಳು ಕುರುಬರಿಗೆ ಆ ಪ್ರದೇಶಗಳಲ್ಲಿ ಉಣ್ಣೆ ಮತ್ತು ಮಾಂಸವು ಉತ್ತಮ ಆದಾಯವನ್ನು ತಂದುಕೊಡುತ್ತವೆ. ಯುರೋಪಿನ ಉತ್ತಮ ಕುರಿಗಳು ಉತ್ತಮ ಗುಣಮಟ್ಟದ ಉಣ್ಣೆಯನ್ನು ನೀಡಿದ್ದು, ಅದರ ವಿವರ ಇಂತಿವೆ.

ಒಂದು Champion Lincoln ಕುರಿಯು ವಾರ್ಷಿಕವಾಗಿ ೨೮ ಪೌಂಡ ನೀಡಿದೆ. Devan long-wooled ram ೨೪ ಪೌಂಡ, Leicester yearing ೧೮ ಪೌಂಡ, ಸ್ಪೇನ್ ತವರಿನ ಉಣ್ಣೆ ನೀಡುವ ಕುರಿಗೆ ಇಂಗ್ಲೆಂಡ್ ತವರಲ್ಲಿ..... ಇವೆಲ್ಲವು ಅಸಾಧಾರಣವಾಗಿದ್ದು, ಯುರೋಪಿನ ಸರಾಸರಿ ಉಣ್ಣೆಯ ಉತ್ಪಾದನೆಯು ಅಧಿಕವಾಗಿದ್ದು ಪ್ರತಿ ಕುರಿಗೆ ವಾರ್ಷಿಕ ೬.೨ ಪೌಂಡಗಳಾಗಿವೆ. ಆಸ್ಟ್ರೇಲಿಯಾದ್ದು ೫.೭ ಪೌಂಡ ಮತ್ತು ಅಮೇರಿಕದ್ದು ೫.೫ ಪೌಂಡ. ಇಂತಹ ಅಂಕಿಯು ಏಷ್ಯಾಕ್ಕೆ ೨.೪ ಪೌಂಡನಷ್ಟಿದ್ದು, ವಿಶ್ವದಲ್ಲೇ ಅತೀ ಕಡಿಮೆಯದಾಗಿದೆ. ಭಾರತಕ್ಕೆ ಈ ಅಂಕಿಯು ಇನ್ನೂ ಕಡಿಮೆಯಿದೆ. ರಾಯಲ್ ಕಮಿಷನ್ "ಭಾರತದ ಕುರಿಗಳು

ವಾರ್ಷಿಕವಾಗಿ ೨ ಪೌಂಡ ಉತ್ಪಾದಿಸುತ್ತವೆ ಮತ್ತು ಉಣ್ಣೆಗಳಿಗಿಂತ ಕೂದಲುಗಳೇ ಅಧಿಕವಾಗಿರುತ್ತವೆ" ಎಂದು ತಿಳಿಸುತ್ತದೆ. ಕುರಿಗಳ ಗುಣಮಟ್ಟವನ್ನೇ ಅದು ಈ ರೀತಿಯಾಗಿ ಹೇಳುತ್ತದೆ. ಒಂದು ಕಾಲದಲ್ಲಿ ಉತ್ತಮವೆಂದು ಪರಿಗಣಿಸಲಾಗಿದ್ದರೂ ಪ್ರಸ್ತುತ ಕೊಳ್ಳುವವರು ಕಡಿಮೆ ಗುಣಮಟ್ಟದ್ದೆಂದು ವರ್ಗೀಕರಿಸಿದ್ದಾರೆ. ಮತ್ತು ಕುರಿಮಂದೆಯವರು ಹನ್ನೆರಡು ಆಣೆಯಿಂದ ಒಂದು ರೂಪಾಯಿಯವರೆಗೆ ಒಂದು ಮಂದೆಯಿಂದ ನಿರೀಕ್ಷಿಸುತ್ತಾರೆ. ಹಾಗೂ ಬೇರೆ ದೇಶಗಳಲ್ಲಿ ಸರಾಸರಿಯಾಗಿ ಲೆಕ್ಕಾಚಾರದಂತೆ ಪ್ರತಿ ಕುರಿಗೆ ನಾಲ್ಕರಿಂದ ಐದು ರೂಪಾಯಿಗಳಾಗುತ್ತವೆ.

ಭಾರತದ ಕುರಿಮಾಂಸದ ಮೌಲ್ಯವನ್ನು ಇತರೆ ದೇಶದ ಕುರಿಗಳಿಗೆ ಹೋಲಿಸಿದರೆ ಅದು ಅತ್ಯಲ್ಪವಾಗಿದೆ. Dorsethorn ಕುರಿಯು ೨೦೦ ಪೌಂಡ ತೂಕವಿದ್ದರೆ, Leicester ಕುರಿಯು ೧೬೦ ಪೌಂಡ. ನಮ್ಮ ಕುರಿಗಳ ಸರಾಸರಿಯು ಇವುಗಳಿಗಿಂತ ಕಡಿಮೆ. ರಾಯಲ್ ಕಮಿಷನ್‌ನ ಮಾತುಗಳಲ್ಲಿಯೇ ಸಾಮಾನ್ಯವಾಗಿ ಹೇಳುವುದಾದರೆ "ಭಾರತದ ಕುರಿಗಳು ಸಾಮಾನ್ಯವಾಗಿ ಕಡಿಮೆ ಗುಣಮಟ್ಟದ್ದಾಗಿವೆ".

ಈ ಅಂಕಿಅಂಶಗಳನ್ನು ಇಲ್ಲಿ ಉಲ್ಲೇಖಿಸುತ್ತ ನಿಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮ ಕುರಿಗಳ ಗುಣಮಟ್ಟವು ಕಡಿಮೆಯಿದ್ದು, ತುರ್ತಾಗಿ ಮತ್ತು ಖಂಡಿತವಾಗಿ ಅವುಗಳನ್ನು ಸುಧಾರಿಸಬೇಕಾಗಿದೆ. ಬೇರೆದೇಶಗಳಲ್ಲಿ ಕುರಿಸಾಕಾಣಿಕೆಯು ಪ್ರಾಚೀನ ಕಾಲದಿಂದಲೂ ಕುರುಬರಿಗೆ ಸಂಪತ್ತನ್ನು ನೀಡಿದ್ದರೆ, ನಮ್ಮ ದೇಶದವರಿಗೆ ಅದು ಕನಿಷ್ಠ ಅವಶ್ಯಕತೆಗಳನ್ನು ನೀಡಿ ಯಾವುದೇ ಸುಖವನ್ನೂ ನೀಡಿಲ್ಲ. ವರ್ಷಪೂರ್ತಿ ಕಠಿಣ ಮತ್ತು ಒಂದೇ ಯಾಂತ್ರಿಕ ಜೀವನಶೈಲಿಯನ್ನು ಒಳಗೊಂಡಿರುವ ಕುರುಬರ ಬದುಕು ಅವರ ಇಳಿವಯಸ್ಸಿನಲ್ಲಿಯೂ ಅಲ್ಪವಿರಾಮ ಮತ್ತು ಸೌಖ್ಯವನ್ನು ನೀಡಿಲ್ಲ. ಬೇರೆದೇಶಗಳಲ್ಲಿ ಅಳವಡಿಸಿಕೊಂಡಿರುವ ಕುರಿಸಾಕಾಣಿಕೆ ಕ್ರಮಗಳನ್ನು ಅಳವಡಿಸಿಕೊಂಡರೆ ನಾವು ಇಲ್ಲಿ ಇವೆಲ್ಲವನ್ನು ಬದಲಿಸಬಹುದು ಹಾಗೂ ಕುರಿಯ ಉಣ್ಣೆ ಮತ್ತು ಮಾಂಸದ ಗುಣಮಟ್ಟವನ್ನು ಹೆಚ್ಚಿಸಬಹುದು ಮತ್ತು ಕ್ರಮೇಣವಾಗಿ ಜಿಲ್ಲೆಯ ಕುರಿಗಳ ಸಂಖ್ಯೆಯನ್ನೂ ಸಹ ಹೆಚ್ಚಿಸಬಹುದು.

**ಕರ್ನಾಟಕದ ಕುರಿಗಳ ಗುಣಮಟ್ಟ ಸುಧಾರಣೆ**

ಕುರಿಗಳ ಗುಣಮಟ್ಟದ ಸುಧಾರಣಾ ಕ್ರಮಗಳನ್ನು ಚರ್ಚಿಸುವ ಮೊದಲು ಈ ನಿಟ್ಟಿನಲ್ಲಿ ಆಗಿರುವ ಕೆಲಸಗಳನ್ನು ಕುರಿತು ಈಗ ಚರ್ಚಿಸಬಹುದು. ಸಂವರ್ಧನೆಯ ಮೂಲಕ ಕುರಿಯ ಗುಣಮಟ್ಟವನ್ನು ಸುಧಾರಿಸಲು ಒಂದು ಶತಮಾನಕ್ಕಿಂತ ಅಧಿಕವಾದ ಕಾಲದಿಂದ ಪ್ರಯತ್ನಗಳು ನಡೆಯುತ್ತಲಿವೆ. ೧೯೨೬ರಲ್ಲಿ ಯುರೋಪನಿಂದ ಮೆರಿನೋ ರ್‍ಯಾಮ್ಸ್‌ಗಳನ್ನು ಭಾರತಕ್ಕೆ ಆಮುದು ಮಾಡಿಕೊಳ್ಳಲಾಗಿತ್ತು. ಯುನೈಟೆಡ್ ಪ್ರಾವಿನ್ಸ್‌ನಲ್ಲಿ ಅವುಗಳ ಸಂವರ್ಧನೆಯನ್ನು ೬ ವರ್ಷಕ್ಕೂ ಅಧಿಕ ಕಾಲ ನಡೆಸಲಾಯಿತು. ೧೮೩೫ರಲ್ಲಿ ಹಲವಾರು ತಳಿಗಳನ್ನು ಒಳಗೊಂಡ ೧೨೦ ಕುರಿಗಳಿರುವ ಮಂದೆಯನ್ನು ಆಮುದು ಮಾಡಿಕೊಂಡು ಅಹಮದ್ ನಗರದ ಬಳಿ

ಎರಡು ಫಾರ್ಮ್‌ಗಳನ್ನು ಸ್ಥಾಪಿಸಲಾಯಿತು. ಈ ಸಂವರ್ಧನೆ ಕಾರ್ಯದಿಂದ ಉಣ್ಣೆಯ ಗುಣ ಮಟ್ಟವನ್ನು ದೇಶೀಯ ಅಥವಾ ದಕ್ಕನ್ನೀವ್ ಉಣ್ಣೆಯು ಮೂರು ಪೆನ್ಸ್ (ಮೂರು ಆಣೆಗಳು) ಇಂಗ್ಲೆಂಡಿನಲ್ಲಿ ಬೆಲೆಬಾಳಿದರೆ, ಮೆರಿನೋ ಡೆಕ್ಕನ್ (Cross breed) ೧೫ ಪೆನ್ಸ್ (ಹದಿನೈದು ಆಣೆ ಬೆಲೆಬಾಳುತ್ತದೆ. ಈ ಫಲಿತಾಂಶವನ್ನು ಸಮೀಪದ ಕುರುಬರು ಇದರಿಂದ ಪ್ರೋತ್ಸಾಹಗೊಂಡು ತಮ್ಮ ಕುರಿ(ಹೆಣ್ಣುಕುರಿ)ಗಳನ್ನು ತಮ್ಮ ಸಮೀಪದ ಸರ್ಕಾರಿ ಫಾರ್ಮ್‌ಗಳಿಗೆ ಕಳುಹಿಸಲು ತೊಡಗಿದರು. ಇಂಗ್ಲೆಂಡಿನ ಮಾಂಸದ ಕುರಿತಳಿಗಳಿಗಿಂತ ಮೆರಿನೋ ತಳಿಯು ಸಾಮಾನ್ಯವಾಗಿ ಭಾರತದ ಕುರಿಗಳ ಸಂವರ್ಧನೆಗೆ ಪ್ರಶಸ್ತವಾಗಿದೆಯೆಂದು ಈ ಪ್ರಯೋಗಗಳು ಸಾಬೀತುಪಡಿಸಿವೆ. ಮೇಲಿನ ಬಹುಪಾಲು ಪ್ರಯೋಗಗಳನ್ನು ರದ್ದುಗೊಳಿಸ ಲಾಯಿತು. ಕೆಲಸದಲ್ಲಿ ಸಂಘಟನಾ ಕೊರತೆ ಮತ್ತು ಮುಂದುವರೆಯುವಲ್ಲಿದ್ದ ಕೊರತೆಗಳು ಈ ಕೆಲಸದ ವೈಫಲ್ಯಕ್ಕೆ ಕಾರಣೀಭೂತವಾಗಿವೆ. ಸಂಘಟನಕಾರರು ಕೂಡಲೇ ಫಲಿತಗಳನ್ನು ನಿರೀಕ್ಷಿಸುವ ತವಕದಲ್ಲಿದ್ದು ಉಣ್ಣೆಯನ್ನು ಎದುರುನೋಡುತ್ತಾ, ಕುರಿಗಳನ್ನು ಮರೆತರು. ಯುನೈಟೆಡ್ ಪ್ರಾವಿನ್ಸ್‌ನಲ್ಲಿ ಮೆರಿನೋ ಮತ್ತು ರೋಮ್‌ನಿ ಬಳಸಿ ಸಂವರ್ಧನೆ ಕೆಲಸವನ್ನು ಈಚೆಗೆ ಪ್ರಾರಂಭಿಸಲಾಗಿದೆ. ತಳಿಸಂವರ್ಧನೆಯಿಂದ ಉತ್ತಮ ಉಣ್ಣೆಯು ದೊರಕಿದರೂ ಕುರಿಗಳ ಗಾತ್ರ ಮತ್ತು ಆಕಾರವು ಕುಂಟಿತಗೊಂಡಿತು. ದೇಶದ ಬಹುತೇಕ ಪ್ರದೇಶಗಳ ಕ್ಷೀಣಕುರಿಗಳ ಗುಣಮಟ್ಟವನ್ನು ಸುಧಾರಿಸಿದರೂ ಸಂವರ್ಧನೆಯು ಲಾಭದಾಯಕವಾಗಿ ಮಾಡಿಕೊಳ್ಳಲು ಪುನರಾರಂಭಿಸಬಹುದೆಂದು ಈ ಪ್ರಯೋಗಗಳು ಸಾಬೀತುಪಡಿಸಿವೆ. ಕುರಿಗಳ ಗುಣಮಟ್ಟದಿಂದಾಗಿ (Mangrel Character) ಸಂವರ್ಧನ ಕಾರ್ಯದಿಂದ ಶಾಶ್ವತವಾದ ಉತ್ತಮ ಫಲಿತಗಳನ್ನು ಪಡೆಯುವುದು ಕಠಿಣವೆಂದು ಇದರಿಂದ ತಿಳಿದುಬರುತ್ತದೆ. ಸಂವರ್ಧನಕಾರರು ನಿರೀಕ್ಷಿಸುವ ಉತ್ತಮ ಮಟ್ಟದ ತಳಿಯು ಬರುತ್ತಿಲ್ಲ.

### ಭವಿಷ್ಯದ ಯೋಜನೆಗಳು

ಭವಿಷ್ಯದಲ್ಲಿ ಮೊದಲಿಗೆ ತಳಿಗಳ ಸಂಪರ್ಕಕ್ಕೆ ಪೂರ್ವದಲ್ಲಿ ಉತ್ತಮ ತಳಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ನಂತರ ಅವುಗಳಲ್ಲಿ ಉತ್ತಮ ಮಟ್ಟವು ಕಂಡುಬರುವವರೆಗೆ ಇದು ಸಾಗಬೇಕು. ಒಂದೇ ರೀತಿಯಲ್ಲಿರುವಂತಹ ತಳಿಗಳನ್ನೇ ಪ್ರಯೋಗಗಳಲ್ಲಿ ಆಯ್ಕೆ ಮಾಡುವಂತೆ ಇಲ್ಲಿ ಮಾಡದೆ, ಉತ್ತಮ ಗುಣಮಟ್ಟದ ತಳಿಯನ್ನೇ ಆಯ್ಕೆಮಾಡುವುದು ಬಹುಮುಖ್ಯ. ಇದು ನಿಧಾನವಾಗಿ ಸಾಗುವ ಕೆಲಸವಾಗಿದ್ದು ಫಲಿತಗಳನ್ನೇ ಅಲ್ಪಸಮಯದಲ್ಲಿ ಪಡೆಯಲು ಸಾಧ್ಯವಿಲ್ಲ. ಇಂತಹ ತಳಿಗಳ ಮೇಲೆ ತಳಿ ಸಂವರ್ಧನೆಯಾಗಬೇಕು.

ಇದಕ್ಕಾಗಿ ಭಾರತದ ಪರಿಸರಕ್ಕೆ ಒಗ್ಗುವ ಟಗರುಗಳನ್ನು ಪಡೆದು ಇವುಗಳನ್ನು ಸಂವರ್ಧನೆಯನ್ನೇ ಮುಖ್ಯವಾಗಿ ದೇಶಿ ತಳಿಗಳ ಮೇಲೆ ಮಾಡಬೇಕು.

ಈ ಕೆಳಗಿನವುಗಳಿಂದ ಬಾಂಬೆ ಸರಕಾರವು ಆಸಕ್ತವಾಗಿದೆಯೆಂದು ವ್ಯಕ್ತವಾಗುತ್ತದೆ. ಬಾಂಬೆ ಸರಕಾರದ ಹೈನುಗಾರಿಕೆಯ ತಜ್ಞರು ತಮ್ಮ ೧೯೨೭-೨೮ರ ವಾರ್ಷಿಕ ವರದಿಯಲ್ಲಿ

ಬಾಂಬೆ ಪ್ರೆಸೆಡೆನ್ಸಿಯ ಕುರಿಗಳನ್ನು ಕುರಿತಂತೆ ಅಲ್ಪಮಟ್ಟದ ಉಣ್ಣೆ ಉತ್ಪಾದನೆ ಮತ್ತು ಮಾಂಸ ಇವುಗಳು ಕಾಯಿಲೆಗಳಿಗೆ ತುತ್ತಾಗುತ್ತವೆ ಎಂದು ಹೇಳಿದ್ದಾರೆ. ಪ್ರೆಸಿಡೆನ್ಸಿಯಲ್ಲಿ ಕುರಿಗಳ ಸುಧಾರಣೆಗೆ ಉತ್ತಮ ಅವಕಾಶಗಳಿವೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಆದರೆ ಅವರು "ವೈಜ್ಞಾನಿಕ ರೀತಿಯ ಸುಧಾರಣೆ ಕ್ರಮಗಳಲ್ಲದೆ ಅವುಗಳ ಸುಧಾರಣಾ ಸಲಹೆಗಳನ್ನು ನೀಡಲಾಗುವುದಿಲ್ಲ" ಎಂದು ಅವರು ಭಾವಿಸುತ್ತಾರೆ. ಈ ಕಾರಣಗಳಿಂದ ಸದರಿ ಉದ್ಯಮದ ಹಿತದೃಷ್ಟಿಯಿಂದ ಆದಷ್ಟು ತ್ವರಿತವಾಗಿ ಕುರಿಸಂವರ್ಧನೆ ಪ್ರಾಯೋಗಿಕ ಫಾರ್ಮ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಸಲಹೆ ನೀಡಿದ್ದಾರೆ.

ತಜ್ಞರ ಈ ಅಭಿಪ್ರಾಯದಂತೆ ಪ್ರೆಸಿಡೆನ್ಸಿಯ ಬಹುಪಾಲು ಭಾಗಗಳು ದನದ ಮೇವಿಗೆ ಸೂಕ್ತವಾಗಿಲ್ಲವಾದರೂ ಕುರಿಸಾಕಾಣಿಕೆಗೆ, ಪ್ರಸ್ತುತದ ಪರಿಸ್ಥಿತಿಯಿಂದ ಲಾಭದಾಯಕವಾಗಿದೆ. ಆದ್ದರಿಂದ ಅವರ ವಾದವನ್ನು ಒಪ್ಪುತ್ತ ಸರಕಾರಕ್ಕೆ ಕುರಿಸಾಕಾಣಿಕಾ ಫಾರಂಗಳನ್ನು ಈ ಜಿಲ್ಲೆಗಳಲ್ಲಿ ಸ್ಥಾಪಿಸಲು ಕೋರುತ್ತೇನೆ. ಇದರಿಂದ ಕುರಿಗಳ ಗುಣಮಟ್ಟವು ಹೆಚ್ಚುವುದರೊಂದಿಗೆ ಅಂತ್ಯದಲ್ಲಿ ಕುರುಬರ ಸಂಪತ್ತು ಮತ್ತೆ ಅಭಿವೃದ್ಧಿ ಅಧಿಕವಾಗುತ್ತದೆ.

ಕುರಿಸಾಕಾಣಿಕೆಯ ವೃತ್ತಿಯಲ್ಲಿ ಇದುವರೆಗೆ ಕುರುಬರು ತಮ್ಮ ಸ್ವಾಮ್ಯವನ್ನು ತೋರಿದ್ದಾರೆ. ಇದರಲ್ಲಿ ದೊರಕುವ ಅಲ್ಪ ಆದಾಯ ಮತ್ತು ವೃತ್ತಿಯಲ್ಲಿರುವ ಕಠಿಣತೆಗಳಿಂದಾಗಿ ಬೇರೆ ಯಾವ ವರ್ಗದವರೂ ಈ ವೃತ್ತಿಯನ್ನು ಕೈಗೊಳ್ಳಲು ಆಸಕ್ತರಿಲ್ಲ. ಬೇರೆ ದೇಶಗಳಲ್ಲಿರುವಂತೆ ಯಾವಾಗ ಈ ವೃತ್ತಿಯು ಆಕರ್ಷಕವಾಗಿಯೂ, ಆದಾಯಭರಿತವೂ ಮತ್ತು ಸುಲಭಗೊಳಿಸಿದಾಗ ಪ್ರಸ್ತುತ ವ್ಯಕ್ತಿಯನ್ನು ಬೇರೆ ವರ್ಗದವರೂ ಕೆಂಗಣ್ಣಿ (ಹೊಟ್ಟೆಕಿಚ್ಚಿ)ನಿಂದ ನೋಡಲು ಪ್ರಾರಂಭಿಸುತ್ತಾರೆ ಹಾಗೂ ಅವರು ಈ ವೃತ್ತಿಯನ್ನು ಆಕ್ರಮಿಸಬಹುದೆಂದು ನಾವು ಆಶಾವಾದಿಗಳಾಗಬಹುದು. ಭಾರತದಲ್ಲಿನ ಎಲ್ಲಾವರ್ಗದ ಜನರನ್ನೊಳಗೊಂಡಂತೆ ನಿರುದ್ಯೋಗ ಸಮಸ್ಯೆ ಇರುವುದರಿಂದ ನಾವು ನಮ್ಮ ಪ್ರಾಚೀನ ಕಾಲದಿಂದಲೂ ಕೈಗೊಂಡಿರುವ ಉದ್ಯೋಗ ಮತ್ತು ವೃತ್ತಿಯನ್ನು ಕಾಪಾಡಿಕೊಳ್ಳಬೇಕಾಗಿದೆ. ನಮ್ಮ ಪೂರ್ವಜರಿಂದ ಪಡೆದ ಲಾಭದಾಯಕ ವೃತ್ತಿಯನ್ನು ಕಾಯ್ದುಕೊಳ್ಳದಿದ್ದಲ್ಲಿ ನಮ್ಮ ಮುಂದಿನ ಪೀಳಿಗೆಯವರು ನಮ್ಮನ್ನು ಶಪಿಸುತ್ತಾರೆ.

ಕುರಿಸಾಕಾಣಿಕೆಯು ಪುರುಷರ ವೃತ್ತಿಗಳಲ್ಲಿ ಒಂದಾಗಿದೆ. ಇದು ನಮ್ಮ ಬದುಕಿಗೆ ಆಸರೆಯಾಗಿರುವುದಲ್ಲದೇ ನಮ್ಮ ಉತ್ತಮ ದೈಹಿಕ ಲಕ್ಷಣಗಳನ್ನು ಕಾಪಾಡಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಹಾಗೆಯೇ ಸರ್ವಕಾಲದಲ್ಲಿಯೂ ನಾವು ಪ್ರಕೃತಿಯೊಂದಿಗೆ ಇರುವುದರಿಂದ ಎಂತಹ ಅಪಾಯಗಳು ಬಂದರೂ ಎದುರಿಸುವ ಗಂಡಿನ ಕೆಚ್ಚೆದೆ ನಮಗಿದೆ. ಆದ್ದರಿಂದ ನಮ್ಮ ಉತ್ಸಾಹಿ ಯುವಜನರು ಮುಖ್ಯವಾಗಿ ವಿದ್ಯಾವಂತರು ಈ ವೃತ್ತಿಯನ್ನು ಕೈಗೊಳ್ಳ ಬೇಕೆಂದು ಉತ್ಸಾಹಭರಿತನಾಗಿ ಶಿಫಾರಸ್ಸು ಮಾಡುತ್ತೇನೆ. ಅದು ಅವರ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುತ್ತದೆ. ಅದು ಅರ್ಜಿಯನ್ನು ಹಿಡಿದು ಕಚೇರಿಯಿಂದ ಕಚೇರಿಗಳಿಗೆ

ನೋವಿನಿಂದ ಅಲೆಯುವುದನ್ನು ತಪ್ಪಿಸುತ್ತದೆ. ಜೊತೆಗೆ ಸ್ವತಂತ್ರ ಉದ್ದಿಮೆಯನ್ನು ನೀಡುತ್ತಾ ಕಾಲಕ್ರಮದಲ್ಲಿ ಅದು ಅಧಿಕವಾಗಿ ಲಾಭದಾಯಕವೂ ಆಗುತ್ತದೆ.

ಕುರಿಸಾಕಾಣಿಕೆಯನ್ನು ಒರಟು ಮತ್ತು ಬುದ್ಧಿಹೀನ ವೃತ್ತಿಯೆಂದು ಕಾಣಬಾರದು. ಯುರೋಪ, ಅಮೇರಿಕಾ ಮತ್ತು ಆಸ್ಟ್ರೇಲಿಯಾಗಳಲ್ಲಿ ಪಡೆದಿರುವ ಉನ್ನತ ಸ್ಥಾನಕ್ಕೆ ಏರಿಸಬೇಕಾದರೆ ನಿಮ್ಮ ಜಾಣ್ಮೆಯನ್ನು ಉಪಯೋಗಿಸಲ್ಪಡುವ ಮುಖ್ಯವೃತ್ತಿಗಳಲ್ಲಿ ಇದು ಒಂದಾಗಬೇಕು. ಯಾವುದೇ ರೀತಿಯಿಂದ ನೋಡಿದರೂ ಉತ್ತಮ ಮಟ್ಟದ ಮಾಂಸ ಮತ್ತು ಉಣ್ಣೆಯನ್ನೇ ಕೊಡಬೇಕಾದರೆ ವೈಜ್ಞಾನಿಕವಾಗಿ ತಳಿಸಂವರ್ಧನೆ, ಸಾಕಾಣಿಕೆಯನ್ನು ಮೊದಲು ಜಾಣ್ಮೆ ಮತ್ತು ವೃತ್ತಿಪರತೆಯು ಬೇಕಾಗಿದೆ. ಕುರಿ ಮತ್ತು ಉಣ್ಣೆಯನ್ನು ಮಾರಾಟ ಮಾಡಲು ವ್ಯಾಪಾರಿಯ ಸಾಮರ್ಥ್ಯವೂ ಬೇಕಾಗುತ್ತದೆ.

### ಕಂಬಳಿ ನೇಯ್ಗೆ

ಕುರಿಸಾಕಾಣಿಕೆಯ ನಂತರ ಕಂಬಳಿ ನೇಯ್ಗೆಯು ನಮ್ಮ ಕುಲದ ಪ್ರಮುಖ ಕಸುಬಾಗಿದೆ. ಅದು ಪ್ರಾಥಮಿಕವಾಗಿ ಪ್ರಮುಖವಾಗಿರುವುದೆಂದು ಹೇಳುವುದು ನಿಜಕ್ಕೂ ಕಠಿಣವೇ ಸರಿ. ಕುರಿಸಾಕಾಣಿಕೆಗಿಂತ ಅಧಿಕ ಜನರು ಕಂಬಳಿನೇಯ್ಗೆ ಮತ್ತು ಕಂಬಳಿಯ ನೂಲು ತೆಗೆಯುವು ದರಲ್ಲಿಯೇ ತೊಡಗಿದ್ದಾರೆ. ಮನೆಯ ಎಲ್ಲ ಸದಸ್ಯರು, ನಡೆದಾಡಲು ಶಕ್ಯವಿಲ್ಲದಂತಹ ವಯೋವೃದ್ಧ ಮಹಿಳೆ ಮತ್ತು ಪುರುಷರನ್ನೂ ಈ ಉದ್ಯಮವು ಒಳಗೊಂಡಿರುತ್ತದೆ. ಅವರನ್ನು ನಿರಂತರವಾಗಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡುವುದರೊಂದಿಗೆ ಅವರ ಕುಟುಂಬಗಳಿಗೆ ಹಣಕಾಸಿನ ಆದಾಯವನ್ನು ಸಹತರುತ್ತದೆ. ಕುರುಬಗೇರಿಯಲ್ಲಿನ ಜನರು ಜಡವಾಗಿ ಕುಳಿತುಕೊಳ್ಳದೆ ಸದಾ ಚಟುವಟಿಕೆಯಿಂದ ಕೂಡಿ ಉಣ್ಣೆಯನ್ನು ಸ್ವಚ್ಛಮಾಡುವುದು, ಸುತ್ತುವುದು, ನೇಯುವುದು, ಹುಣಸೆಬೀಜಗಳನ್ನು ಅರೆಯುವುದು ಮತ್ತು ಕಂಬಳಿ ನೇಯುವುದೇ ಮುಂತಾದ ಕೆಲಸದಲ್ಲಿ ನಿರತರಾಗಿರುವುದನ್ನು ನೋಡಲು ಕುರುಬರಗೇರಿಗೆ ತೆರಳಿ ವೀಕ್ಷಿಸಲು ಸಂತೋಷವೆನಿಸುತ್ತದೆ. ಕಂಬಳಿನೇಯ್ಗೆಗೆ ಎಲ್ಲಾ ತರಹದ ಏಕಾಗ್ರತೆ, ಜಾಗರೂಕತೆ ಮತ್ತು ಪ್ರೋತ್ಸಾಹಗಳು ದೊರಕಬೇಕು. ಖದ್ದರ್ ಉದ್ಯಮವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಉತ್ತೇಜಿಸಿದೆ. ಅದು ಎಲ್ಲಾ ರೀತಿಯಿಂದ ರಾಷ್ಟ್ರೀಯ ಕೈಗಾರಿಕೆಯಾಗಿದೆ. ಇದು ಅಧಿಕ ಜನರನ್ನು ಉತ್ತಮ ಕೆಲಸಗಳಲ್ಲಿ ಕಾರ್ಯಪ್ರವೃತ್ತರಾಗಿರುವಂತೆ ಮಾಡುವುದರೊಂದಿಗೆ ಅಪೇಕ್ಷಣೀಯ ಉದ್ಯಮಶೀಲರನ್ನಾಗಿಸಿದೆ. ಇಲ್ಲವೆ ಅವರುಗಳು ಕೆಲಸವಿಲ್ಲದೆ ನಿರುದ್ಯೋಗಿ ಗಳನ್ನಾಗಿಸುತ್ತವೆ. ಮತ್ತು ಕ್ರಮೇಣವಾಗಿ ಅವರುಗಳು ಈಗೀಗಲೇ ನಿಬಿಡತೆಯಿಂದ ಕೂಡಿರುವ ಕೃಷಿಯನ್ನು ಅವಲಂಬಿಸುವವರಾಗುತ್ತಾರೆ. ಅಥವಾ ಕೂಲಿಗಳಾಗಿ ನಗರಗಳಿಗೆ ತೆರಳುತ್ತಾರೆ. ಕುರುಬರು ತಯಾರಿಸಿದ ಕಂಬಳಿಗಳನ್ನು ಭಾರತದ ಮಧ್ಯಮವರ್ಗದ ಜನರು ಮತ್ತು ಕಾರ್ಮಿಕ ವರ್ಗದವರು ಉಪಯೋಗಿಸುತ್ತಾರೆ. ಅವುಗಳು ಬಡವನಿಗೆ ಮತ್ತೆ ಅವನ ಮಡದಿ ಮಕ್ಕಳಿಗೆ ಅತೀ ಕಡಿಮೆ ವೆಚ್ಚದಲ್ಲಿ ಬೆಚ್ಚನೆಯ ಸುಖವನ್ನು ಮತ್ತು ಹಿತಾನುಭವವನ್ನು ನೀಡುತ್ತವೆ.

ಸಿಲೋನಿ(ಶ್ರೀಲಂಕಾ)ನ ಪಶ್ಚಿಮ ಭಾಗದಲ್ಲಿರುವ ಹಾಗೂ ಅಸ್ಸಾಂನಲ್ಲಿನ ಚಹಾ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಬಡಕೂಲಿಕಾರರಿಗೆ ಅನುಕೂಲಕರ ಬೆಲೆಯಲ್ಲಿ ದೊರಕುವ ಬೆಚ್ಚನೆಯ ಹೊದಿಕೆಗಳ ಸರಿಸಾಟಿಯಾದ ಹೊದಿಕೆಗಳನ್ನು ಯಾವ ಮಿಲ್ಲುಗಳು ಒದಗಿಸುತ್ತಿಲ್ಲ. ಅವುಗಳನ್ನು ಭಾರತದ ಎಲ್ಲಾ ಭಾಗಗಳಿಗೆ, ಹಿಮಾಲಯದಿಂದ ಸಿಲೋನ್‌ವರೆಗೆ ಹಾಗೂ ಭಾರತದ ಹೊರಗೆಯೂ ರಫ್ತು ಮಾಡಲಾಗುತ್ತಿದೆ.

**ಕಂಬಳಿಯ ಗುಣಮಟ್ಟ**

ಬಹುತೇಕ ಕಂಬಳಿಗಳು ಒರಟಾಗಿರುತ್ತವೆ. ಹಾಗೂ ಅದೇ ಸಮಯದಲ್ಲಿ ಬಾಳಿಕೆಯು ಬರುತ್ತದೆ. ಉತ್ತಮ ಗುಣಮಟ್ಟದ ಕಂಬಳಿಗಳನ್ನು ದೇಶದ ಹಲವಾರು ಭಾಗಗಳಲ್ಲಿ ತಯಾರಿಸಲಾಗುತ್ತದೆ. ಬಾಗಲಕೋಟ, ದಾವಣಗೇರಿ, ಲಕ್ಕುಂಡಿ ಮತ್ತು ಐರಣಿಯ ಕಂಬಳಿಗಳು ಪ್ರಸಿದ್ಧವಾಗಿವೆ. ಮದ್ರಾಸ್ ಪ್ರೆಸಿಡೆನ್ಸಿಯ ಗುಡಿಕೈಗಾರಿಕೆಯ ಸರ್ವೇಕ್ಷಣಾಧಿಕಾರಿಯ ವರದಿಯಂತೆ ಕುಡುತಿನಿಯಲ್ಲಿ ಉತ್ತಮ ಮತ್ತು ದಟ್ಟ ನೇಯ್ಗೆಯ ಮೃದುವಾದ ರೇಷ್ಮೆ ಅಂಚಿನ ಕಂಬಳಿಗಳನ್ನು ತಯಾರಿಸಲಾಗುತ್ತದೆ. ಮತ್ತೆ ಇವುಗಳು ೨೦ರಿಂದ ೨೫ ರೂಪಾಯಿಗಳನ್ನು ತಂದುಕೊಡುತ್ತವೆ. ಅವರೇ ಮುಂದುವರೆದು ಈ ರೀತಿಯಾಗಿ ತಿಳಿಸುತ್ತಾರೆ. ನೇಯ್ಗೆಯು ಎಷ್ಟು ಸುಂದರವೆಂದರೆ ಬಟ್ಟೆಯನ್ನು ನಿಲುವಂಗಿಗಳಿಗೂ ಬಳಸಬಹುದಾಗಿದೆ.

ಆದ್ದರಿಂದ ಕಂಬಳಿಗಳನ್ನು ನೆಲದಲ್ಲಿ ಹಾಸುವ ನೆಲಗಂಬಳಿಗಳಾಗಿ ಬೆಚ್ಚನೆಯ ಹಿತನೀಡುವ ಹೊದಿಕೆಗಳಾಗಿ, ಬಯಲಿನಲ್ಲಿರುವ ಕೂಲಿಜನ ಹಾಗೂ ಕೃಷಿಕರಿಗೆ ಮಳೆ ಚಳಿಗಳಿಂದ ರಕ್ಷಿಸುವ ಸಾಧನಗಳಾದರೆ ಮತ್ತೊಂದು ರೀತಿಯಲ್ಲಿ ನಗರದ ಆಧುನಿಕ (ಫ್ಯಾಷನ್) ಪುರುಷ ಮಹಿಳೆಯರಿಗೆ ನಿಲುವಂಗಿಗಳಾಗುತ್ತವೆ.

ಬೇಡಿಕೆ ಇದ್ದಲ್ಲಿ ಕಂಬಳಿಗಳ ಹೊದಿಕೆ ಮತ್ತು ನಿಲುವಂಗಿಗಳ ಗುಣಮಟ್ಟವನ್ನು ಹೆಚ್ಚಿಸಬಹುದು. ಈ ಉದ್ಯಮವು ಮಿಲ್ ಉದ್ಯಮದ ಪೈಪೋಟಿಯನ್ನು ಸಮರ್ಥವಾಗಿ ಇಲ್ಲಿಯವರೆಗೆ ಎದುರಿಸಿದೆ. ಇದಕ್ಕೆ ಕಾರಣವೆಂದರೆ ಕುರುಬರು ಉಣ್ಣೆಯನ್ನು ಉತ್ಪಾದಿಸುವುದ ರೊಂದಿಗೆ ಅವರ ಶ್ರಮಕ್ಕೆ ಕಡಿಮೆ ಕೂಲಿ(ಭತ್ಯೆ)ಯನ್ನು ಪಡೆದು ಕಂಬಳಿಯನ್ನು ನೇಯ್ದು ಕಾರಣವಾಗಿ ಅವುಗಳ ಬೆಲೆಯು ಸದಾ ಕಡಿಮೆಯಿರುವಂತೆ ಮಾಡಿದ್ದಾರೆ. ಆದಾಗ್ಯೂ ವಿದೇಶದಿಂದ ಆಮದಾಗುತ್ತಿರುವ ರಗ್ಗು(ಹೊದಿಕೆ) ಮತ್ತು ಮಿಲ್ಲಿನಲ್ಲಿ ತಯಾರಿಸಿದ ಶಾಲುಗಳ ಭರಾಟೆಯಿಂದ ಈ ಉದ್ಯಮವು ಕುಂಠಿತವಾಗುತ್ತಿದೆ. ಈಗ ಈ ಸುಂದರ ಕರಕುಶಲ, ಗುಡಿಕೈಗಾರಿಕೆಯು ಉಳಿಯಬೇಕೆಂದರೆ ಕೈಗಳಿಂದ ತಯಾರಿಸಿದ ವಸ್ತುಗಳನ್ನು ಆಧರಿಸುವ ಭಾರತದ ವಿದ್ಯಾವಂತ ಮತ್ತು ಸುಸಂಸ್ಕೃತ ಜನರು ಉತ್ತೇಜಿಸಬೇಕು. ಹಾಗೂ ಅವುಗಳನ್ನು ಬಡತನದಿಂದ ಕೂಡಿರುವ ಪ್ಲಾಂಟೇಶನ್ ಕೂಲಿಗಳ ಮತ್ತು ಬಯಲು ಸೀಮೆಯ ಕಾರ್ಮಿಕರಿಗೆ ಸೀಮಿತಗೊಳಿಸಬಾರದು.

## ಸರಕಾರ ಮತ್ತು ಕಂಬಳಿ ಉದ್ಯಮ

ಉಣ್ಣೆ ತಯಾರಿಸುವಲ್ಲಿ, ಬೇರ್ಪಡಿಸುವಲ್ಲಿ ಉಪಯೋಗಿಸುವ ಉಪಕರಣಗಳು ಮತ್ತು ಉಣ್ಣೆಯನ್ನು ಸುತ್ತಲು ಉಣ್ಣೆದಾರ(ಎಳೆ) ತಯಾರಿಸಲು ಉಪಯೋಗಿಸುವ ಚರಕ ಮತ್ತು ದಾರದಿಂದ ಕಂಬಳಿ ನೇಯುವ ಯಂತ್ರಗಳು ಸರಳವಾಗಿವೆ. ಕಡಿಮೆ ಶ್ರಮದಲ್ಲಿ ಉತ್ತಮ ಕೆಲಸವನ್ನು ಮಾಡುವಂತೆಯೂ, ಅಲ್ಪ ಸಮಯದಲ್ಲಿ ಅಧಿಕ ದಾರವನ್ನು ತೆಗೆದು ತ್ವರಿತ ಸಮಯದಲ್ಲಿ ಕಂಬಳಿ ನೇಯುವಂತೆ ಅವುಗಳನ್ನು ಸುಧಾರಿಸಲು ಸಾಧ್ಯತೆಗಳಿವೆ. ಸುಸಜ್ಜಿತ ಪ್ರಯೋಗಾಲಯಗಳಲ್ಲಿ ಪ್ರಯೋಗಗಳನ್ನು ನಡೆಸಿ ಕಂಬಳಿ ಕೈಗಾರಿಕೆಯಲ್ಲಿನ ಉಪಕರಣಗಳು ಮತ್ತು ವಿಧಾನಗಳಲ್ಲಿ ಸುಧಾರಣೆಗಳನ್ನು ತರಬಹುದು. ಈ ಕೆಲಸವನ್ನು ಸರಕಾರವೇ ಮಾಡಬೇಕಿದೆ.

ಪ್ರಸ್ತುತ ಫ್ಲೈ ಷಟಲ್ ಮಗ್ಗಗಳನ್ನು ಮದ್ರಾಸಿನ ಅನೇಕ ಭಾಗಗಳಲ್ಲಿ ಪ್ರಯತ್ನಿಸಲಾಗಿದೆ. ಕಳೆದವರ್ಷ ಅಕ್ಟೋಬರ್ ಒಂದರಂತೆ ಅಂತಹ ೪೮೧ ಮಗ್ಗಗಳು ಮದ್ರಾಸ್ ಪ್ರೆಸಿಡೆನ್ಸಿ ಯಲ್ಲಿದ್ದವೆಂದು ವರದಿಯಾಗಿದೆ.

ಫ್ಲೈ ಷಟಲ್ ಮಗ್ಗಗಳಲ್ಲಿ ದಿನವೊಂದಕ್ಕೆ ಮೂರು ಕಂಬಳಿಗಳನ್ನು ಉತ್ಪಾದಿಸಲಾಗುತ್ತಿದೆ ಯೆಂದು ಹೇಳಿಕೊಳ್ಳಲಾಗುತ್ತಿದೆ. ಆದರೆ ಹಳೆಯ ಮಗ್ಗಗಳಲ್ಲಿ ಒಂದು ಕಂಬಳಿ ನೇಯಲು ಮೂರು ದಿನಗಳಾಗುತ್ತದೆ. ಫ್ಲೈ ಷಟಲ್ ಮಗ್ಗದ ತಯಾರಿಕೆಯು ಜನಪ್ರೀಯವಾಗಿಲ್ಲ. ಏಕೆಂದರೆ ಅದರ ಉತ್ಪನ್ನವು ಸಾಧಾರಣ, ಪ್ರಾರಂಭಿಕ ಹಂತದ ಮಗ್ಗದ ತಯಾರಿಕೆಯಂತೆ ಇಲ್ಲದಿರುವುದೇ ಕಾರಣವಾಗಿದೆ. ಜೊತೆಗೆ ಚರಕದಿಂದ ತಯಾರಿಸಲಾದ ಉಣ್ಣೆದಾರವು ಫ್ಲೈ ಷಟಲ್ ಮಗ್ಗದಲ್ಲಿ ಬಳಸಲು ಸಾಧ್ಯವಿಲ್ಲವೆಂದು ತೋರುತ್ತದೆ. ಆದ್ದರಿಂದ ನೇಯ್ಗೆಯ ಸಮಯವನ್ನು ಕಡಿಮೆಗೊಳಿಸುವ ಮತ್ತು ಅವುಗಳಿಂದ ತಯಾರಿಸುವ ಕಂಬಳಿಗಳ ಗುಣಮಟ್ಟವನ್ನು ಹೆಚ್ಚಿಸುವಂತೆ ಫ್ಲೈ ಷಟಲ್ ಮಗ್ಗಗಳನ್ನು ಸುಧಾರಿಸಬೇಕಾಗಿದೆ.

## ಕಂಬಳಿ ನೇಯ್ಗೆಯ ಶಾಲೆ

ಉಣ್ಣೆ ಬೇರ್ಪಡಿಸುವಿಕೆ, ಸುತ್ತುವಿಕೆ ಮತ್ತು ಕಂಬಳಿಯ ನೇಯ್ಗೆಯಲ್ಲಿನ ಸುಧಾರಣೆಗಳನ್ನು ಕುರುಬರಿಗೆ ತರಗತಿಗಳ ಮೂಲಕ ಬೋಧಿಸಬೇಕಿದೆ. ಆದ್ದರಿಂದ ಜಿಲ್ಲೆಯ ಒಂದು ಅಥವಾ ಎರಡು ಕೇಂದ್ರಗಳಲ್ಲಿ ಶಾಲೆಗಳಿರುವುದು ಅವಶ್ಯವಾಗಿದೆ. ಕುರುಬ ವಿದ್ಯಾರ್ಥಿಗಳಿಗೆ ಈ ಶಾಲೆಗೆ ಸೇರಲು ಹಾಗೂ ಹೊಸ ಮತ್ತು ಸುಧಾರಿತ ವಿಧಾನಗಳನ್ನು ಕಲಿಯುಲು ಶಿಷ್ಯವೇತನ ನೀಡಿ ಉತ್ತೇಜಿಸಬೇಕಿದೆ.

ಗ್ರಾಮಗಳಲ್ಲಿರುವ ಪ್ರಮುಖ ಕೇಂದ್ರಗಳಲ್ಲಿ ನೇಕಾರರಿಗೆ ಕಲಿಸಲು ಮತ್ತು ಗುಣಮಟ್ಟ ಹೆಚ್ಚಿಸಲು ಸಂದರ್ಶಕ ಗುಂಪು(ಅಥವಾ ವ್ಯಕ್ತಿ) ಗಳನ್ನು ಕೈಗಾರಿಕೆ ಇಲಾಖೆಯವರು ಆಲೋಚಿಸಬೇಕು.

ವಿವಿಧ ಕೇಂದ್ರಗಳಲ್ಲಿ ನೇಯಲಾಗುವ ಕಂಬಳಿಗಳು ಗುಣಮಟ್ಟದಲ್ಲಿ ವ್ಯತ್ಯಾಸಗಳಿರುತ್ತವೆ. ಮತ್ತು ಈ ಶಾಲೆಗಳು ಆಧುನಿಕ ಕಾಲಕ್ಕೆ ಫ್ಯಾಷನ್‌ಗಳ ಬೇಡಿಕೆಗನುಗುಣವಾಗಿ ವಿನ್ಯಾಸ ಹಾಗೂ ಬಣ್ಣಗಳುಳ್ಳ ಉತ್ತಮ ಮಟ್ಟದ ಕಂಬಳಿಗಳನ್ನು ಹೇಗೆ ಇತರೆ ಕೇಂದ್ರಗಳಲ್ಲಿ ನೇಯಲಾಗುತ್ತಿದೆಯೆಂಬುದನ್ನು ಒರಟು ಕಂಬಳಿ ತಯಾರಿಸುವ ನೇಕಾರರಿಗೆ ತಿಳಿಸಿಕೊಡುವುದಾದರೆ ದೊಡ್ಡ ಸೇವೆಯನ್ನು ಮಾಡಿದಂತಾಗುತ್ತದೆ.

**ಕಂಬಳಿಗಳ ಮಾರುಕಟ್ಟೆ**

ಈಗಾಗಲೇ ಹಿಂದೆ ಉಲ್ಲೇಖಿಸಿರುವಂತೆ ಭಾರತದಾದ್ಯಂತ ಕಂಬಳಿಗೆ ಉತ್ತಮ ಮಾರುಕಟ್ಟೆಯಿದೆ. ಕರ್ನಾಟಕದ ಹಳ್ಳಿಗಳಲ್ಲಿ ಉತ್ಪಾದಿಸಲಾದ ಕಂಬಳಿಗಳು ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಸಿಲೋನ್, ಮೈಸೂರು ಮತ್ತು ಹೈದ್ರಾಬಾದ್ ರಾಜ್ಯಗಳಲ್ಲಿ, ಬಾಂಬೆ ಪ್ರೆಸಿಡೆನ್ಸಿ ಮತ್ತು ಉತ್ತರ ಭಾರತದ ಅಸ್ಸಾಂವರೆಗೂ ಸಹ ಮಾರಾಟವಾಗುತ್ತಿವೆ. ಭಾರತದ ಹೊರಗಿರುವ ಸಮೀಪದ ನೆರೆರಾಷ್ಟ್ರಗಳಲ್ಲಿಯೂ ರಫ್ತಾಗಿರುವ ಸಾಧ್ಯತೆಗಳಿವೆ. ಅವುಗಳ ಅಭಿವೃದ್ಧಿಗಾಗಿ ಮಾರುಕಟ್ಟೆಗಳ ಸರ್ವೇಕ್ಷಣೆಯನ್ನು ಮಾಡಬೇಕಾಗಿದೆ. ಭಾರತದ ವಿವಿಧ ಕೃಷಿಉತ್ಪನ್ನಗಳನ್ನು ಕುರಿತಂತೆ ಈಗ ಸರಕಾರವು ಮಾರುಕಟ್ಟೆ ಸರ್ವೇಕ್ಷಣೆಯನ್ನು ಮಾಡುತ್ತಿದೆ. ಅವರುಗಳು ಕಂಬಳಿ ಮಾರುಕಟ್ಟೆಯನ್ನು ಕುರಿತಾಗಿ ಸರ್ವೇಕ್ಷಣೆ(ಸಮೀಕ್ಷೆ)ಯನ್ನು ತ್ವರಿತವಾಗಿ ಮಾಡಬೇಕಾಗಿದೆ. ಕಂಬಳಿಗಳಿಗೆ ಸಾಗರೋತ್ತರ ಮಾರುಕಟ್ಟೆಯನ್ನು ನಿರ್ಮಿಸಲು ವಿಶೇಷ ಶೋಧಗಳನ್ನು ಕೈಗೊಳ್ಳಬೇಕಿದೆ.

**ತಾಲೂಕು ಅಥವಾ ಜಿಲ್ಲಾಮಟ್ಟದ ಸಹಕಾರ ನಿಯಮದನ್ವಯ ಮಾರುಕಟ್ಟೆ ಸಮಿತಿ**

ತಮ್ಮ ವೃತ್ತಿಗನುಗುಣವಾಗಿ ಕಾಡಿನಲ್ಲಿಯೋ ಅಥವಾ ಮಗ್ಗದ ಬಳಿಯೋ ಕಾಲಕಳೆಯಬೇಕಾಗಿರುವುದರಿಂದ ಕುರುಬರು ಮಾರುಕಟ್ಟೆಯೊಂದಿಗೆ ಸಂಪರ್ಕವಿರಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ಅವರು ಕಂಬಳಿ ಮಾರುಕಟ್ಟೆಯನ್ನೇ ಹಿಡಿಯಲು ಸಾಧ್ಯವಾಗಿಲ್ಲ. ಸ್ವಾಭಾವಿಕವಾಗಿಯೇ ಅದು ಕುರಿಸಾಕಾಣಿಕೆ ಮಾಡದವರ ಅಥವಾ ಕಂಬಳಿ ನೇಯುವವರನ್ನೇ ಹೊರತುಪಡಿಸಿ ಉಳಿದವರ ಕೈಪಾಲಾಗಿದೆ. ಮಧ್ಯವರ್ತಿಗಳು ಉಪಯುಕ್ತವಾಗಿರುವುದು ನಿಜವೇ ಸರಿಯಾದರೂ, ಅವರಿಗೆ ಹಣವನ್ನು ನೀಡಬೇಕು. ಮತ್ತು ಕಂಬಳಿಗಳನ್ನು ಅಲ್ಪಬೆಲೆಗೆ ಮಾರುವುದರಿಂದ ಕಂಬಳಿ ನೇಕಾರರಿಗೆ ಉಣ್ಣೆ ನೇಕಾರರಿಗೆ ಅಲ್ಪಾದಾಯವಿಲ್ಲದೆ ಮಧ್ಯವರ್ತಿಗಳಿಗೆ ಅಷ್ಟು ಕಮಿಷನ್ ನೀಡಲಾಗುವುದಿಲ್ಲ. ಆದುದರಿಂದ ಎಷ್ಟು ಸೂಕ್ತವೋ ಅಷ್ಟು ಮೌಲ್ಯವನ್ನು ಗಳಿಸುವ ಉದ್ದೇಶವನ್ನು ಹೊಂದಿ ಸಹಕಾರ ಸಂಘಗಳನ್ನು ಪ್ರಾರಂಭಿಸುವುದು ಅವಶ್ಯವೇ ಆಗಿದೆ. ಈ ಸಂಘಗಳು ಜಿಲ್ಲೆಯ ವಿವಿಧ ಮಾರುಕಟ್ಟೆ ಕೇಂದ್ರಗಳಲ್ಲಿರಬೇಕು. ಕಂಬಳಿ ದಾಸ್ತಾನು (depots) ಮಳಿಗೆಗಳು ಇರಬೇಕು. ಮತ್ತು ಇವುಗಳು ಸುತ್ತಮುತ್ತಲಿನ ಕಂಬಳಿ ಸಹಕಾರ ಸಂಘ ಸಂಗ್ರಹಿಸಿದ ಕಂಬಳಿಗಳನ್ನು ಪಡೆಯಬೇಕು.

ಈ ದಾಸ್ತಾನು ಮಳಿಗೆಗಳು ಸಂಘಗಳ ಬೇಡಿಕೆಗನುಗುಣವಾಗಿ ಉಣ್ಣೆಯನ್ನು ಖರೀದಿಸುವ ಮತ್ತು ವಿತರಿಸುವ ಕೆಲಸವನ್ನು ಮಾಡಬಹುದಾಗಿದೆ. ಹಾಗೂ ಸಂಘಗಳು ಅಂತಹ ಉಣ್ಣೆಯನ್ನು ತನ್ನ ಸದಸ್ಯರುಗಳಿಗೆ ವಿತರಿಸಬಹುದು.

ಮದ್ರಾಸ್ ಸರಕಾರವು ಇಂತಹ ಕೆಲಸವನ್ನು ಈ ವರ್ಷ ಕೈಗೊಂಡಿದೆ. ಎಲ್ಲಾ ಮುಖ್ಯ ಕೇಂದ್ರಗಳಲ್ಲಿ ಇಂತಹ ಕಂಬಳಿ ಸಹಕಾರ ಸಂಘಗಳನ್ನು ಸಂಘಟಿಸುವ ಪ್ರಯತ್ನವನ್ನು ಬಾಂಬೆ ಸರಕಾರವು ಶೀಘ್ರವಾಗಿ ಕೈಗೊಳ್ಳಬೇಕಾಗಿದೆ.

### ಸರಕಾರಿ ಹುಲ್ಲುಗಾವಲು ಪ್ರದೇಶ ಮತ್ತು ಅದರ ಅಭಿವೃದ್ಧಿ

(Government Grazing Areas and their improvement)

ಬಾಂಬೆ ಸರಕಾರವು ತನ್ನ ಒಂದೇ ಆದೇಶದಿಂದ ಕುರುಬರಿಗೆ ವಿಧಿಸಲಾಗುತ್ತಿದ್ದ ಹುಲ್ಲುಗಾವಲು ಶುಲ್ಕದಿಂದ ಮುಕ್ತಗೊಳಿಸಿದೆ. ಕುಂಠಿತ(ಬರಗಾಲ) ವರ್ಷಗಳಲ್ಲಿ ಕುರುಬರು ಭರಿಸಲಾಗುತ್ತಿರಲಿಲ್ಲ ಹಾಗೂ ಅದು ಅವರಿಗೆ ಹೊರೆಯಾಗಿತ್ತು. ಮೇವಿನ ಶುಲ್ಕ ನೀಡುವ ಹಣದಿಂದ ಅವರು ಮುಕ್ತರಾಗುವುದಕ್ಕಿಂತ ಕೆಲವು ಕಿರು(ಸಣ್ಣ) ಅರಣ್ಯಾಧಿಕಾರಿಗಳಿಂದ ಅನುಭವಿಸುತ್ತಿರುವ ಕಿರುಕುಳ ಮತ್ತು ತೊಂದರೆಗಳಿಂದ ಮುಕ್ತರಾಗಿರುವುದೇ ಅವರಿಗೆ ಅತ್ಯಂತ ಸಮಾಧಾನಕಾರಿ ಸಂಗತಿಯಾಗಿದೆ.

ಶೀಘ್ರವೇ ಮದ್ರಾಸ್ ಸರಕಾರವು ಮೇವಿನ ಶುಲ್ಕವನ್ನು ರದ್ದುಮಾಡುವ ಹಾದಿಯನ್ನು ಹಿಡಿಯಬಹುದೆಂದು ಆಶಿಸೋಣ. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಹಲವಾರು ಭಾಗಗಳಲ್ಲಿ ಅರಣ್ಯ ಪಂಚಾಯ್ತಿಗಳನ್ನು ಸ್ಥಾಪಿಸಲಾಗಿದ್ದರೂ ಮೇಲೆ ಉಲ್ಲೇಖಿಸಿದ ತೊಂದರೆಗಳಿಂದ ಅವರು ಮುಕ್ತರಾಗಿಲ್ಲವೆಂದೇ ಹೇಳಬಹುದು. ಕೆಲವು ಪಂಚಾಯ್ತಿಗಳಲ್ಲಿ ಇದು ಇನ್ನೂ ಕೆಟ್ಟಸ್ಥಿತಿಯಲ್ಲಿದೆ ಎಂದು ಹೇಳಲಾಗುತ್ತದೆ. ಏಕೆಂದರೆ ಪಂಚಾಯ್ತಿದಾರರೊಂದಿಗೆ ಕಾವಲುಗಾರರು ಸಹ ಕುರುಬರನ್ನು ಒತ್ತಾಯಿಸುತ್ತಾರೆ. ಈ ವ್ಯವಸ್ಥೆ ಎಷ್ಟರಮಟ್ಟಿಗೆ ಹದಗೆಟ್ಟಿದೆಯೆಂದರೆ ಕೆಲವು ಭಾಗಗಳ ಜನರು ಪಂಚಾಯ್ತಿ ವ್ಯವಸ್ಥೆಯನ್ನೇ ರದ್ದುಪಡಿಸಿ ಹಳೆಯ ಪದ್ಧತಿಯನ್ನೇ ಜಾರಿಗೊಳಿಸಬೇಕೆನ್ನುತ್ತಾರೆ. ಇದು ವಿಚಾರಣೆಗೆ ಒಳಪಡಬೇಕಾದ ವಿಷಯವಾಗಿದೆ.

ಮುಕ್ತಮೇವಿನ ಕ್ರಮವನ್ನು ಪ್ರಾರಂಭಿಸುವುದರಿಂದ ನಾವು ಹೊಸರೀತಿಯ ಸಮಸ್ಯೆಗಳನ್ನು ಎದುರುಗೊಳ್ಳಬೇಕಾಗುತ್ತದೆ. ಮೇವಿನ ಶುಲ್ಕದ ರದ್ದತಿಯಿಂದ ಮನಸ್ಸೋ ಇಚ್ಚೆ ಮೇವನ್ನು ಮಾರಲು ಅನುಮತಿಸಲಾಗದು. ಪ್ರದೇಶ ಮತ್ತು ಸಂದರ್ಭಕ್ಕನುಗುಣವಾಗಿ ಒಂದು ನಿರ್ದಿಷ್ಟ ಅರಣ್ಯಪ್ರದೇಶದಲ್ಲಿ ಎಷ್ಟು ಪ್ರಾಣಿಗಳು ಮೇಯಬಲ್ಲುದು ಎಂಬುದನ್ನು ಖಚಿತವಾಗಿ ನಿರ್ಧರಿಸಬಹುದು. ಅಧಿಕ ಸಂಖ್ಯೆಯಲ್ಲಿ ಮೇಯಲು ಬಿಟ್ಟರೆ ಮೇವಿನ ಪ್ರದೇಶವು ನಿಶ್ಚಯವಾಗಿ ಬೇರಿನೊಂದಿಗೆ ಅಳಿಯುತ್ತದೆ. ಪರಿಣಾಮವಾಗಿ ಮುಂಬರುವ ವರ್ಷಗಳಲ್ಲಿ ಅಲ್ಪಮೇವಿನ ಪ್ರದೇಶವು ದೊರಕುತ್ತದೆ. ಸ್ವಾಭಾವಿಕವಾಗಿಯೇ ಇದು ಕುರುಬರನ್ನು ಆಕರ್ಷಿಸುವ

ಮುಖ್ಯಕೇಂದ್ರಬಿಂದುವಾಗಿದ್ದು, ಅದು ಅವರ ವೃತ್ತಿಜೀವನವನ್ನು ಅವಲಂಬಿಸಿದೆ. ಏಕೆಂದರೆ ಉತ್ತಮ ಮೇವಿನ ಪ್ರದೇಶಕ್ಕೆ ಅವಲಂಬಿಸಿರುತ್ತದೆ. ಅವನು ಈ ಸಮಸ್ಯೆಯನ್ನು ಬುದ್ಧಿವಂತನಾಗಿ ಅರ್ಥಮಾಡಿಕೊಂಡು ಸರಕಾರದ ಅರಣ್ಯ ಇಲಾಖೆಯು ಜಾರಿಗೊಳಿಸುವ ಅಧಿಕ ಮೇವಿನ ಪ್ರಕ್ರಿಯೆಯಿಂದ ಮೇವಿನ ಪ್ರದೇಶದ ಸಂರಕ್ಷಣೆ ಮತ್ತು ನಿಯಂತ್ರಣ ಕಾರ್ಯಗಳಲ್ಲಿ ತಮ್ಮ ಬೆಂಬಲ ಸಹಕಾರಗಳನ್ನು ನೀಡಬೇಕು.

ಕುರುಬರಿಗೆ ಇನ್ನೊಂದು ವಿಷಯವು ಆಸಕ್ತವಾಗಬಹುದು. ಅವರು ಬೆಂಬಲಿಸುವ ವಿಷಯವೆಂದರೆ ಅರಣ್ಯ ಇಲಾಖೆಯವರು ಮುಂದೆ ಆಯೋಜಿಸಬಹುದಾದ ಆವರ್ತನ ಮೇವಿನ ಪದ್ಧತಿಯಿಂದ ಅಧಿಕವಾಗಿ ಮೇಯಲಾಗುವ ಪ್ರದೇಶವನ್ನೇ ರಕ್ಷಿಸಬಹುದು ಹಾಗೂ ನಿಯಮಿತವಾಗಿ ಮೇವಿನ ಪ್ರದೇಶಗಳಿಗೆ ಬಿಡುವು(ವಿರಾಮ) ನೀಡುವುದರಿಂದ ಪ್ರಸ್ತುತದಲ್ಲಿ ದೊರಕುತ್ತಿರುವ ಸೌಲಭ್ಯಗಳಿಗಿಂತ ಸರ್ವಾಂಗೀಣ ಸುಧಾರಣೆಗಳನ್ನು ಇಲ್ಲಿ ಮಾಡಬಹುದಾಗಿದೆ. ಅಂತಿಮವಾಗಿ ದೊರಕುವ ಫಲಿತಾಂಶವೆಂದರೆ ಕುರಿಗಳಿಗೆ ಉತ್ತಮ ಮೇವು ದೊರಕುತ್ತದೆ. ಆದ್ದರಿಂದ ಕುರುಬರು ಇದಕ್ಕೆ ತಮ್ಮ ಸಂಪೂರ್ಣ ಸಹಾನುಭೂತಿ ಮತ್ತು ಸಕ್ರಿಯ ಸಹಕಾರವನ್ನು ನೀಡಬೇಕು. ಸರಕಾರವು ಆವರ್ತನ ಮೇವಿನ ಪದ್ಧತಿಯನ್ನು ಪ್ರಾಯೋಗಿಕವಾಗಿ ಕೆಲವು ಸೀಮಿತ ಪ್ರದೇಶಗಳ ಕುರುಬರ ಗುಂಪುಗಳಿಗೆ ಅಥವಾ ಕುರುಬರ ಸಹಕಾರ ಸಂಘಗಳಿಗೆ ಅರಣ್ಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಪ್ರಯೋಗಾತ್ಮಕವಾಗಿ ಕೈಗೊಳ್ಳಬಹುದು.

### ಕಾಡ್ಗಿಚ್ಚು ಮತ್ತು ಕುರುಬರು

ಕಾಡ್ಗಿಚ್ಚು ತೊಂದರೆಗಳನ್ನು ನಿವಾರಿಸಲು ಸರ್ವಪ್ರಯತ್ನಗಳಲ್ಲಿ ಕುರುಬರು ಸಹಕಾರ, ಬೆಂಬಲ ನೀಡಲು ಆಸಕ್ತರಾಗಬೇಕು. ಕಾಡ್ಗಿಚ್ಚಿನಿಂದ ರಾಷ್ಟ್ರೀಯ ಸಂಪತ್ತು ಹಾನಿಯಾಗುತ್ತದೆ. ಅರಣ್ಯವನ್ನೇ ನಂಬಿ ವಾಸಿಸುತ್ತಿರುವ ಜನರ ಸಂಕಷ್ಟಗಳು ವರ್ಣಿಸಲು ಸಾಧ್ಯವಿಲ್ಲ. ಸಮೀಪದ ಉತ್ತಮ ಕಾಡು ಆ ಭಾಗಕ್ಕೆ ಉತ್ತಮ ಮಳೆಯನ್ನೇ ತರುತ್ತದೆ ಎಂದು ಹೇಳಲಾಗುತ್ತದೆ. ನಿಯಮಿತವಾಗಿ ಪ್ರತಿವರ್ಷ ಕಾಡ್ಗಿಚ್ಚಿಗೆ ಒಳಗಾಗುವ ಕಾಡುಗಳು ಕ್ರಮೇಣ ಮರಗಳಿಲ್ಲದೇ ಬೋಳಾಗುತ್ತವೆ. ಕ್ರಮೇಣ ಹುಲ್ಲು ಬೆಳೆಯುವ ಪ್ರದೇಶವು ಸಂಕುಚಿತವಾಗುತ್ತದೆ. ಕಾಲಕ್ರಮೇಣ ಅಲ್ಲಿಯ ಮಣ್ಣು ಮೋರಿ ನಾಲೆಗಳಲ್ಲಿ ಕೊಚ್ಚಿಹೋಗುವುದರಿಂದ ಬಂಡೆಗಲ್ಲು ಹಾಗೂ ಗರಸು ಕಲ್ಲು ಬಯಲಾಗಿ ಫಲವತ್ತತೆ ಕುಂಠಿತವಾಗಿ ಅಲ್ಲಿ ಯಾವುದೇ ಸಸ್ಯವರ್ಗವು ಬೆಳೆಯದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕಾಡ್ಗಿಚ್ಚಿನಿಂದ ಸುಟ್ಟಕಾಡು ಮಳೆಯಿಂದ ಉಂಟಾಗುವ ತೇವಾಂಶದಲ್ಲಿ ಅಲ್ಪಪ್ರಮಾಣವನ್ನು ಮಾತ್ರವೇ ಹಿಡಿದಿಡ ಬಲ್ಲುದು.ಇದರ ಪರಿಣಾಮವಾಗಿ ಮಳೆಯ ನೀರು ಸಂಗ್ರಹವಾಗದೆ ವೇಗವಾಗಿ ಹರಿದು ಅದು ನದಿಯನ್ನು ಸೇರುತ್ತದೆ. ತತ್ಪರಿಣಾಮವಾಗಿ ಅಂತರ್ಜಲ ಕುಸಿದು ಸುತ್ತಲಿನ ಪ್ರದೇಶದ ನೀರಿನ ಸೆಲೆ ಹಾಗೂ ಬುಗ್ಗೆಗಳು ಒಣಗುತ್ತವೆ. ಇಂತಹ ಹಲವಾರು ನಿದರ್ಶನಗಳು ನನ್ನ ಯೋಚನೆಗೆ ಬರುತ್ತವೆ ಮತ್ತು ನಿಮ್ಮಲ್ಲಿಯ ಅನೇಕರ ಅನುಭವವೂ ಅದೇ ಆಗಿರುತ್ತದೆಂದು ನನ್ನ ಖಚಿತ

ಅಭಿಪ್ರಾಯವಾಗಿದೆ. ಕಾಡ್ಗಿಚ್ಚಿನ ಪರಿಣಾಮಗಳು ಭೀಕರವಾಗಿರುತ್ತವೆ. ಇದರಿಂದ ಅನೇಕ ಸಂದರ್ಭಗಳಲ್ಲಿ ತೊಂದರೆಗೆ ಒಳಗಾಗುವ ವ್ಯಕ್ತಿಯೆಂದರೆ ಕುರುಬರಾದ್ದರಿಂದ ಅವನೇ ಕಾಡ್ಗಿಚ್ಚನ್ನು ನಂದಿಸಬೇಕು. ಹುಲ್ಲುಗಾವಲು ಪ್ರದೇಶವನ್ನು ಕಾಯ್ದುಕೊಳ್ಳಬೇಕು. ಅವನು ಕಾಡ್ಗಿಚ್ಚನ್ನು ಪತ್ತೆಹಚ್ಚಿ ನಂದಿಸುವಲ್ಲಿ ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸುವ ಅವಕಾಶವನ್ನು ಬಳಸಿಕೊಂಡು ಸಹಾಯ ಮಾಡಬೇಕು. ಕಾಡ್ಗಿಚ್ಚುಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವ ಹಾಗೂ ನಂದಿಸುವ ಕೆಲಸದಲ್ಲಿ ಸರಕಾರವು ಕ್ರಮವಹಿಸಿ ಸೂಕ್ತಕ್ರಮಕೈಗೊಳ್ಳಬೇಕೆಂದು ಒತ್ತಾಯಿಸುತ್ತೇವೆ. ಈ ಕೆಲಸದಲ್ಲಿ ಕರ್ನಾಟಕದ ಕುರುಬರ ಸಂಪೂರ್ಣ ಸಹಕಾರ ನೀಡಲಾಗುವುದೆಂದು ತಿಳಿಸುತ್ತೇನೆ.

### ಹುಲ್ಲುಗಾವಲಿನ ಅಭಿವೃದ್ಧಿ

ಖಾಸಗಿ ಮೇವಿನ ಪ್ರದೇಶಗಳು ಎಲ್ಲೂ ಇರದ ಕಾರಣ ಕುರುಬರು ಕುರಿಗಳಿಗೆ ಮೇವು ಒದಗಿಸುವಂತೆ ಕೋರಿ ಸರಕಾರವನ್ನು ಎದುರು ನೋಡಬೇಕಾಗಿದೆ. ಆದ್ದರಿಂದ ಇಂತಹ ಹುಲ್ಲುಗಾವಲಿನ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಸರಕಾರದಿಂದ ಸಹಕಾರವನ್ನು ನಿರೀಕ್ಷಿಸುತ್ತಾನೆ. ಹೊಸಹುಲ್ಲಿಗಾಗಿ ಬೀಜಬಿತ್ತನೆಯ ಕೆಲಸವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಬೇಕು ಮತ್ತು ಸರಕಾರವು ಈ ಕೆಲಸವನ್ನು ಸಣ್ಣಪ್ರಮಾಣದಲ್ಲಿ ಪ್ರಾರಂಭಿಸಿ ಒಂದುವೇಳೆ ಉತ್ತೇಜನಕಾರಿ ಫಲಿತಗಳು ಕಂಡುಬಂದರೆ ದೊಡ್ಡಪ್ರಮಾಣದಲ್ಲಿ ಕೈಗೊಳ್ಳಬೇಕು.

ಗ್ರಾಮದ ಸುತ್ತಲಿನ ಹಾಳುಪ್ರದೇಶ ಮತ್ತು ಸರಕಾರಿ ಬೀಳುಭೂಮಿಗಳನ್ನು ಗುರುತಿಸುವುದ ರಿಂದ ಸಾಮಾನ್ಯವಾದ ಮೇವಿನ ಪ್ರದೇಶಗಳು ಸಂಕುಚಿತವಾಗಿವೆ. ಬೇಸಿಗೆಯಲ್ಲಿ ಮತ್ತು ನಂತರದಲ್ಲಿ ಜಮೀನಿನಲ್ಲಿ ಯಾವಾಗ ಬೆಳೆಗಳು ಇರುತ್ತವೆಯೋ ಕುರಿಮಂದೆಗಳನ್ನು ಮುಂಜಾನೆಯಿಂದ ಸಂಜೆವರೆಗೆ ಹುಲ್ಲುಗಳ ಹುಡುಕಾಟಕ್ಕಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡಬೇಕಾಗುತ್ತದೆ. ಈ ಕಾಲಗಳಲ್ಲಿ ಮತ್ತು ಬೇಸಿಗೆಯ ತಿಂಗಳಲ್ಲಿ ಕುರಿಗಳು ಆಹಾರದ ಕೊರತೆಯನ್ನು ಅನುಭವಿಸುತ್ತವೆ. ಇದರಿಂದ ಅಲ್ಪ ಪ್ರಮಾಣದ ಆಹಾರವನ್ನು ಸೇವಿಸುತ್ತವೆ.

ಇದು ತೀವ್ರತರವಾದ ಸಮಸ್ಯೆಯಾಗಿದ್ದು ಪರಿಹಾರಗಳನ್ನು ಹುಡುಕುವುದು ಕಠಿಣ. ಸರಕಾರವು ಈ ಸಮಸ್ಯೆಯನ್ನು ನಿಭಾಯಿಸಬೇಕು. ಈ ಮಧ್ಯೆ ಫಾರ್ಮಗಳನ್ನು ಹೊಂದಿರುವ ಕುರುಬರು ಯಾವಾಗ ಸುಲಭವಾಗಿ ಮೇವು ಕೈಗೆಟುಕದ ಸಂದರ್ಭಗಳು ಉಂಟಾಗುತ್ತವೆಯೋ ಆವಾಗ ಕೆಲವು ಭಾಗಗಳನ್ನು ಆಯ್ದು ತಮ್ಮ ಕುರಿಗಳ ಮೇವಿಗೆ ಹುಲ್ಲನ್ನು ಬೆಳೆಸುವ ಪ್ರಯೋಗಗಳನ್ನು ನಡೆಸಬೇಕು.

### ರಾಜಕೀಯ ಮತ್ತು ಕುರುಬರು

ನಾನು ಈ ಭಾಷಣದಲ್ಲಿ ವಿಸ್ತೃತವಾಗಿ ನಮಗೆ ಎದುರಾಗುವ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಿದ್ದೇನೆ. ಏಕೆಂದರೆ ಇವುಗಳ ಸೂಕ್ತಪರಿಹಾರಗಳು ನಮ್ಮ ಜನಾಂಗದವರಿಗೆ ಅಧಿಕ

ಸಂಪತ್ತು ಮತ್ತು ಸಮೃದ್ಧಿಯನ್ನು ವೃದ್ಧಿಸುತ್ತದೆ. ಹಾಗು ಇದರಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಪುನರುದ್ಧಾರ ಮಾಡಬಹುದು ಎಂದು ನಾನು ನಂಬುತ್ತೇನೆ. ಈಗ ಇಷ್ಟೇ ಪ್ರಾಮುಖ್ಯತೆಯನ್ನು ಹೊಂದಿರುವಂತಹ ಇತರೆ ಸಮಸ್ಯೆಗಳನ್ನು ಚರ್ಚಿಸಲು ಇಚ್ಛಿಸುತ್ತೇನೆ.

ಈ ದೇಶದ ರಾಜಕೀಯ ಚಟುವಟಿಕೆಗಾಗಿ ಇತರೆ ಜನಾಂಗದವರೊಂದಿಗೆ ಕೂಡಿ ನಮ್ಮ ಪಾಲಿನ ಸೂಕ್ತಭಾಗಗಳನ್ನು ಪಡೆಯಬೇಕು. ಸ್ಥಳೀಯ ಸಮಿತಿಗಳಿಗೆ, ಮುನಿಸಿಪಾಲಿಟಿಗಳಿಗೆ, ಗ್ರಾಮಪಂಚಾಯ್ತಿಗಳಿಗೆ, ವಿಧಾನಸಭೆ ಮತ್ತು ವಿಧಾನಪರಿಷತ್ತುಗಳ ಚುನಾವಣೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸ್ಪರ್ಧಿಸಬೇಕಾಗಿರುವುದು ಅವಶ್ಯವಾಗಿದೆ. ಕಳೆದ ವಿಧಾನಸಭೆಯ ಚುನಾವಣೆಯಲ್ಲಿ ನಮ್ಮಲ್ಲಿನ ಒಬ್ಬರೂ ಸಹ ಸ್ಪರ್ಧಿಸದಿರುವುದು ದುಃಖಕರ ಸಂಗತಿ. ಇದಕ್ಕೆ ನಮ್ಮ ಜನಾಂಗದ ಆರ್ಥಿಕಸ್ಥಿತಿಯೇ ಮುಖ್ಯ ಕಾರಣವೆಂದು ತೋರುತ್ತದೆ.

ವಿಧಾನಸಭೆ ಮತ್ತು ವಿಧಾನಪರಿಷತ್ತುಗಳಲ್ಲಿ ನಮ್ಮನ್ನು ಪ್ರತಿನಿಧಿಸುವ ಸೂಕ್ತ ಮತ್ತು ಅರ್ಹವ್ಯಕ್ತಿಗಳಿದ್ದಾರೆ. ನಿಧಿಗಳನ್ನು ಸ್ಥಾಪಿಸಿ ಅವುಗಳನ್ನು ಸೂಕ್ತ ಚುನಾವಣಾ ಸ್ಪರ್ಧಿಗಳಿಗೆ ಸಹಾಯ ಮಾಡುವ ಮೂಲಕ ಈ ಆರ್ಥಿಕ ಮುಗ್ಗಟ್ಟನ್ನು ಮುಂಬರುವ ಚುನಾವಣೆಗಳನ್ನು ಎದುರಿಸುವ ಮೂಲಕ ಪರಿಹರಿಸಬಹುದು. ಇದಕ್ಕಾಗಿ ಸ್ಥಳೀಯ ಮತ್ತು ಜಿಲ್ಲಾ ಸಂಘಗಳನ್ನು ಸ್ಥಾಪಿಸಬೇಕು.

### ಬಾಂಬೆ ಅಸೆಂಬ್ಲಿಯಲ್ಲಿ ಸ್ಥಳಕಾಯ್ದಿರಿಸುವಿಕೆ

ಮರಾಠ ಮತ್ತು ಅದರ ತತ್ಸಂಬಂಧೀ ಹೊಂದಾಣಿಕೆ ಜನಾಂಗದ ಏಳು ಮೀಸಲಾತಿ ಕ್ಷೇತ್ರಗಳ ಪೈಕಿ ೨ ಅಥವಾ ೩ ಕ್ಷೇತ್ರಗಳು ಧಾರವಾಡ, ಬಿಜಾಪುರ ಮತ್ತು ಬೆಳಗಾವಿ ಕುರುಬ ಜನಾಂಗಕ್ಕೆ ಮೀಸಲಾಗಿ ಇರಿಸಬಹುದೆಂದು ಎದುರುನೋಡಲಾಗಿತ್ತು. ಮರಾಠ ಮತ್ತು ತತ್ಸಂಬಂಧೀ ಜನಾಂಗದ ಎಂಬ ಪದವನ್ನು ಧನಗರ್ ಅವರನ್ನು ಗುರುತಿಸುವ ಸಲುವಾಗಿ ಬಳಸಲಾಗಿದೆ. ಮರಾಠಿಯಲ್ಲಿ ಧನಗರ್ ಪದವನ್ನು ಕುರುಬರು ಎಂಬ ಅರ್ಥದಲ್ಲಿ ಬಳಸಲಾಗಿದೆ. ಹಾಗೂ ಕುರುಬ ಮತ್ತು ಧನಗರ್ ಅವರುಗಳು ಒಂದೇ ಅಲ್ಲ. ಇದು ಕಪೋಲಕಲ್ಪಿತ. ಇಂತಹ ದೋಷಗಳು ಆಗಲಿಕ್ಕೆ ಕಾರಣವೆಂದರೆ ಮರಾಠ ಜಿಲ್ಲೆಯ ಧನಗರ್ ಮತ್ತು ಕರ್ನಾಟಕದ ಕುರುಬರು ಅಂತರ್ ವಿವಾಹ ಮತ್ತು ಅಂತರ್ ಭೋಜನಗಳನ್ನು ಕೈಗೊಳ್ಳುವುದರಿಂದ ಹಾಗೂ ಜಿಲ್ಲೆಗಳಲ್ಲಿರುವ ಅಸಂಖ್ಯಾತ ಬಂಧುಬಾಂಧವರು ಇರುವುದರಿಂದ ಈ ರೀತಿಯಾಗಿ ಗ್ರಹಿಸಲಾಗಿದೆ ಎಂಬುದು ಅರಿವಾಗುತ್ತದೆ. ಕುರುಬ ಮತ್ತು ಧನಗರ್ ಪದಗಳ ಅರ್ಥಗಳಲ್ಲಿ ಆಟವಾಡಿ ನಮ್ಮ ಜನಾಂಗಕ್ಕೆ ಮೀಸಲಾತಿ ಕ್ಷೇತ್ರ ನೀಡದೆ ಸರಕಾರವು ನಮ್ಮನ್ನು ವಂಚಿಸಿದೆ. ಈ ಜಿಲ್ಲೆಗಳಲ್ಲಿರುವ ಮೂರುಲಕ್ಷ ಕುರುಬರು ಮರಾಠರ ಮತ್ತು ಅದರೊಂದಿನ ಇತರೆ ಜನಾಂಗಕ್ಕೆ ಮೀಸಲಾದ ಏಳು ಕ್ಷೇತ್ರಗಳಲ್ಲಿ ಮೂರು ಕ್ಷೇತ್ರಗಳು ತಮ್ಮ ಜನಾಂಗಕ್ಕೆ ಸೇರಿಸಬೇಕೆಂದು ತಮ್ಮ ಹಕ್ಕು ಎಂದು ಪ್ರತಿಪಾದಿಸಬಹುದು. ಈ ನಿಟ್ಟಿನಲ್ಲಿ

ಸರಕಾರವು ಸೂಕ್ತ ಕ್ರಮಕೈಕೊಂಡು ನ್ಯಾಯ ಒದಗಿಸಿ ನಮ್ಮ ಜನರ ಅಭಿನಂದನೆಗೆ ಪಾತ್ರವಾಗುತ್ತದೆ ಎಂದು ಆಶಿಸಬಹುದು.

### ಕುರುಬರು ಮತ್ತು ಹಿಂದುಳಿದ ವರ್ಗಗಳು

ಪ್ರೆಸಿಡೆನ್ಸಿಯ ಅಸ್ಪೃಶ್ಯರಿಗೆ, ಗಿರಿಜನ ಮತ್ತು ಹಿಂದುಳಿದವರ್ಗಗಳ ಸ್ಥಿತಿಗಳನ್ನು ಅರಿತು ಅವರ ಜೀವನ, ವಿದ್ಯೆ ಮತ್ತು ಸರಕಾರದಲ್ಲಿ ಪ್ರಾತಿನಿಧ್ಯ, ಸ್ಥಳೀಯ ಸಮಿತಿಗಳಲ್ಲಿ ಹಾಗೂ ಇತರೆ ಕ್ಷೇತ್ರಗಳಲ್ಲಿ ಮತ್ತು ಅವರ ಉನ್ನತಿಗಾಗಿ ಶ್ರಮಿಸಲು ಬಾಂಬೆಸರಕಾರವು ಹಿಂದುಳಿದ ವರ್ಗಗಳ ಸಮಿತಿಯನ್ನು ರಚಿಸಿತು.

ಈ ಸಮಿತಿಯ ವರದಿಯ ಆಧಾರದ ಮೇರೆಗೆ ಸರಕಾರವು ಒಂದು ಮೀಸಲಾತಿ ಪಟ್ಟಿಯನ್ನು ತಯಾರಿಸಿ ಅದರಲ್ಲಿ ಹಿಂದುಳಿದ ವರ್ಗ ಎಂದು ಗುರುತಿಸಲಾಗಿದೆ. ಈ ಪಟ್ಟಿಯಲ್ಲಿ ಬೇಡರು, ತಳವಾರರು, ಗೊಲ್ಲ ಮತ್ತು ಇತರರನ್ನು ಸೇರಿಸಲಾಗಿದ್ದು, ಅದೇ ವರ್ಗಕ್ಕೆ ಸೇರಿದ ಆರ್ಥಿಕವಾಗಿ ಹಿಂದುಳಿದ ಕುರುಬರನ್ನು ಸೇರಿಸಿಲ್ಲ.

ಆದರೆ ಇನ್ನೊಂದು ಕೈಯಲ್ಲಿ ಕುರುಬರನ್ನು ಮುಂದುವರಿದ ಶ್ರೀಮಂತ ಮತ್ತು ಪ್ರಭಾವಿ ಮಧ್ಯಮವರ್ಗಕ್ಕೆ ಸೇರಿದ ಲಿಂಗಾಯಿತ, ವೈಶ್ಯ, ರಾಜಪೂತ, ಬೋಗರ ಮತ್ತು ಇತರೆ ಜನಾಂಗದವರೊಂದಿಗೆ ಸೇರಿಸಲಾಗಿದೆ. ಈ ತಪ್ಪು ವರ್ಗೀಕರಣದಿಂದ ಇತರ ಜನಾಂಗದವರಿಗೆ ದೊರಕುತ್ತಿರುವ ಸೌಲಭ್ಯಗಳಿಂದ ಕುರುಬರು ವಂಚಿತರಾಗುತ್ತಿದ್ದಾರೆ. ಆದರೆ ಅದೇ ವೇಳೆಯಲ್ಲಿ ಮುಂದುವರಿದ ಜನಾಂಗದವರಂತೆ ಇಲ್ಲದ ಅಂಗವಿಕಲರಾಗಿರುವಂತೆ ವರ್ಗೀಕರಿಸಲಾಗಿದೆ. ಇದರ ಫಲವಾಗಿ ಹಿಂದುಳಿದ ವರ್ಗಗಳು ಮುಂದುವರಿದರೆ ನಮ್ಮ ಪ್ರಗತಿಯು ಕುಂಠಿತವಾಗಿದೆ. ಆದ್ದರಿಂದ ಸರಕಾರ ಶೀಘ್ರವಾಗಿ ಈ ನ್ಯೂನ್ಯತೆಯನ್ನು ಸರಿಪಡಿಸಿ ಕುರುಬರನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕು.

### ಸರಕಾರಿ ಸೇವೆಗಳು

ಈಗಾಗಲೇ ಸರಕಾರಿ ಕೆಲಸಗಳಲ್ಲಿ ಕುರುಬರ ಪ್ರಾತಿನಿಧ್ಯದ ಬಗೆಗೆ ಪ್ರಶ್ನೆಯನ್ನು ಎತ್ತಿ ನಾನು ಈ ವಿಷಯದಲ್ಲಿ ಗಮನಹರಿಸಿದ್ದೇನೆ. ನಮ್ಮ ಅಭ್ಯರ್ಥಿಗಳಿಗೆ ಕೆಲವು ರಿಯಾಯಿತಿಗಳನ್ನು ನೀಡಲು ಇರುವ ಸಮರ್ಥ ಕಾರಣಗಳನ್ನು ಸರಕಾರ ಪರಿಗಣಿಸಬೇಕು. ಇತರೆ ಜನಾಂಗಕ್ಕೆ ಹೋಲಿಸಿದರೆ ನಮ್ಮ ಜನಾಂಗದಲ್ಲಿ ಉನ್ನತ ವಿದ್ಯಾರ್ಹತೆ ಹೊಂದಿದ ತರುಣ ಸಮುದಾಯವು ಅತ್ಯಲ್ಪ ಪ್ರಮಾಣದಲ್ಲಿದೆ. ನಮ್ಮ ಯುವಜನರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮವಾದ ಫಲಿತಗಳನ್ನು (ತಮ್ಮ ಪ್ರತಿಭೆಯನ್ನು ತೋರಲು) ನೀಡಲು ಕಷ್ಟಪಡುತ್ತಾರೆ. ಕೆಲಸಕ್ಕೆ ಬೇಕಾಗಿರುವ ಕನಿಷ್ಠ ಅರ್ಹತೆಯನ್ನು ಹೊಂದಿರುವ ಕುರುಬ ಯುವಕರು ಕಂಡುಬಂದಲ್ಲಿ ಅಂತಹವರನ್ನು ಆ ಕೆಲಸಗಳಿಗೆ ಸರಕಾರವು ನೇಮಕಾತಿಯನ್ನು ಮಾಡಬೇಕೆಂದು ನಾವು ವಿಶೇಷವಾಗಿ ಕೋರುತ್ತೇವೆ.

### ಸ್ಥಳೀಯ ಸಮಿತಿಗಳಲ್ಲಿ ಪ್ರಾತಿನಿಧ್ಯ

ಪ್ರತಿನಿಧಿಗಳನ್ನು ನೇಮಿಸುವ ಪ್ರಕ್ರಿಯೆಯನ್ನು ರದ್ದುಮಾಡುವ ಕಾಲವು ಸನ್ನಿಹಿತವಾಗಿರುವುದನ್ನು ನಾವು ಸ್ವಾಗತಿಸುತ್ತೇನೆ. ಏಕೆಂದರೆ ಅವುಗಳು ಜನರನ್ನು ಪ್ರತಿನಿಧಿಸದ ನಾಮನಿರ್ದೇಶನಗಳಾಗಿದ್ದವು. ಯಾವುದೇ ಮೀಸಲಾತಿ ವ್ಯವಸ್ಥೆಯನ್ನು ಸ್ಥಳೀಯ ಸಮಿತಿಗಳು ಜಾರಿಗೊಳಿಸಿದಲ್ಲಿ ನಮ್ಮ ಕುರುಬ ಜನಾಂಗದ ಹಿತವನ್ನು ಸರಕಾರ ಕಾಯಬೇಕೆಂಬುದು ನಮ್ಮೆಲ್ಲರ ಒತ್ತಾಯಪೂರ್ವಕ ಆಸೆಯಾಗಿದೆ. ಇದನ್ನು ನಾವು ಏಕೆ ಕೇಳುತ್ತಿದ್ದೇವೆಂದರೆ ಈ ಜನಾಂಗವು ಪ್ರಸ್ತುತ ಸ್ಥಳೀಯ ಚುನಾವಣೆಗಳನ್ನು ಎದುರಿಸಲು ಶಕ್ಯವಾದುದರಿಂದಲೇ ಎಂದು ನಾವು ಭಾವಿಸುತ್ತೇವೆ.

### ಸರಕಾರಕ್ಕೆ ಧನ್ಯವಾದಗಳು

ದೇಶದಲ್ಲಿ ನಾವು ರಾಷ್ಟ್ರೀಯ ಕಾಂಗ್ರೆಸ್ ಅಧಿಕಾರಕ್ಕೆ ಬರುವ ನಿರ್ಧಾರ ಹಾಗೂ ಜನಪ್ರಿಯ ಸರಕಾರವು ಎಲ್ಲಾ ಸೌಲಭ್ಯಗಳನ್ನು ಅದು ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ನೀಡಲೆಂದು ನಾವು ಸ್ವಾಗತಿಸುತ್ತೇವೆ. ಕಾಂಗ್ರೆಸ್ ಸರಕಾರವು ಅಧಿಕವಾಗಿ ಆಳ್ವಿಕೆಯಲ್ಲಿ ಇರದಿದ್ದರೂ ಕೃಷಿಕ ಸಮುದಾಯಕ್ಕೆ ನೀಡಿರುವ ಸವಲತ್ತುಗಳಿಗೆ ಅವರನ್ನು ಅಭಿನಂದಿಸಲು ನಮ್ಮಲ್ಲಿ ಸಾಕಷ್ಟು ಕಾರಣಗಳಿವೆ. ಬಾಂಬೆಯಲ್ಲಿ ಮೇವಿನ ಶುಲ್ಕರದ್ದತಿ ಮತ್ತು ಮದ್ರಾಸಿನ ಭೂಕಂದಾಯದಲ್ಲಿ ೭೫ ಲಕ್ಷ ರೂಪಾಯಿ ಕಡಿತಗೊಳಿಸಿರುವುದರಿಂದ ನಾವು ಈಗಾಗಲೇ ಪ್ರಸ್ತಾಪಿಸಿದಂತೆ ಅವರನ್ನು ಅಭಿವಂದಿಸುತ್ತೇವೆ. ಒಂದು ಜಿಲ್ಲೆಯಲ್ಲಿ ಸಾರಾಯಿಯನ್ನು ಸಂಪೂರ್ಣ ನಿಷೇಧಿಸುವ ಕಾರ್ಯಪ್ರವೃತ್ತಿಗೆ ಹಾಗೂ ರೈತರ ಹೊರೆಯನ್ನು ಗಣನೀಯವಾಗಿ ಕಡಿಮೆ ಮಾಡುವ ಪ್ರಯತ್ನದಲ್ಲಿರುವ ಮದ್ರಾಸ ಸರಕಾರಕ್ಕೆ ನಾವು ಹೆಚ್ಚು ಋಣಿಗಳಾಗಿದ್ದೇವೆ. ಸೇಲಂ ಜಿಲ್ಲೆಯ ಕುರುಬರು ಸರಕಾರಕ್ಕೆ ಸಹಕರಿಸಿ ಅದರ ಸಾರಾಯಿ ನಿಷೇಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಿ ಸೇಲಂ ಅನ್ನು ಭಾರತದಲ್ಲೇ ಮಾದರಿಯಾಗಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇವೆ.

### ಕಾಂಗ್ರೆಸ್ ಸೇರಿ

ದೇಶದ ಜನರಿಗೆಲ್ಲ ಆಹಾರ ಮತ್ತು ಬಟ್ಟೆಯನ್ನು ನೀಡುವ ಕೃಷಿಕ ಮತ್ತು ನೇಕಾರರ ಸುಧಾರಣೆಗೆ ಕಂಕಣಬದ್ಧವಾಗಿ ದುಡಿಯುತ್ತಿರುವ ಏಕೈಕ ಸಂಘಟನೆಯಂದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್. ಕೃಷಿಕ ಮತ್ತು ನೇಕಾರರಾಗಿರುವ ನೀವು ಕಾಂಗ್ರೆಸ್‌ನೊಂದಿಗೆ ಇರುವಂತೆ ಭಾವಿಸುತ್ತೇವೆ. ಮತ್ತು ನಾವು ನಿಷ್ಠಾವಂತರಾಗಿ ನಮ್ಮ ಬೆಂಬಲವನ್ನು ಅಧಿಕ ಸಂಖ್ಯೆಯಲ್ಲಿ ಸೇರುವುದರ ಮೂಲಕ ನೀಡಬೇಕು.

### ಸಾಮಾಜಿಕ ಸುಧಾರಣೆಗಳು

ನಮ್ಮ ಜನಾಂಗದ ಸಾಮಾಜಿಕ ಸುಧಾರಣೆ ಕುರಿತಂತೆ ಹಲವಾರು ಮುಖ್ಯ ಸಮಸ್ಯೆಗಳಿವೆ.

ಅವುಗಳಲ್ಲಿ ಹೆಣ್ಣುಮಕ್ಕಳಿಗೆ ವಿದ್ಯಾರ್ಜನೆಯನ್ನು ನಾನು ಮುಂಚೂಣಿಯಲ್ಲಿ ಇರಿಸುತ್ತೇನೆ. ಏಕೆಂದರೆ ಪ್ರತಿ ಸಾಮಾಜಿಕ ಸುಧಾರಣೆಗಳು ಮಹಿಳೆಯ ವಿದ್ಯೆಯನ್ನು ಅವಲಂಬಿಸಿ ಅನುಸರಿಸುತ್ತವೆ ಎಂದು ನಾನು ನಂಬುತ್ತೇನೆ. ಎಲ್ಲಾ ಜನಾಂಗದವರಿಗಿಂತ ನಮ್ಮ ಜನಾಂಗದವರೇ ಇದನ್ನು ಕಡೆಯದಾಗಿ ಗುರುತಿಸುವುದರಿಂದ ನಾನು ಈ ಅಂಶವನ್ನು ಇಲ್ಲಿ ಒತ್ತಿ ಹೇಳುತ್ತಿದ್ದೇನೆ. ಗಂಡುಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಬೇರೆಡೆ ಪ್ರತಿಪಾದಿಸಿದ್ದೆ ಹಾಗೂ ಇಲ್ಲಿಯೂ ಹೆಣ್ಣುಮಕ್ಕಳಿಗೆ ಅದನ್ನೇ ಪ್ರತಿಪಾದಿಸುತ್ತೇನೆ. ಕುರುಬ ಹೆಣ್ಣು ಮಕ್ಕಳು ಮನೆಯಲ್ಲಿ ಉಣ್ಣೆ ತಯಾರಿಕೆ, ದಾರದ ಸುತ್ತುವಿಕೆ ಮುಂತಾದ ಕಾರ್ಯಗಳಲ್ಲಿ ತೊಡಗುವುದರಿಂದ ಆ ವಿಷಯಗಳನ್ನೇ ಶಾಲೆಯಲ್ಲಿ ಕಲಿಸಬೇಕು.

ಉಪ ಜಾತಿಗಳು

ಹಲವಾರು ಉಪಜಾತಿಗಳಾಗಿ ಒಡೆದಿರುವ ಕುರುಬ ಉಪಜಾತಿಗಳು ಕುರುಬ ಎಂಬ ಜಾತಿಯ ಹೆಸರಿನಿಂದ ಸೇರಿ ಸಹಭೋಜನ ಮತ್ತು ಅಂತರ್‌ವಿವಾಹಗಳನ್ನು ಯಾವುದೇ ತಾರತಮ್ಯವಿಲ್ಲದೇ ಅನುಸರಿಸಬೇಕು.

ಪರಿವರ್ತನೆ

ಇತ್ತೀಚಿನ ದಿನಗಳಲ್ಲಿ ನಮ್ಮ ಜನಾಂಗವು ತನ್ನ ಕಟ್ಟುಪಾಡುಗಳನ್ನು ಕಳೆದುಕೊಳ್ಳುತ್ತಿದೆಯಾದ್ದರಿಂದ ಬೇರೆ ಜನಾಂಗಗಳಿಗೆ ಪರಿವರ್ತಿತರಾಗುತ್ತಿದ್ದಾರೆ. ಇದನ್ನು ತಡೆಗಟ್ಟಬೇಕು. ಬೇರೆ ಜನಾಂಗಕ್ಕೆ ಸೇರಿದ ನಮ್ಮವರನ್ನು ನಮ್ಮ ಜನಾಂಗಕ್ಕೆ ಮರಳಿ ಪಡೆಯಬೇಕು. ಜೊತೆಗೆ ನಮ್ಮೊಂದಿಗೆ ಸೇರಬಯಸುವ ಇತರ ಜನಾಂಗದವರನ್ನು ಸಹ ನಾವು ಸೇರಿಸಿಕೊಳ್ಳಬೇಕು. ನಮ್ಮ ಜನಾಂಗದ ಶಕ್ತಿಯು ಅಧಿಕರಿಸುವ ಸಲುವಾಗಿ ಈ ನೀತಿಯನ್ನು ಅನುಸರಿಸಬೇಕು.

ವಿವಾಹಗಳು

ಅನಾದಿ ಕಾಲದಿಂದಲೂ ನಾವು ನಮ್ಮ ಗಂಡು ಮತ್ತು ಹೆಣ್ಣುಮಕ್ಕಳ ವಿವಾಹವನ್ನು ತಡವಾಗಿ ಮಾಡುವ ಕ್ರಮವನ್ನು ಅತ್ಯಂತ ವಿವೇಕವಂತರಾಗಿ ಅನುಸರಿಸುತ್ತ ಬಂದಿದ್ದೇವೆ. ಈ ನೀತಿಯು ಪ್ರಶಂಸಾರ್ಹವಾಗಿದ್ದರೂ ನಾವು ಅನುಸರಿಸುವ ಕನ್ಯಾಶುಲ್ಕ ಅಥವಾ ತೆರುವು ಎಂಬ ಅನಿಷ್ಟಪದ್ಧತಿಯನ್ನು ಧಿಕ್ಕರಿಸಬೇಕು. ಈ ಸಮಾವೇಶವು ಅದಕ್ಕೆ ಚಾಲನೆ ನೀಡಿ ಸದರಿ ಪದ್ಧತಿಯನ್ನು ವಿರೋಧಿಸುವಂತೆ ಠರಾವು ಮಂಡಿಸಬಹುದೆಂದು ಭಾವಿಸುತ್ತೇನೆ.

ದೈವತ್ವದ ನಂತರವೇ ಶುಚಿತ್ವ ಎಂಬ ನುಡಿಯನ್ನು ನಾವು ನಮ್ಮ ಗುರಿ ಎಂಬಂತೆ ನಾವೆಲ್ಲ ಅನುಸರಿಸಬೇಕು. ಜಮೀನುಗಳಲ್ಲಿ ಕೆಲಸ ಮಾಡುವ ಅಥವಾ ಕಾಡಿನಲ್ಲಿ ಕುರಿಕಾಯುವವರ ಅಶಕ್ತತೆಯ ಬಗೆಗೆ ನನಗೆ ತಿಳಿದಿದೆ. ಅದರೂ ಸಾಧ್ಯವಾದಷ್ಟು ಮಟ್ಟಿಗೆ ಗ್ರಾಮಗಳಲ್ಲಿರುವ ನಮ್ಮ ಮನೆಗಳನ್ನು ಶುಭ್ರ ಹಾಗೂ ಚೊಕ್ಕಟವಾಗಿಟ್ಟು ನಾವು ಶುಚಿ

ಹಾಗೂ ಚೊಕ್ಕವಾಗಿ ಕಾಣುವಂತವರಾಗಬೇಕು. ಇದಕ್ಕೆ ಹಣದ ಅವಶ್ಯಕತೆ ಇಲ್ಲದಿದ್ದರೂ ಸಮಯದ ಅವಶ್ಯಕತೆ ಇದೆ. ನಾವು ನಮ್ಮ ಮಕ್ಕಳ ಹಾಗೂ ನಮ್ಮ ಹಿತಕ್ಕಾಗಿ ಸ್ವಲ್ಪ ಸಮಯವನ್ನು ವಿನಿಯೋಗಿಸುತ್ತೇವೆಂದು ನಾವೆಲ್ಲರೂ ತಿಳಿದಿದ್ದೇವೆ.

## ವೈಭವೋಪೇತ ಕುರುಬರ ಪ್ರಾಚೀನತೆ

ಈ ಹಿಂದೆ ಕುರುಬ ಜನಾಂಗಕ್ಕೆ ಸೇರಿದ ಪುರುಷ ಮತ್ತು ಮಹಿಳೆಯರು ಭಾರತದೇಶದ ಭವ್ಯಪರಂಪರೆಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಅಜರಾಮರ ಕವಿ ಕಾಳಿದಾಸನನ್ನು ಭಾರತ ಮತ್ತು ವಿಶ್ವದ ಎಲ್ಲ ಜನರೂ ಪ್ರೀತಿಸಿ ಸದಾ ಸ್ಮರಿಸುತ್ತಾರೆ. ಉತ್ತರ ಭಾರತದ ಮಹಮ್ಮದೀಯರ ಆಕ್ರಮಣವು ಹಿಂದುತ್ವವನ್ನು ಆವರಿಸಿದಾಗ ನಮ್ಮ ಜನಾಂಗಕ್ಕೆ ಸೇರಿದ ಹಕ್ಕ ಮತ್ತು ಬುಕ್ಕರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ ಹಿಂದೂ ನಾಗರೀಕತೆಯನ್ನು ರಕ್ಷಿಸಿದರು. ವೀರವನಿತೆಯಾಗಿ, ಸಮರ್ಥ ರಾಣಿಯಾಗಿ ಮತ್ತು ಸಂತಮಹಿಳೆಯಾಗಿ ತನ್ನ ವಿಶಿಷ್ಟ ಛಾಪನ್ನು ಭಾರತಕ್ಕೆ ಮತ್ತು ಅವಳ ಉತ್ತರಾಧಿಕಾರಿಗಳಿಗೆ ಇಂದಿನ ಇಂದೋರಿನ ರಾಜರುಗಳಿಗೆ, ಅನುಸರಿಸಬಹುದಾದ ಭವ್ಯ ಮತ್ತು ವೈಭವಪೂರಕ ಪರಂಪರೆಯನ್ನು ನೀಡಿದ ಇಂದೋರಿನ ಮಹಾರಾಣಿ ಅಹಲ್ಯಾಬಾಯಿ ಹೋಲ್ಕರ್ ಹೆಸರು ಭಾರತದ ಇತಿಹಾಸ ಪುಟಗಳಲ್ಲಿ ಸದಾ ಪ್ರಜ್ವಲಿಸುತ್ತದೆ.

ಇಂತಹ ಅನುಕರಣೀಯ ಪುತ್ರ ಮತ್ತು ಪುತ್ರಿಯರನ್ನು ನೀಡಿದ ಜನಾಂಗಕ್ಕೆ ಸೇರಿದ ನಾವು ಜನಜನಿತವಾಗಿ ಪ್ರಾಮಾಣಿಕರು ಎಂದು ಎಲ್ಲರೂ ಬಲ್ಲಂತೆ ಹಾಗೂ ಜೊತೆಗಾರರೊಂದಿನ ಎಲ್ಲಾ ವ್ಯವಹಾರಗಳಲ್ಲಿಯೂ ನೇರನುಡಿಯನ್ನು ಉಳ್ಳವರೆಂದು, ಇನ್ನೊಂದು ಜನಾಂಗದವರ ಮೇಲೆ ಹೊರೆಯಾಗದಂತೆ ನಮ್ಮ ದುಡಿಮೆಯ ಬೆವರಿನಿಂದ ಬದುಕುತ್ತಿರುವ ಜನಾಂಗಕ್ಕೆ ನಾವು ಸೇರಿದವರಾಗಿದ್ದೇವೆ. ಜೀವನದ ಉಳಿವಿಗಾಗಿ ಆಹಾರ ಉತ್ಪಾದನೆ ಮತ್ತು ಬೆಚ್ಚನೆಯ ಸುಖ ಹಾಗೂ ಸೌಲಭ್ಯಕ್ಕೆ ಬಟ್ಟೆಗಳನ್ನು ಉತ್ಪಾದಿಸುವ ನಾವು ನಮಗೆ ವಿವೇಕವಂತರಾಗುವಂತೆ ಸಹಬಾಂಧವರಿಗೆ ಪ್ರಾಮಾಣಿಕ ಮತ್ತು ಉಪಯುಕ್ತ ಬದುಕನ್ನು ಸಾಗಿಸುಲು ಶಕ್ತಿ, ಧೈರ್ಯ ಮತ್ತು ಭಾರತದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಬದುಕಿನ ಪುನರುದ್ಧರಣೆಯಲ್ಲಿ ಪಾತ್ರವಹಿಸುವ ಅವಕಾಶ ನೀಡಲೆಂದು ದೇವರನ್ನು ಪ್ರಾರ್ಥಿಸುತ್ತೇವೆ.

## ಸಮಾರೋಪ

ನಾನು ಇದನ್ನು ಸಮಾಪ್ತಿಗೊಳಿಸುವ ಮೊದಲು ನಿಮ್ಮ ವಿಶ್ವಾಸ ಮತ್ತು ನಂಬಿಕಾರ್ಹ ವ್ಯಕ್ತಿಯೆಂದು ನನ್ನನ್ನು ಪರಿಗಣಿಸಿ ಈ ಸಮ್ಮೇಳನದ ಮೂಲಕ ದೊಡ್ಡಗೌರವ ನೀಡಿ ನಿಮ್ಮ ಸೇವೆಯನ್ನು ಮಾಡುವ ಸದವಕಾಶವನ್ನು ಕಲ್ಪಿಸಿದ ತಮಗೆಲ್ಲರಿಗೂ ಮತ್ತೊಮ್ಮೆ ವಿಶ್ವಾಸ ಪೂರ್ವಕ ವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಭಾಷಣದಲ್ಲಿ ಕೆಲವು ಮುಖ್ಯ ಸಮಸ್ಯೆಗಳು

ಮತ್ತು ಪರಿಹಾರಗಳನ್ನು ನಿಮ್ಮ ಮುಂದೆ ಮಂಡಿಸಿದ್ದೇನೆ. ಅವುಗಳು ನಿಮ್ಮ ಒಪ್ಪಿಗೆ ಮತ್ತು ಬೆಂಬಲವನ್ನು ಪಡೆಯುತ್ತವೆ ಎಂದು ನಾನು ಆಶಿಸುತ್ತೇನೆ.

ಜನಾಂಗದ ಏಳಿಗೆಗೆ ಪ್ರಪ್ರಥಮವಾಗಿ ಸ್ವಸಹಾಯವು ಮುಖ್ಯವು ಹಾಗೂ ಸರಕಾರದ ಸಹಾಯದಿಂದ ಇತರೆ ಜನಾಂಗದವರ ಸಹಕಾರ ಮತ್ತು ಉತ್ತಮ ನಡವಳಿಕೆ ಹಾಗೂ ದೇವರ ಕೃಪೆಯಿಂದ ನಮ್ಮ ಜನಾಂಗದ ಪುನರುದ್ಧಾರದ ದಿನಗಳು ದೂರವಿಲ್ಲವೆಂದು ನಾನು ಆಶಿಸುತ್ತೇನೆ.

■ ■

ಪ್ರಕಟಣೆ: ಮೂರನೆಯ ಕುರುಬರ ಸಮ್ಮೇಳನದ ಭಾಷಣ ಪ್ರತಿ (ಇಂಗ್ಲಿಷ್ ಭಾಷೆಯಲ್ಲಿ ಮುದ್ರಣ) ೧೯೩೭, ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್.ಬಿ.ಬಿಜ್ಜೂರ ಹುರುಳಿಕುಪ್ಪೆ, ಸವಣೂರ ತಾಲೂಕು ಹಾವೇರಿ ಜಿಲ್ಲೆ ಅವರಿಂದ ಸಂಗ್ರಹ.
ಕನ್ನಡ ಅನುವಾದ: ಡಾ.ಸಿ.ಎಸ್.ವಾಸುದೇವನ್, ಕನ್ನಡ ವಿಶ್ವವಿದ್ಯಾಲಯ ಹಂಪಿ,

೨

## ೧೧.೫.೧೯೫೩ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನಡೆದ ವಸಂತ ಸಾಹಿತ್ಯೋತ್ಸವದಲ್ಲಿ ಡಾ. ಆರ್. ನಾಗನಗೌಡ ಅವರು ಮಾಡಿದ ಭಾಷಣ

ಬಂಧು ಭಗಿನಿಯರೆ,

ನನ್ನನ್ನು ಇಂದಿನ ವಸಂತ ಸಾಹಿತ್ಯೋತ್ಸವದ ಆರಂಭ ಭಾಷಣಕ್ಕಾಗಿ ಆರಿಸಿಕೊಂಡುದಕ್ಕೆ ನಾನು ತಮ್ಮೆಲ್ಲರಿಗೆ ಚಿರಋಣಿಯಾಗಿದ್ದೇನೆ. ಸಾಹಿತ್ಯ ಸಂಸ್ಕೃತಿಗಳ ಕುರಿತಾಗಿ ತಮ್ಮೆಲ್ಲರಿಗೆ ತಿಳಿಯದೆ ಇರುವ ಹೊಸವಿಷಯಗಳನ್ನು ಹೇಳಿದರೇನೇ ತಾವೆಲ್ಲರೂ ಆನಂದಪಡಬಹುದು. ಇದಕ್ಕೆ ಕನ್ನಡ ಸಾಹಿತ್ಯದಲ್ಲಿ ಚೆನ್ನಾಗಿ ವ್ಯವಸಾಯ ಮಾಡಿದ ಪಂಡಿತರೂ ಮೇಧಾವಿಗಳೂ ಆಗಬೇಕು. ಆದರೆ ನಾನು ಮಾಡಿದ ವ್ಯವಸಾಯವೆಲ್ಲಾ ಕನ್ನಡ ಸಾಹಿತ್ಯದಲ್ಲಿ ಅಲ್ಲ. ಕನ್ನಡ ನಾಡಿನ ಪಚ್ಚೆಪೈರುಗಳ ಹುಲುಸಾದ ಕ್ಷೇತ್ರಗಳಲ್ಲಿ. ಇದರಿಂದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಾರಂಭ ಭಾಷಣಕ್ಕಾಗಿ ನನ್ನನ್ನು ಕರೆದ ಮೊದಲ್ಗೊಂಡು, ಸಾಹಿತಿಗಳ ದೃಷ್ಟಿಯು ಕೇವಲ ಕಾವ್ಯ, ಪುರಾಣ, ನಾಟಕ ಇತ್ಯಾದಿಗಳ ಮೇಲೆಯೇ ನೆಲೆನಿಂತಿಲ್ಲ; ಜೀವನಕ್ಕೆ ಆಧಾರವಾದ ಕೃಷಿಯ ಕಡೆಗೂ ಹೊರಳಿದೆ ಎಂದು ತಿಳಕೊಂಡೆ. ಆದುದರಿಂದಲೇ ಇಂದು ತಮ್ಮೆಲ್ಲರ ಮುಂದೆ ಮಾತಾಡುವ ಸಾಹಸಕ್ಕೆ ಕೈಹಾಕಿದೆ. ಕೃಷಿಯೂ ವಿದ್ಯಾಭ್ಯಾಸದ ಪ್ರಾಮುಖ್ಯವಾದ ಒಂದು ಅಂಗಮಾತ್ರವಲ್ಲ; ಅದರ ಜೀವಾಳವೆಂಬುದು ನಮ್ಮ ಜನತೆಗೆ ಈಗೀಗ ಅರಿವಾಗುತ್ತಿರುವುದು ದೇಶದ ಏಳಿಗೆಯ ಮೊದಲ ಹೆಜ್ಜೆಯೆಂದರೆ ಹೆಚ್ಚಲ್ಲ.

ಸಾಹಿತ್ಯ ನಮ್ಮ ಮನಸ್ಸನ್ನು ವಿಕಾಸಗೊಳಿಸಿ, ನಮ್ಮ ಸಂಸ್ಕೃತಿಯನ್ನು ಭದ್ರಗೊಳಿಸಿದರೆ ಕೃಷಿಯು ನಮ್ಮ ದೇಹದ ಬೆಳವಣಿಗೆಗೆ ಬೇಕಾದ ಆಹಾರ ವಸ್ತುಗಳನ್ನು ಒದಗಿಸಿ, ನಮ್ಮನ್ನು ದೃಢಕಾಯರನ್ನಾಗಿ ಮಾಡಿ, ಸಾಹಿತ್ಯ ಸಂಸ್ಕೃತಿಗಳ ಉನ್ನತಿಗೆ ನೆರವಾಗುವುದು. ಹೀಗೆ ಇವುಗಳೊಳಗೆ ಪರಸ್ಪರ ಸಂಬಂಧವಿರುವುದರಿಂದಲೇ ಕೃಷಿಯ ವಿಷಯದಲ್ಲಿ ಒಂದಿಷ್ಟು ಪರಿಜ್ಞಾನವುಳ್ಳ ನನ್ನನ್ನು ಬೇಕೆಂದೇ ಈ ಸಾಹಿತ್ಯ ಸಮಾರಂಭಕ್ಕೆ ಕರೆದಿರಬೇಕು. ಈ ನೆವದಿಂದಲಾದರೂ ಕನ್ನಡ ಸಾಹಿತ್ಯದಲ್ಲಿ ನುರಿತ ತಮ್ಮೆಲ್ಲರ ಒಡನಾಟವಾಗುವುದೆಂದು ಸಂತೋಷದಿಂದ ಈ ಕಾರ್ಯವನ್ನು ಒಪ್ಪಿಕೊಂಡಿದ್ದೇನೆ.

ಈ ವಸಂತೋತ್ಸವವು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವುದು ತುಂಬ ಸಂತೋಷದ ವಿಷಯವಾಗಿದೆ. ಇದು ಕೇವಲ ಸಾಹಿತ್ಯ ಸಂಬಂಧವಾದ ಉತ್ಸವವಾದರೂ ಇದರಲ್ಲಿ ವಿಜ್ಞಾನ ಮತ್ತು ಕೈಗಾರಿಕೆಗಳಿಗೆ ಸಂಬಂಧಪಟ್ಟ ಉಪನ್ಯಾಸಾದಿಗಳನ್ನು ನಡೆಸುತ್ತಿರುವು ದೆಂದರೆ ಇನ್ನಷ್ಟು ಸಂತೋಷದ ವಿಷಯವಾಗಿದೆ.

ಯಾವ ಬಗೆಯ ಜ್ಞಾನವನ್ನಾದರೂ ಸಂಪಾದಿಸಿಕೊಳ್ಳಬೇಕಾದರೆ ಭಾಷೆ ಸಾಹಿತ್ಯಗಳ ಸಹಾಯವಿಲ್ಲದೆ ಸಾಧ್ಯವಿಲ್ಲ. ಅದರಲ್ಲೂ ನಮ್ಮ ತಾಯ್ನುಡಿ ಹಾಗೂ ದೇಶಭಾಷೆಗಳಲ್ಲಿ ನಾವು ತಿಳಿದುಕೊಳ್ಳುವಷ್ಟು ಸುಲಭವಾಗಿ ಇನ್ನಾವ ಭಾಷೆಯಿಂದಲಾದರೂ ತಿಳಿದುಕೊಳ್ಳಲಾರೆವು. ಈ ದೃಷ್ಟಿಯಿಂದ ನೋಡಿದರೆ ನಮ್ಮ ಪರಿಸ್ಥಿತಿಯು ಆಶಾಜನಕವಾಗಿದ್ದಂತೆ ಶೋಚನೀಯವೂ ಆಗಿದೆ. ನಮ್ಮ ನಾಡಿನ ಹಿಂದಿನ ಸಾಹಿತ್ಯ ನಿರ್ಮಾಪಕರು, ಕವಿಗಳು, ಪಂಡಿತರು, ಬರಹಗಾರರೂ ಹೆಚ್ಚಾಗಿ ಕಲ್ಪನಾ ರಾಜ್ಯದಲ್ಲಿ ಸಂಚರಿಸಿದಷ್ಟು ವಾಸ್ತವಿಕ ಪ್ರಪಂಚವನ್ನು ಸಂಚಾರ ಮಾಡಿ ನೋಡಿದಂತೆ ತೋರುವುದಿಲ್ಲ. ಹಿಂದಿನ ಕವಿಗಳಿಗೆ, ಲೇಖಕರಿಗೆ ಅಂತಹ ವಿಷಯಗಳನ್ನು ಅಭ್ಯಸಿಸುವಷ್ಟು ಅನುಕೂಲವಾದ ವಾತಾವರಣವೂ ಇದ್ದಂತೆ ಕಾಣುವುದಿಲ್ಲ. ಕವಿಗಳ ಆಶ್ರಯದಾತರು ತಮ್ಮ ಶೌರ್ಯ, ಔದಾರ್ಯ, ಶ್ರೇಷ್ಠತೆಗಳ ಕಡೆಗೆ ಗಮನವಿತ್ತಷ್ಟು ಜನಜೀವನಕ್ಕೆ ಬೇಕಾದ ಸಾಹಿತ್ಯಸೃಷ್ಟಿಯ ಬಗ್ಗೆ ಪ್ರೋತ್ಸಾಹ ಕೊಟ್ಟಂತೆಯೂ ಕಾಣುತ್ತಿಲ್ಲ.

ನಮ್ಮ ಕನ್ನಡ ಸಾಹಿತ್ಯ ಮಾತ್ರವಲ್ಲ ಪ್ರಪಂಚದ ಎಲ್ಲಾ ಸಾಹಿತ್ಯಗಳೂ ಹೀಗೆಯೇ ಆರಂಭ ದೆಶೆಯಲ್ಲಿ ಭಾವನಾ ಪ್ರಪಂಚದಲ್ಲೇ ಸಾಗುತ್ತಿದ್ದುದು ಕಂಡು ಬರುತ್ತಿದೆ. ಅಲ್ಲದೇ ವಂಶಪಾರಂಪರ್ಯವಾಗಿ ಇಳಿದು ಬರುತ್ತಿರುವ ವೃತ್ತಿ ಕೈಗಾರಿಕೆಗಳನ್ನು ಗ್ರಂಥರೂಪದಲ್ಲಿ ಬರೆದಿಡುವ ಅವಶ್ಯಕತೆಯೂ ಪ್ರಾಚೀನ ಕಾಲದಲ್ಲಿ ಇಂದಿನಷ್ಟು ಇದ್ದಿಲ್ಲ. ಈ ಎಲ್ಲಾ ಕಾರಣಗಳಿಂದ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ವ್ಯವಸಾಯ ಮಾಡದೇ ಬಂಜರುಬಿದ್ದ ಸಾರವತ್ತಾದ ಭೂಮಿಗಳು ಸಾವಿರಾರು ಎಕರೆಗಳಷ್ಟಿವೆಯೆಂಬುದನ್ನು ಆಧುನಿಕ ಲೇಖಕರು ವಿಚಾರಿಸತಕ್ಕದ್ದು. ಈ ಭಾಗದಲ್ಲಿ ವಿಚಾರ ಹುಟ್ಟಿಸಲು ವಸಂತ ಸಾಹಿತ್ಯೋತ್ಸವವು ನೆರವಾಗುತ್ತದೆಯೆಂಬುದನ್ನು ತಿಳಿದು ನನಗಂತೂ ಹಿಡಿಯಲಾರದಷ್ಟು ಆನಂದವಾಯಿತು.

ಕನ್ನಡ ನಾಡು ಪ್ರಕೃತಿ ಸೌಂದರ್ಯದ ನೆಲೆಬೀಡು. ಇಲ್ಲಿಯ ಅರಣ್ಯ ಸಂಪತ್ತೆಂದರೆ ಸಮಗ್ರ ಭಾರತದಲ್ಲೇ ಚಿತ್ತಾಕರ್ಷಕವಾದುದು. ಕಾವೇರಿ, ತುಂಗಭದ್ರ, ನೇತ್ರಾವತಿ ಇತ್ಯಾದಿ ನದಿಗಳು ನಮ್ಮ ನಾಡನ್ನು ಫಲವತ್ತಾಗಿ ಮಾಡಿವೆ. ಜಗತ್ಪ್ರಸಿದ್ಧವಾದ ಗೇರುಸೊಪ್ಪೆಯ ಜಲಪಾತವು ಮೈಸೂರಿನ ಸೌಭಾಗ್ಯದ ಹೆಗ್ಗುರುತಾಗಿದೆ. ನಮ್ಮ ಪುರಾತನ ಕವಿಗಳು ಇವುಗಳ ಸೌಂದರ್ಯವನ್ನು ನೋಡಿ ತಲೆದೂಗಿ ಕಾವ್ಯಗಳನ್ನು ಉದ್ಯಾನ, ನದಿ ಮೊದಲಾದವುಗಳ ಬಣ್ಣನೆಯಿಂದ ತುಂಬಿದ್ದಾರೆ. ಆದರೆ ಇಂದಿನ ಕವಿಗಳು ಈ ವನಭೂಮಿಯಲ್ಲಿ ದೊರೆಯುವ ವಿವಿಧ ಉತ್ಪತ್ತಿ, ಸಸ್ಯಜೀವನ, ಹವಾಮಾನದ ಬದಲಾವಣೆಯಲ್ಲಿ ಅರಣ್ಯಗಳ ಸ್ಥಾನ, ಇವುಗಳನ್ನು ಬೆಳೆಸಲು ಪ್ರೋತ್ಸಾಹಿಸುವ ಕಾವ್ಯ ನಾಟಕ ಕಾದಂಬರಿಗಳ ರಚನೆಯ ಕಡೆಗೆ ಗಮನಕೊಡಬೇಕಾಗಿದೆ.

ಪ್ರಾಚೀನ ಕವಿಗಳು ಹೃದಯ ಬುದ್ಧಿಗಳ ವಿಕಾಸಕ್ಕೆ ಸಾಕಷ್ಟು ಸಾಹಿತ್ಯಗಳನ್ನು ರಚಿಸಿದರೆ, ಆಧುನಿಕ ಕವಿಗಳು ಹೊಟ್ಟೆ ಹಾಗೂ ಇತರ ಅವಯವಗಳ ಹಿತಕ್ಕೆ ಬೇಕಾದ ಜ್ಞಾನವನ್ನೊದಗಿಸುವ ಗ್ರಂಥಗಳನ್ನು ರಚಿಸಲು ಯತ್ನಿಸಬೇಕಾಗಿದೆ. ಹೀಗೆ ಮಾಡಿದರೇನೇ ಜೀವನದ ಸರ್ವಾಂಗ ವಿಕಾಸವು ಎದ್ದು ಕಾಣಬಹುದು.

ನಮ್ಮ ನಾಡು ಖನಿಜ ಸಂಪತ್ತಿನ ನೆಲೆಬೀಡು. ಅದರಲ್ಲೂ ಮೈಸೂರನ್ನು ಚಿನ್ನದ ನಾಡು, ಗಂಧದ ಗುಡಿ ಎಂದು ಹಾಡಿ ಹೊಗಳದ ಕವಿಗಳೇ ಇಲ್ಲ. ಇದು ಚಿನ್ನದ ನಾಡೂ ಹೌದು, ಗಂಧದ ಗುಡಿಯೂ ಹೌದು. ಅತ್ತ ಚಿನ್ನದ ಮಳೆಯನ್ನೇ ಸುರಿಸಿದ ವಿದ್ಯಾರಣ್ಯರ ಪುಣ್ಯಭೂಮಿಯಿದ್ದರೆ ಇತ್ತ ಚಿನ್ನದ ಒರತೆಯನ್ನೇ ಹರಿಯಿಸುವ ಕೋಲಾರದ ಸುವರ್ಣಭೂಮಿ ಇರುವುದು ಕನ್ನಡಿಗರ ಭಾಗ್ಯವೆನ್ನಬೇಕು. ಅಲ್ಲಿ ಸುವರ್ಣವನ್ನು ಸುರಿದು ನೀರಾವರಿಗಳನ್ನು ತಯಾರಿಸಿ ಫಲಧಾನ್ಯಗಳನ್ನು ಪಡೆದರೆ ಇಲ್ಲಿ ಭೂಮಿಯನ್ನು ಅಗೆದು ಸಂಪತ್ತಿನ ರಾಶಿಯನ್ನೇ ಪಡೆಯುವ ಸುಯೋಗವಿದೆ. ಮೈಸೂರು ಸಂಸ್ಥಾನದ ಕೋಲಾರದ ಚಿನ್ನ ಭದ್ರಾವತಿಯ ಉಕ್ಕು, ಸೊಂಡೂರಿನ ಮೆಂಗನೀಸ್, ಹೊಸಪೇಟೆಯ ಕಬ್ಬಿಣ ಇತ್ಯಾದಿ ಖನಿಜಗಳ ಉಪಕಾರ್ಯವೆಲ್ಲಾ ಒಂದೇ ಆಡಳಿತೆಯಲ್ಲಿ ನಡೆದರೆ ನಮ್ಮ ನಾಡು ಅದೆಷ್ಟು ಏಳಿಗೆ ಹೊಂದಬಹುದೆಂದು ಆಲೋಚಿಸಿಕೊಳ್ಳಿರಿ. ಹೀಗೆಯೇ ಕೈಗಾರಿಕೆಗಳಿಗೆ ಬೇಕಾದ ವಸ್ತುಗಳಿಗೂ ನಮ್ಮಲ್ಲಿ ಕೊರತೆ ಇಲ್ಲ. ಮುಖ್ಯವಾಗಿ ಆಧುನಿಕ ರೀತಿಯಿಂದ ಕೃಷಿಕೈಗಾರಿಕೆಗಳನ್ನು ಕೈಕೊಳ್ಳಲು ಬೇಕಾದ ವಿದ್ಯುಚ್ಛಕ್ತಿಗೆ ಮೈಸೂರು ತವರುಮನೆಯಾಗಿದೆ. ಮೈಸೂರಿನ ರೇಷ್ಮೆ, ಬಳ್ಳಾರಿ ಹುಬ್ಬಳ್ಳಿಗಳ ಹತ್ತಿ, ಕೊಡಗಿನ ಕಾಫಿ, ಏಲಕ್ಕಿ, ದಕ್ಷಿಣ ಕನ್ನಡದ ಅಡಿಕೆ ಗೇರುಬೀಜ, ಪಶ್ಚಿಮ ಘಟ್ಟಗಳ ಮಲೆನಾಡು, ಶಿವಮೊಗ್ಗದ ಗೊಂಡಾರಣ್ಯಗಳ ಮರಮಟ್ಟುಗಳು, ಹೀಗೆ ಸಕಲ ವಸ್ತುಗಳೂ ನಮ್ಮಲ್ಲಿದ್ದು ನಮ್ಮ ಜನತೆಯ ಹಿತಕ್ಕೆ ಸಹಾಯಕವಾಗಬಹುದು. ಇಂತಹ ಗುಪ್ತ ಸಂಪತ್ತುಗಳನ್ನು ಮೊತ್ತಮೊದಲು ಜನತೆಗೆ ತಿಳಿಸುವ ಕೆಲಸವು ಕವಿಗಳಿಂದ ಲೇಖಕರಿಂದ ಸಾಗಬೇಕು. ನಮ್ಮ ನಾಡಿನ ಹೊರಗೆ ಹೇಗೆ ಕೃಷಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ? ಈಗಲೂ ಅಭಿವೃದ್ಧಿ ಹೊಂದುತ್ತಿವೆ ಎಂಬುದನ್ನು ಕಥೆ ಕಾದಂಬರಿಗಳ ಮೂಲಕ ಜನತೆಗೆ ತಿಳಿಸಲು ಸಾಧ್ಯವಿದೆ. ಇಂತಹ ಸಾಹಿತ್ಯವನ್ನು ಜೀವನಕ್ಕೆ ಉಪಯೋಗವಾದ ಸಾಹಿತ್ಯವೆಂದು ಕರೆದರೆ ಅತಿಶಯವಿಲ್ಲ. ಕನ್ನಡದಲ್ಲಿ ಎಲ್ಲಾ ವಿಷಯಗಳನ್ನೊಳಗೊಂಡ ಗ್ರಂಥಗಳಿದ್ದರೂ ಜೀವನಕ್ಕೆ ಅತ್ಯಂತ ಉಪಯೋಗಿಯಾದ ಗ್ರಂಥರಾಶಿಯು ಅಷ್ಟೊಂದು ಬೆಳಕಿಗೆ ಬಂದಿಲ್ಲವೆಂದೇ ನನ್ನ ಅಭಿಪ್ರಾಯ. ಆದರೂ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಮೈಸೂರು ವಿಶ್ವವಿದ್ಯಾನಿಲಯದವರು ಈ ದೃಷ್ಟಿಯಲ್ಲಿಯೂ ಇತರ ಪ್ರಾಂತದವರಿಗಿಂತ ಮುಂದುವರಿದಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ. ಪರಿಷತ್ತಿನ "ಕನ್ನಡ ನುಡಿ" ಈ ವಿಷಯದಲ್ಲಿ ಹೆಚ್ಚಿನ ಪ್ರಚಾರ ಹಾಗೂ ಪ್ರಚೋದಕ ಲೇಖನಗಳನ್ನು ಪ್ರಕಟಿಸಿ ಇನ್ನಷ್ಟು ಕನ್ನಡಿಗರ ಏಳಿಗೆಗೆ ನೆರವಾಗುವುದೆಂದು ನಂಬುತ್ತೇನೆ.

ಮೈಸೂರಿನ ವಿಶ್ವವಿದ್ಯಾಲಯದ ಆಶ್ರಯದಿಂದ ಪ್ರಕಟವಾದ ಪ್ರಚಾರೋಪನ್ಯಾಸ ಮಾಲೆಯ ಚಿಕ್ಕ ಚಿಕ್ಕ ಪುಸ್ತಕಗಳು ಅತಿ ಅಗ್ಗದ ಬೆಲೆಗೆ ದೊರೆತು ಅದೆಷ್ಟು ಜನಪ್ರಿಯ ವಾಗಿವೆಯೆಂದು ಬೇರೆ ಹೇಳಬೇಕಾಗಿಲ್ಲ.

ಈ ವಸಂತ ಸಾಹಿತ್ಯೋತ್ಸವವು ಕೇವಲ ಸಾಹಿತ್ಯೋತ್ಸವವಾಗಿರದೆ, ಬಗೆಬಗೆಯ ಕಾರ್ಯಕಲಾಪಗಳಿಂದ ತುಂಬಿರುವುದು ನಿಜವಾಗಿಯೂ ಶ್ಲಾಘನೀಯವಾಗಿದೆ. ಈವರೆಗೆ ಇಲ್ಲಿ ನಡೆದ ಉಪನ್ಯಾಸಗಳು ಸಾಹಿತ್ಯದ ಸರ್ವಾಂಗ ವಿಕಾಸಕ್ಕೆ ಹೆಚ್ಚಿನ ಮಟ್ಟಿಗೆ ಸಹಾಯಮಾಡಿವೆ. ಪ್ರಕೃತಿ ವಿಜ್ಞಾನ, ಸಸ್ಯಜೀವನ, ಪ್ರಾಣಿಶಾಸ್ತ್ರಗಳ ಕುರಿತು ಉಪನ್ಯಾಸಗಳನ್ನು ಏರ್ಪಡಿಸುತ್ತಿರುವುದನ್ನು ನೋಡಿದರೆ ಈ ಉತ್ಸವದ ಅವಶ್ಯಕತೆಯನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಉಪನ್ಯಾಸಗಳಂತೆ ಕಾವ್ಯವಾಚನ, ನಾಟಕಾಭಿನಯ ಇತ್ಯಾದಿ ಕಾರ್ಯಕಲಾಪ ಗಳೂ ಜನತೆಯಲ್ಲಿ ಕನ್ನಡದ ಬಗ್ಗೆ ಆದರ ಆಸಕ್ತಿಗಳನ್ನು ಹುಟ್ಟಿಸುವುದರಲ್ಲಿ ಸಂದೇಹವಿಲ್ಲ.

ಎಲ್ಲಕ್ಕಿಂತಲೂ ಹೆಚ್ಚಿನ ಸಫಲ ಕಾರ್ಯವೆಂದರೆ ಪುಸ್ತಕಗಳ ಪ್ರದರ್ಶನ. ಅನೇಕರಿಗೆ ಕನ್ನಡದಲ್ಲಿ ಇಷ್ಟು ಗ್ರಂಥಗಳು ಇವೆಯೇ ಎಂದು ಸಂಶಯ ಬರಬಹುದು. ಗ್ರಂಥಗಳ ಪ್ರದರ್ಶನದಿಂದ ಓದುಗರಿಗೆ ಹೆಚ್ಚಿನ ಪ್ರಯೋಜನವಿದೆ. ಅದರಲ್ಲೂ ಗ್ರಂಥಗಳನ್ನು ವಿಷಯಕ್ಕೆ ಅನುಗುಣವಾಗಿ ವಿಂಗಡಿಸಿ ತೋರಿಸುವುದರಿಂದ ಇನ್ನಷ್ಟು ಪ್ರಯೋಜನವಿದೆ. ನಮ್ಮ ಭಾಷೆಯಲ್ಲಿ ಯಾವ ಯಾವ ವಿಷಯಗಳನ್ನು ಕುರಿತು ಎಷ್ಟೆಷ್ಟು ಗ್ರಂಥಗಳಿವೆಯೆಂದು ತಿಳಿದುಕೊಳ್ಳಲು ಸುಲಭವಾದ ದಾರಿ ಇಲ್ಲ. ಇಂತಹ ಪ್ರದರ್ಶನಗಳು ಈ ಕಾರ್ಯವನ್ನು ತಕ್ಕಷ್ಟು ಮಾಡಬಲ್ಲವು. ಆದರೆ ಈ ವಿಷಯದಲ್ಲಿ ಸಂಪೂರ್ಣವಾಗಿ ಒಂದು ಗ್ರಂಥವನ್ನು ರಚಿಸುವುದು ಅತ್ಯಗತ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನಂತಹ ಅಖಿಲ ಕರ್ನಾಟಕ ಸಂಸ್ಥೆಯು ಈ ಕಾರ್ಯವನ್ನು ಕೈಕೊಳ್ಳಬೇಕು. ಇದಕ್ಕೆ ಸಹಾಯ ಸಹಕಾರಗಳನ್ನೀಯುವುದು ಪ್ರತಿಯೊಬ್ಬ ಓದುಗನ ಆದ್ಯ ಕರ್ತವ್ಯವಾಗಿರಬೇಕು.

ಪರಿಷತ್ತಿನ ವರದಿಗಳನ್ನು ಓದುವಾಗ ಪರಿಷತ್ತು ಸಾಗುತ್ತಿರುವ ದಾರಿ ಶ್ಲಾಘನೀಯವಾಗಿದೆ ಎಂದೆನಿಸುತ್ತದೆ. "ಕನ್ನಡ-ಕನ್ನಡ ಕೋಶ"ದ ತಯಾರಿಕೆಗೆ ಪರಿಷತ್ತು ಪ್ರಯತ್ನಿಸುತ್ತಿರುವುದು ಸ್ತುತ್ಯವಾದರೂ, ಅದಕ್ಕೆ ಚಿನ್ನ ಬೆಳೆಯುವ ನಮ್ಮ ನಾಡಿನಲ್ಲಿ ಸಾಕಷ್ಟು ಪ್ರೋತ್ಸಾಹ ಸಿಗಲಿಲ್ಲವೆಂಬುದು ಕನ್ನಡಿಗರ ದೌರ್ಭಾಗ್ಯವೆನ್ನುವುದಕ್ಕಿಂತಲೂ ಔದಾಸೀನ್ಯವೆಂದರೆ ಸರಿಹೋದೀತು.

ಇಷ್ಟೇ ಅಲ್ಲ,ನಮ್ಮ ಭಾಷೆ ಮತ್ತು ಸಾಹಿತ್ಯಗಳ ಅಭಿವೃದ್ಧಿಗೆ ಆಧುನಿಕ ಉಪಕರಣಗಳಾದ ಟೈಪ್‌ರೈಟರ್, ಲಿನೋಟೈಪ್, ಟೆಲಿಪ್ರಿಂಟರ್ ಇತ್ಯಾದಿಗಳ ಅವಶ್ಯಕತೆಯಿದೆ. ವೃತ್ತಪತ್ರಿಕೆಗಳಂತೂ ಇವುಗಳಿಂದ ಹೆಚ್ಚಿನ ಪ್ರಯೋಜನವಾದೀತು. ಈ ವಿಷಯದಲ್ಲಿ ತಕ್ಕಪ್ರಚಾರ ಹಾಗೂ ಪ್ರಯತ್ನಗಳು ನಡೆಯಲೇಬೇಕು. ಕನ್ನಡದಲ್ಲಿ ಶೀಘ್ರಲಿಪಿ( Short hand)ಯನ್ನು ಬಳಕೆಗೆ ತರಲು ಯತ್ನಿಸಬೇಕು. ಇದರಿಂದ ನಮ್ಮ ಭಾಷೆಯೂ ಇತರ

ಭಾಷೆಗಳೊಡನೆ ಸಮಾನವಾಗಿ ಮುಂದುವರಿಯುವಂತಾದೀತು. ಸುಮಾರು ೩೮ ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತು ಬಳ್ಳಾರಿ ಕನ್ನಡ, ಧಾರವಾಡ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡವೆಂದು ಇದ್ದ ಭೇದಭಾವನೆಯನ್ನು ಬಹುಮಟ್ಟಿಗೆ ಹೋಗಲಾಡಿಸಿದೆಯೆಂದರೆ ಹೆಚ್ಚಲ್ಲ. ಭಾಷೆಯ ಏಕೀಕರಣಕ್ಕೆ ಪರಿಷತ್ತು ಪ್ರಯತ್ನಿಸಿದಂತೆ ನಮ್ಮ ನಾಡಿನ ಪತ್ರಿಕೆಗಳೂ ಪ್ರಯತ್ನಿಸಬೇಕಾಗಿದೆ. ಕೆಲವು ಪತ್ರಿಕೆಗಳು ಈ ವಿಷಯದಲ್ಲಿ ಮುಂದುವರಿಯುತ್ತಿರುವುದು ಶ್ಲಾಘನೀಯವಾಗಿದೆ. ಪತ್ರಿಕೆಗಳಿಗೆ ಈ ಭಾಷೆಯ ಏಕೀಕರಣದಲ್ಲಿ ಹೆಚ್ಚಿನ ಸ್ಥಾನವಿದೆ. ಅಖಿಲ ಕರ್ನಾಟಕಕ್ಕೂ ಅರ್ಥವಾಗುವ ಭಾಷೆಯನ್ನು ಬರೆಯಲು ಪ್ರಯತ್ನಿಸಬೇಕು. ಇದಕ್ಕೆ ಒಂದು ರೀತಿಯ ಸಂಶೋಧನೆಯು ಅವಶ್ಯಕವಾಗಿದೆ.

ಬೇರೆ ಬೇರೆ ಭಾಗಗಳ ಪತ್ರಿಕೆಗಳನ್ನು ಓದಿ ಅವುಗಳಲ್ಲಿ ಒಂದೇ ವಸ್ತುವಿಗೆ ಅಥವಾ ವಿಷಯಕ್ಕೆ ಉಪಯೋಗಿಸಲ್ಪಟ್ಟ ಪದಗಳಲ್ಲಿ ಸುಲಭವಾದುವನ್ನು ಆರಿಸಿ ಅವನ್ನೇ ಉಪಯೋಗಿಸುತ್ತ ಬರಬೇಕು. ಆಗ ಎಲ್ಲರಿಗೂ ಅರ್ಥವಾಗುವುದು. ಹಾಗೆಯೇ ಕವಿಗಳು, ಕಲೆಗಾರರು, ಕಾದಂಬರಿಗಾರರು ಈ ವಿಷಯದಲ್ಲಿ ಪ್ರಯತ್ನಿಸಿದರೆ ಚೆನ್ನಾದೀತು. ಭಾಷೆಯ ಏಕೀಕರಣಕ್ಕಾಗಿ ಪರಿಷತ್ತು ಆಲೋಚಿಸಿದಂತೆ ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳನ್ನು ಒಂದೇ ರೀತಿಯ ಭಾಷೆಯಲ್ಲಿ ರಚಿಸುವುದು ಅತ್ಯಂತ ಉಪಯುಕ್ತವಾದ ಕಾರ್ಯವಾಗಿದೆ. ಈ ಕುರಿತು ೧೯೫೦ರಲ್ಲೇ ಕಾರ್ಯಕ್ರಮ ಕೈಕೊಳ್ಳಲಾದರೂ ಈವರೆಗೆ ಕೃತಿಯಲ್ಲಿ ಬಾರದಿರುವುದಕ್ಕೆ ಕನ್ನಡಿಗರ ಹಲವಾರು ಸಮಸ್ಯೆಗಳೇ ಕಾರಣಗಳೆನ್ನಬಹುದು.

ಇಂದು ಬಳ್ಳಾರಿಯ ಕೆಲಭಾಗಗಳು ಮೈಸೂರಿನಲ್ಲಿ ಸೇರುವುದು ಸಂತೋಷದ ವಿಷಯವಾಗಿದೆ. ಈ ಭಾಗಗಳಿಗೆ ಹಿಂದೆ ಬರಗಾಲದ ಪ್ರದೇಶಗಳೆಂದು ಹೆಸರಿದ್ದರೂ ಈಗ ತುಂಗಭದ್ರಾ ಆಣೆಕಟ್ಟಿನಿಂದ ಇಲ್ಲಿ ಬರಗಾಲದ ಗಾಳಿಯೇ ಮುಂದೆ ಸೋಂಕಲಾರದು. ಅದರಲ್ಲೂ ಮೈಸೂರಿಗೆ ಸೇರಿದ ಮೇಲೆ ಬರಗಾಲದ ಹೆಸರನ್ನೂ ನಾವು ಕೇಳಲಾರೆವು. ಈ ಕಾರಣದಿಂದ ಬಳ್ಳಾರಿಯವನಾದ ನನ್ನನ್ನು ತಾವು ಇಲ್ಲಿಗೆ ಬರಮಾಡಿಕೊಂಡಿದ್ದೀರೆಂದು ಭಾವಿಸುತ್ತೇನೆ. ಇದರಿಂದ ಅಪ್ರಸ್ತುತವಾದರೂ ಈ ಸಂದರ್ಭದಲ್ಲಿ ಬಳ್ಳಾರಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಕನ್ನಡ ನಾಡಿನ ಹೃದಯದಂತಿರುವ ಮೈಸೂರಿಗೆ ಬಳ್ಳಾರಿಯ ಭಾಗಗಳನ್ನು ಸೇರಿಸುವುದೆಂದರೆ ಕಟ್ಟೆಕಲ್ಲು ಕಟ್ಟೆಗೆ ಕೂಡಿಸಿದಂತಾಯಿತು. ಇದು ಕರ್ನಾಟಕ ಏಕೀಕರಣಕ್ಕೆ ನಾಂದಿಯೆನ್ನಬೇಕು. ಮೈಸೂರಿಗೂ ಬಳ್ಳಾರಿಗೂ ಇದ್ದ ಸಂಬಂಧವು ಇಂದು ನಿನ್ನೆಯದಲ್ಲ. ವಿಜಯನಗರದ ಅರಸರ ಕಾಲದಿಂದಲೇ ನಮ್ಮ ನಿಮ್ಮ ಸಂಬಂಧವು ಬೆಳೆದು ಬಂದಿದೆ.

ಬುಕ್ಕನ ಮಗ ಹಿರಿಯ ಕಂಪಣನು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳನ್ನು ಆಳುತ್ತಿದ್ದನು. ಕೃಷ್ಣದೇವರಾಯನ ಕಾಲದಲ್ಲಂತೂ ಬಳ್ಳಾರಿ ಮೈಸೂರುಗಳ ಸಂಬಂಧವು ಮುಗಿಲು ಮುಟ್ಟಿತು. ಹಲವಾರು ಕಾರಣಗಳಿಂದ ಬಳ್ಳಾರಿ ಹಿಂದುಳಿಯಿತು. ಇಲ್ಲಿ ಕಣ್ಣಂಬಾಡಿ

ಆಣೆಕಟ್ಟು ಹುಟ್ಟುವ ಮೊದಲೇ ಅಲ್ಲಿ ತುಂಗಭದ್ರೆಯ ಆಣೆಕಟ್ಟು ಹುಟ್ಟಬೇಕಾಗಿತ್ತು. ಅದು ಆಗದೇ ಉಳಿಯಿತು. ಇತ್ತೀಚೆಗೆ ಜನತಾ ಸರಕಾರದ ಆಶ್ರಯದಲ್ಲಿ ತುಂಗಭದ್ರ ಆಣೆಕಟ್ಟು ತಲೆದೋರಿ ಜನತೆಯ ಸ್ವಾಗತವನ್ನು ಸ್ವೀಕರಿಸತೊಡಗಿದೆ. ಮೈಸೂರಿನ ತುಂಗೆ, ಮೈಸೂರಿನ ಭದ್ರೆ ಬಳ್ಳಾರಿಗೆ ತುಂಗಭದ್ರೆಯಾಗಿ ಬಂದು ಕನ್ನಡಿಗರ ಏಳಿಗೆಯನ್ನು ಹಾರೈಸಿದೆ. ಬಳ್ಳಾರಿಯಲ್ಲಿ ಸುರಿದ ಚಿನ್ನದ ಮಳೆ ಕೋಲಾರದ ಕಡೆಗೆ ಇಂಗಿ ಇಂದು ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ. ಹೀಗಿದೆ ನಮ್ಮ ನಿಮ್ಮ ಸಂಬಂಧ. ಈ ಸಂಬಂಧವು ಚಿರಕಾಲ ಉಳಿಯಲೆಂದೇ ನನಗೆ ಈ ಸಂದರ್ಭ ಒದಗಿಸಿದ್ದೀರೆಂದು ಭಾವಿಸುತ್ತೇನೆ. ಈ ವಸಂತೋತ್ಸವವು ಬೆಂಗಳೂರಲ್ಲಿ, ಮೈಸೂರಲ್ಲಿ ಮಾತ್ರವಲ್ಲದೇ ಕನ್ನಡ ನಾಡಿನ ಮೂಲೆಮೂಲೆಗಳಲ್ಲೂ ನಡೆದು ಕನ್ನಡ ನಾಡಿನ ಸರ್ವತೋಮುಖ ಏಳಿಗೆಯಾಗಲೆಂದು ಹೃದಯಪೂರ್ವಕ ಹಾರೈಸುತ್ತೇನೆ. ಕನ್ನಡ ನಾಡು ಒಂದಾಗಿ ಬಾಳಲಿ. ಕನ್ನಡ ಸಾಹಿತ್ಯ ಸಂಸ್ಕೃತಿಗಳು ಅಚ್ಚಳಿಯದೆ ನೆಲೆನಿಲ್ಲಲಿ. ಭಾರತ ರಾಷ್ಟ್ರದಲ್ಲಿ ಕನ್ನಡ ನಾಡು ಸಾಹಿತ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹವಿತ್ತ ಮೈಸೂರಿನ ರಾಜಮನೆತನದವರನ್ನು ಈ ಸಂದರ್ಭದಲ್ಲಿ ಎಂದೂ ಮರೆಯಲಾರೆವು. ಕರ್ನಾಟಕ ಸಿಂಹಾಸನಾಧೀಶರಾಗಿದ್ದ ಶ್ರೀಮಾನ್ ಜಯಚಾಮರಾಜ ಒಡೆಯರೇ ಇಂದು ಇಲ್ಲಿ ರಾಜಪ್ರಮುಖರಾಗಿರುವುದು ನಿಜವಾಗಿಯೂ ಹೆಮ್ಮೆಯ ವಿಷಯವಾಗಿದೆ. ಸಾಹಿತ್ಯ ಪರಿಷತ್ತಿನ ಮಹಾಪೋಷಕರಾದ ಶ್ರೀಮನ್ಮಹಾರಾಜರು ನಾಡುನುಡಿಗಳ ಏಳಿಗೆಗೆ ಇನ್ನಷ್ಟು ಪ್ರೋತ್ಸಾಹ ಕೊಡುವರೆಂದು ಹೃದಯಪೂರ್ವಕ ಹಾರೈಸುತ್ತಾ ಈ ವಸಂತ ಸಾಹಿತ್ಯೋತ್ಸವದ ಆರಂಭ ಕಾರ್ಯವನ್ನು ನೆರವೇರಿಸುತ್ತಿದ್ದೇನೆ.

■ ■

---

ಪ್ರಕಟಣೆ: ಕನ್ನಡ ನುಡಿ ೧೬-೬, ಪುಟ. ೧೭೧ರಿಂದ ೧೭೪, ಜೂನ್ ೧೯೫೩

೩.

## ಮೈಸೂರು ಸರ್ಕಾರದ ವ್ಯವಸಾಯ ಮಂತ್ರಿಗಳಾದ ಮಾನ್ಯ ಶ್ರೀ ಡಾ ಆರ್. ನಾಗನಗೌಡ, ಎಂಎಸ್‌ಸಿ, ಪಿ.ಹೆಚ್.ಡಿ., ಅವರು ಬಳ್ಳಾರಿಯಲ್ಲಿ ನಡೆದ ಸಂಸ್ಕೃತಿ ಪ್ರಸಾರ ದಿನಾಚರಣೆಯ ಉತ್ಸವದಲ್ಲಿ ಮಾಡಿದ ಅಧ್ಯಕ್ಷ ಭಾಷಣ.

(೧೯೫೪ನೆಯ ಇಸವಿ ಡಿಸೆಂಬರ್ ತಿಂಗಳು ೬ನೆಯ ತಾರೀಖು ಸೋಮವಾರ)

ಮಹಿಳೆಯರೇ ಮತ್ತು ಮಹಾಶಯರೇ,

ಸಂಸ್ಕೃತಿ ಪ್ರಸಾರ ದಿನಾಚರಣೆಯ ಉತ್ಸವದಲ್ಲಿ ಅಧ್ಯಕ್ಷತೆ ವಹಿಸಿರುವುದು ನನ್ನ ಮನಸ್ಸಿಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ. ಈ ದಿನ ಇಲ್ಲಿ ಅಧ್ಯಕ್ಷತೆ ವಹಿಸಿ ಭಾಷಣ ಮಾಡಬೇಕೆಂಬ ಆಹ್ವಾನವನ್ನು ನಾನು ಒಡನೆಯೇ ಸ್ವೀಕರಿಸಿದೆ. ಸಂಸ್ಕೃತಿ ಪ್ರಸಾರ ಯೋಜನೆಯ ವಿಚಾರದಲ್ಲಿ ನನಗಿರುವ ತೀವ್ರಾಸಕ್ತಿಯೇ ಅದಕ್ಕೆ ಕಾರಣ. ಈ ಆಹ್ವಾನವು ನನಗೆ ಲಭಿಸಲು ಕಾರಣರಾದವರೆಲ್ಲರಿಗೂ ನನ್ನ ವಂದನೆಗಳು ಸಲ್ಲಬೇಕಾಗಿವೆ.

ಸಂಸ್ಕೃತಿ ಪ್ರಸಾರ ದಿನಾಚರಣೆಯು ಗೀತಾಜಯಂತಿಯ ಈ ಶುಭದಿನ ನಡೆಯುತ್ತಿರುವುದು ನಮ್ಮೆಲ್ಲರಿಗೂ ಮತ್ತಷ್ಟು ಸಂತೋಷಕರವಾಗಿದೆ. ಸಂಸ್ಕೃತಿ ಪ್ರಸಾರ ಯೋಜನೆಯ ಪ್ರಾರಂಭೋತ್ಸವವು ನಡೆದುದೇ ಗೀತಾ ಜಯಂತಿಯ ದಿನ. ಸಂಸ್ಕೃತಿ ಪ್ರಸಾರ ದಿನಾಚರಣೆಯ ಉತ್ಸವವು ಕಳೆದ ವರ್ಷವೂ ಗೀತಾ ಜಯಂತಿಯ ದಿನ ನಡೆಯಿತು. ಭಗವದ್ಗೀತೆಯು ಪ್ರಪಂಚದಲ್ಲೇ ಪ್ರಸಿದ್ಧವಾದ ಪವಿತ್ರ ಗ್ರಂಥಗಳಲ್ಲೊಂದಾಗಿದೆ. ನಮ್ಮ ದೇಶದ ಮತ್ತು ಹೊರದೇಶಗಳ ಸಾಧುಸಂತರೂ, ವಿದ್ವನ್ಮಣಿಗಳೂ, ಭಗವದ್ಗೀತೆಯನ್ನು ಕೊಂಡಾಡಿದ್ದಾರೆ. ಅಮೇರಿಕಾ ಖಂಡದ ಬಾಲಕ-ಬಾಲಕಿಯರು ಭಗವದ್ಗೀತೆಯ ಇಂಗ್ಲಿಷ್ ಭಾಷಾಂತರವನ್ನಾದರೂ ಓದಿ ಮನನ ಮಾಡುವುದು ಶ್ರೇಯಸ್ಕರವೆಂದು ಅಮೆರಿಕಾ ಖಂಡದ ಜ್ಞಾನಿಗಳೊಬ್ಬರು ತಿಳಿಸಿದ್ದಾರೆ. ಭಗವದ್ಗೀತೆಯಲ್ಲಿ ಹೇಳಿರುವುದನ್ನು ಅಲ್ಪಸ್ವಲ್ಪ ಅನುಸರಿಸಿದರೂ ಅವರು ಸತ್ಪ್ರಜೆಗಳಾಗಿ ಬಾಳಲನುಕೂಲಿಸುವುದೆಂದೂ, ಅದರಿಂದ ದೇಶವೇ ಉದ್ಧಾರವಾಗುವುದೆಂದೂ, ಆ ಪ್ರಾಜ್ಞರು ಅಭಿಪ್ರಾಯಪಟ್ಟಿದ್ದಾರೆ. ಭಗವದ್ಗೀತೆಯು ವಿದೇಶಿಯರಿಗೆ ಕೂಡ ಅಷ್ಟುಮಟ್ಟಿನ ಸ್ಫೂರ್ತಿಯನ್ನು ಕೊಟ್ಟಿದೆ. ಇಂದು ಕೂಡ ನಾವು ಅದರಿಂದ ಯಥೇಷ್ಟವಾಗಿ ಸ್ಫೂರ್ತಿಯನ್ನು ಪಡೆದು, ಶ್ರದ್ಧೆಯಿಂದ ನಮ್ಮ ಕರ್ತವ್ಯವನ್ನು

ನೆರವೇರಿಸಬಹುದು. ಗೀತೆಯು ಒಟ್ಟು ಮಾನವ ವರ್ಗಕ್ಕೇ ಮಂಗಳದಾಯಕವಾದ ಗ್ರಂಥ. ಅದರಲ್ಲಿ ಹೇಳಿರುವುದು ಲೋಕಸಂಗ್ರಹ ವಿಚಾರ. ಇಡೀ ಮಾನವ ವರ್ಗದ ಶ್ರೇಯಸ್ಸು ಗೀತೆಯಲ್ಲಿ ಪ್ರತಿಪಾದಿತವಾಗಿದೆ. ಭಗವದ್ಗೀತೆಯು ಯಾವ ಕಾಲದವರಿಗಾಗಲಿ, ಯಾವ ಜನಾಂಗದವರಿಗಾಗಲಿ ಉಪಯೋಗಕರವಾಗುವ ಉಪದೇಶ ವಾಣಿಗಳನ್ನೊಳಗೊಂಡಿದೆ. ಧರ್ಮ ಸಂಸ್ಥಾಪನೆಯೇ ಭಗವದ್ಗೀತೆಯ ಗುರಿ. ನಮ್ಮ ಭಾರತವು ಧರ್ಮವನ್ನೂ, ಸತ್ಯವನ್ನೂ, ಶೀಲವನ್ನೂ ಧ್ಯೇಯವಾಗಿಟ್ಟುಕೊಂಡ ಪುಣ್ಯ ಭೂಮಿ. ಶ್ರೀ ಕೃಷ್ಣ ಪರಮಾತ್ಮನು ಧರ್ಮ ಸಂಸ್ಥಾಪನೆಗಾಗಿ ತನ್ನ ಸರ್ವ ಸಾಮರ್ಥ್ಯವನ್ನೂ ಪ್ರಯೋಗಿಸಿದ ಪಾವನ ಮೂರ್ತಿ. ಆದ ಕಾರಣ, ಆತನು ಅರ್ಜುನನಿಗೆ ಭಗವದ್ಗೀತೆಯನ್ನು ಉಪದೇಶಿಸಿದ ದಿನ ಸಂಸ್ಕೃತಿ ಪ್ರಸಾರ ದಿನಾಚರಣೆಯ ಉತ್ಸವವು ನಡೆಯುತ್ತಿರುವುದು ಶುಭಸೂಚನೆ. ಏಕೆಂದರೆ, ಭಗವಂತನ ಸಂಕಲ್ಪವೂ ಸಹಾಯವೂ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸಲಾರದೆಂದು ನಂಬಿರುವವರು ನಾವು. ಗೀತಾ ಜಯಂತಿಯ ಶುಭದಿನ ನಾವು ಭಗವಂತನನ್ನು ಪ್ರಾರ್ಥಿಸಿ ಆತನ ಕೃಪೆಗೆ ಪಾತ್ರರಾದರೆ, ನಮ್ಮ ಕೆಲಸಗಳೆಲ್ಲಾ ಸುಸೂತ್ರವಾಗಿ ನಡೆಯುವುದರಲ್ಲಿ ಸಂದೇಹವೇ ಇಲ್ಲ. ಭಗವಂತನ ಅಸ್ತಿತ್ವದಲ್ಲಿ ನಂಬಿಕೆಯಿಡದೆ ಹೋದರೆ ಆಶ್ಚರ್ಯವೇನೂ ಇರಬೇಕಾಗಿಲ್ಲದ ಜಗತ್ಪ್ರಸಿದ್ಧರಾದ ವಿಜ್ಞಾನಿಗಳಲ್ಲೇ ಹಲವರು ಆಸ್ತಿಕರಾಗಿದ್ದಾರೆ. ಹೀಗಿರುವಲ್ಲಿ ಆಸ್ತಿಕತೆಯ ಸಿರಿಬೀಡಾದ ಭಾರತದಲ್ಲಿರುವ ನಾವು ನಾಸ್ತಿಕ ಬುದ್ಧಿಯಿಂದ ವರ್ತಿಸುವುದು ಸಾಧ್ಯವೇ ಇಲ್ಲ. ದೇವರ ಮೇಲೆ ಭಾರಹಾಕಿ ಸ್ವಪ್ರಯತ್ನದಿಂದ ಧೀರರಂತೆ ಕೆಲಸಮಾಡಿದರೆ, ಅಂಥ ಕೆಲಸವೆಂದಿಗೂ ವ್ಯರ್ಥವಾಗದು.

ಪ್ರಜೆಗಳ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ಸಂಪದಭಿವೃದ್ಧಿ ಮಾಡಿದ ಮಾತ್ರದಿಂದಲೇ ದೇಶೋನ್ನತಿ ಸಾಧನೆಯು ಪೂರ್ಣವಾದಂತಾಗಲಿಲ್ಲ. ಕೇವಲ ಹೊಟ್ಟೆ ಬಟ್ಟೆಗಳಷ್ಟನ್ನೋ ಅಥವಾ ಇನ್ನೂ ಹೆಚ್ಚಿನ ಸುಖಸಾಧನೆಗಳಷ್ಟನ್ನು ಮಾತ್ರವೇ ನೋಡಿ ಕೊಂಡರೆ, ಮನುಷ್ಯರಿಗೂ ಪಶುಗಳಿಗೂ ಹೆಚ್ಚು ವ್ಯತ್ಯಾಸವೇನೂ ಇಲ್ಲ. ನಿಜವಾಗಿಯೂ ಮನುಷ್ಯ ಜೀವನಕ್ಕೆ ಅಷ್ಟೇ ಸಾಲದು. ಮನುಷ್ಯನು ಮನುಷ್ಯನಿಗುಚಿತವಾದ ರೀತಿಯಲ್ಲಿ ವರ್ತಿಸಬೇಕು. ದೇಹಸೌಖ್ಯವನ್ನು ಹೆಚ್ಚಿಸುವ ಸಂಪದಭಿವೃದ್ಧಿ ಯೋಜನೆಗಳಿಗೆ ಮಾತ್ರವೇ ಗಮನಕೊಟ್ಟರೆ ಸರ್ಕಾರದ ಕರ್ತವ್ಯವು ಮುಗಿದಂತಾಗುವುದಿಲ್ಲ. ಅವುಗಳಿಗೆ ಗಮನಕೊಡುವುದರ ಜೊತೆಗೆ ಸರ್ಕಾರದವರು ಪ್ರಜೆಗಳ ನೀತಿಯ ಮಟ್ಟವನ್ನೂ, ಧರ್ಮಶ್ರದ್ಧೆಯನ್ನೂ ಹೆಚ್ಚಿಸುವ ಯೋಜನೆಯನ್ನೂ ಏರ್ಪಡಿಸುವುದಕ್ಕೂ ಗಮನ ಕೊಡಬೇಕು. ಹಾಗೆ ಮಾಡದೆ ಹೋದಲ್ಲಿ ಸರ್ಕಾರದವರು ಮಾಡುವ ದೇಶೋನ್ನತಿ ಸಾಧನೆಯ ಪ್ರಯತ್ನಗಳು ಅಪೂರ್ಣವೇ ಸರಿ. ಅದನ್ನು ಮನಗಂಡ ಕಾರಣದಿಂದಲೇ ಮೈಸೂರು ಸರ್ಕಾರಧವರು, ಸಂಸ್ಕೃತಿ ಪ್ರಸಾರ ಯೋಜನೆಯನ್ನು ಏರ್ಪಡಿಸಿದರು.

ಹಿಂದೆ ಅಶೋಕ ಚಕ್ರವರ್ತಿಯು ತನ್ನ ಪ್ರಜೆಗಳು ಧರ್ಮದಿಂದ ನಡೆಯುವಂತೆ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಯೋಚಿಸಿ, ಆ ರೀತಿ ಮಾಡಿದನು. ಧರ್ಮ ಪ್ರಸಾರ ಮಾಡಿ ಪ್ರಜೆಗಳನ್ನು ಧರ್ಮ ಪರರಾಗಿರುವಂತೆ ಮಾಡುವುದಕ್ಕಾಗಿ ದೊಡ್ಡದೊಂದು ಇಲಾಖೆಯನ್ನೇ ಆತನು ಏರ್ಪಡಿಸಿದನು. ಪ್ರಜೆಗಳ ಧರ್ಮಪ್ರವೃತ್ತಿಯನ್ನು ಹೆಚ್ಚಿಸಲು ಸಾಧಕವಾದ ಶಾಸನವಾಣಿಗಳನ್ನು ಅಲ್ಲಲ್ಲಿ ದೊಡ್ಡ ಬಂಡೆಗಳ ಮೇಲೆಲ್ಲ ಆತನು ಕೆತ್ತಿಸಿದನು. ಧರ್ಮಪ್ರಸಾರಕ್ಕಾಗಿ ಆತನು ಕೋಟ್ಯಂತರ ದ್ರವ್ಯವನ್ನು ವೆಚ್ಚಮಾಡಿದನು. ಆತನ ಪ್ರಯತ್ನಕ್ಕೆ ಆತನ ಕಾಲದಲ್ಲೇ ವಿಶೇಷವಾಗಿ ಫಲವಾಯಿತು. ಹಾಗೆ ಧರ್ಮಪ್ರಸಾರ ಮಾಡಿದುದಕ್ಕಾಗಿ ಅಶೋಕನನ್ನು ಪ್ರಪಂಚದ ಪ್ರಸಿದ್ಧ ಲೇಖಕರಲ್ಲಿ ಹಲವರು ಕೊಂಡಾಡಿದ್ದಾರೆ. ಈಚೆಗೆ ದಿವಂಗತರಾದ ಸುಪ್ರಸಿದ್ಧ ಲೇಖಕರಾದ ಎಚ್.ಜಿ.ವೆಲ್ಸ್ ಎಂಬ ಮಹಾಶಯರಂತೂ, ಈ ಪ್ರಪಂಚದಲ್ಲಿ ಬಾಳಿದ ಲಕ್ಷಾಂತರ ಮಂದಿ ಚಕ್ರವರ್ತಿಗಳು ಮತ್ತು ರಾಜರುಗಳಲ್ಲಿ ಅಶೋಕನ ಹೆಸರೊಂದೇ ಶಾಶ್ವತವಾಗಿ ಜನರ ನೆನಪಿನಲ್ಲಿರುತ್ತದೆಂದು ಬರೆದಿದ್ದಾರೆ. ಉಳಿದವರಲ್ಲಿ ಯಾರ ನೆನಪೂ ಜನರಿಗಿರುವುದಿಲ್ಲವೆಂದೂ ಅಶೋಕನೊಬ್ಬನ ಹೆಸರು ಮಾತ್ರ ಧ್ರುವ ತಾರೆಯಂತೆ ಬೆಳಗುವುದೆಂದೂ, ಅವರು ಬರೆದಿದ್ದಾರೆ. ಅಶೋಕ ಚಕ್ರವರ್ತಿಯು ಧರ್ಮಪ್ರಸಾರ ಮಾಡಿ ಧನ್ಯನಾದುದೇ ಅದಕ್ಕೆ ಕಾರಣ. ಧರ್ಮದ ಕಡೆಗೆ ಮನಸ್ಸು ತಿರುಗುವುದಕ್ಕೆ ಮುಂಚೆ, ಅಶೋಕನಷ್ಟು, ಕ್ರೂರಿಯು ಮತ್ತಾವನೂ ಇರಲಿಲ್ಲ. ಧರ್ಮದ ಕಡೆಗೆ ಮನಸ್ಸು ತಿರುಗಿ ಧಾರ್ಮಿಕ ಗ್ರಂಥಗಳನ್ನು ವ್ಯಾಸಂಗಮಾಡಿದ ಮೇಲೆ ಕಳಿಂಗದ ಮುತ್ತಿಗೆಯಾದ ಮೇಲೆ ಅಶೋಕನನ್ನು ಮೀರಿಸಿದ ಧರ್ಮಾತ್ಮನು ಮತ್ತಾವನೂ ಇರಲಿಲ್ಲ.

ಆದಕಾರಣ, ಸಂಸ್ಕೃತಿ ಪ್ರಸಾರ ಯೋಜನೆಯ ಕಾರ್ಯಕಲಾಪಗಳ ಮೂಲಕ ಜನರ ಧರ್ಮಶ್ರದ್ಧೆಯನ್ನೂ, ನೀತಿಯ ಮಟ್ಟವನ್ನೂ ಹೆಚ್ಚುಮಾಡುವ ಪ್ರಯತ್ನಗಳು ಅಗತ್ಯವಾಗಿ ನೆರವೇರಬೇಕೆಂಬುದರಲ್ಲಿ ಸಂದೇಹವೇ ಇಲ್ಲ. ಅದನ್ನು ಅರಿತುಕೊಂಡೇ, ಮೈಸೂರು ಸರ್ಕಾರದವರು ಸಂಸ್ಕೃತಿ ಪ್ರಸಾರ ಯೋಜನೆಯನ್ನು ಕೈಕೊಂಡಿದ್ದಾರೆ. ಆದರೆ, ಸಂಪದಭಿವೃದ್ಧಿಯ ಯೋಜನೆಗಳನ್ನೇನೂ ಅವರು ಅಲಕ್ಷ್ಯಮಾಡಿಲ್ಲ. ಕೋಟ್ಯಾಂತರ ರೂಪಾಯಿಗಳು ವೆಚ್ಚವಾಗುವ ಅನೇಕ ಸಂಪದಭಿವೃದ್ಧಿ ಯೋಜನೆಗಳನ್ನು ಅವರು ಕೈಕೊಂಡಿದ್ದಾರೆ. ಅವಕ್ಕೆ ವೆಚ್ಚವಾಗುವ ಹಣಕ್ಕೆ ಹೋಲಿಸಿದರೆ ಸಂಸ್ಕೃತಿ ಪ್ರಸಾರ ಯೋಜನೆಗಾಗಿ ಆಗಬಹುದಾದ ವೆಚ್ಚವು ತೀರ ಅಲ್ಪವೆಂದೇ ಧಾರಾಳವಾಗಿ ಹೇಳಬಹುದು.

೧೯೫೩ನೆಯ ಇಸವಿ ಅಕ್ಟೋಬರ್ ತಿಂಗಳು ೧ನೆಯ ತಾರೀಖಿನಿಂದ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಮೈಸೂರು ಸಂಸ್ಥಾನಕ್ಕೆ ಸೇರಿ, ಈಗಿನ ಬಳ್ಳಾರಿ ಜಿಲ್ಲೆಯು ಏರ್ಪಟ್ಟಿತಷ್ಟೆ. ನೂತನವಾಗಿ ಸೇರಿದ ಈ ಏಳು ತಾಲ್ಲೂಕುಗಳ ಸಂಪದಭಿವೃದ್ಧಿ ಸಾಧನೆಗಾಗಿ ಮೈಸೂರು ಸರ್ಕಾರದವರು ಯಾವ ಯಾವ ಸೌಕರ್ಯಗಳನ್ನು ಕಲ್ಪಿಸಿದ್ದಾರೆಂಬ ವಿಚಾರವಾಗಿ ಕೆಲವು ಸಂಗತಿಗಳನ್ನು ಸೂಚಿಸಿದರೆ, ಬಹುಶಃ, ಅದು ಅಪ್ರಕೃತವಾಗಲಾರದು. ಆ ಸಂಗತಿಗಳನ್ನು

ತಾವು ಕೇಳಿದರೆ ತಮ್ಮ ಮನಸ್ಸಿಗೆ ಸಂತೋಷವಾಗಬಹುದೆಂದೂ ನಾನು ನಂಬಿದ್ದೇವೆ. ಅಲ್ಲದೆ, ನೂತನವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿದ ಬಳ್ಳಾರಿ ಪ್ರದೇಶದ ವಿಷಯದಲ್ಲಿ ಸರ್ಕಾರದವರು ತಕ್ಕಷ್ಟು ಆಸಕ್ತಿ ವಹಿಸಿಲ್ಲವೆಂದು ಆಗಾಗ್ಗೆ ನಡೆದಿರುವ ಟೀಕೆಗಳು ನ್ಯಾಯವಲ್ಲವೆಂಬುದು ತಮ್ಮ ಮನಸ್ಸಿಗೆ ಖಚಿತವಾಗಿ ಗೊತ್ತಾಗುವುದೆಂದೂ ನಾನು ನಂಬಿದ್ದೇನೆ. ಈ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಸರ್ಕಾರದವರು ಕಾರ್ಯಕಾರಿಗಳಾದ ಅನೇಕ ವ್ಯವಸ್ಥೆಗಳನ್ನು ವಿಚಕ್ಷಣೆಯಿಂದ ಏರ್ಪಡಿಸಿದ್ದಾರೆ. ಲೇಶಮಾತ್ರವೂ ಅತಿಶಯೋಕ್ತಿತ ಶಂಕೆಯೇ ಇಲ್ಲದೆ ಈ ರೀತಿ ಹೇಳಬಹುದಾಗಿದೆ. ಈ ಪ್ರದೇಶದಲ್ಲಿ ಹೀಗೆ ಸೌಕರ್ಯಕಲ್ಪನೆ ಮಾಡುವ ಸಂಬಂಧದಲ್ಲಿ ಇತರ ಕೆಲಕೆಲವು ಪ್ರದೇಶಗಳಲ್ಲಿ ಒದಗಿಸಬೇಕೆಂದಿದ್ದ ಕೆಲಕೆಲವು ಸೌಕರ್ಯಗಳನ್ನು ಕಲ್ಪಿಸದೆ, ಆ ರೀತಿ ಮಾಡಬೇಕೆಂದು ಸರ್ಕಾರದವರು ನಿರ್ಧರಿಸಿದರು. ಮೈಸೂರು ಸಂಸ್ಥಾನಕ್ಕೆ ಸೇರಿದ ಏಳು ತಾಲ್ಲೂಕುಗಳ ಈ ಪ್ರದೇಶದಲ್ಲಿ ಖನಿಜಸಂಪತ್ತು ಅಧಿಕವಾಗಿರುವುದು ನಿಜ. ಇಲ್ಲಿ ಪುಷ್ಕಳವಾಗಿ ಬೆಳೆಯಾಗುತ್ತಿರುವುದೂ ನಿಜವೇ. ಆದಾಗ್ಯೂ, ಈ ಪ್ರದೇಶದಲ್ಲಿ ಹುಟ್ಟುವಳಿಗಿಂತ ವೆಚ್ಚವು ವರ್ಷಕ್ಕೆ ನಲವತ್ತು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ. ಸರ್ಕಾರದವರು ಒಳಪಡಿಯನ್ನು ಸರಿದೂಗಿಸಬೇಕಾಗಿದೆ. ಹಾಗೆ ಸರಿದೂಗಿಸುವುದೇನೂ ಸುಲಭವಾದ ಕೆಲಸವಲ್ಲ. ಹೀಗಿದ್ದೂ ಅದರ ಜೊತೆಗೆ ಈ ಪ್ರದೇಶದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ, ಸುಮಾರು ಒಂದು ಕೋಟಿ ಮೂರು ಲಕ್ಷ ರೂಪಾಯಿಗಳ ಭಾರಿ ಮೊಬಲಗನ್ನು ಸರ್ಕಾರದವರು ಮೀಸಲಾಗಿಡುವಂತೆ ನಿರ್ಧರಿಸಿದ್ದಾರೆ. ಈ ಏಳು ತಾಲ್ಲೂಕುಗಳ ಪ್ರದೇಶವು ಮೈಸೂರು ಸಂಸ್ಥಾನಕ್ಕೆ ಸೇರಿದ ಕೂಡಲೆ, ಸರ್ಕಾರದವರು ಇಲ್ಲಿಯ ಜನರ ಕುಂದುಕೊರತೆಗಳನ್ನು ವಿಚಾರಮಾಡಿ ತಿಳಿದುಕೊಂಡು ಅವಶ್ಯವಾದ ಸೌಕರ್ಯಗಳನ್ನು ಏರ್ಪಡಿಸುವ ಪ್ರಯತ್ನವನ್ನು ಕೈಕೊಂಡರು. ಆ ವಿಚಾರವಾಗಿ ನಾನಾ ವಿವರಗಳನ್ನು ವಿಸ್ತಾರವಾಗಿ ಸೂಚಿಸುವುದು ಈ ಭಾಷಣದಲ್ಲಿ ಸಾಧ್ಯವಿಲ್ಲ. ಆಧಕಾರಣ, ಸಂಕ್ಷೇಪವಾಗಿ ಕೆಲವು ಸಂಗತಿಗಳನ್ನು ಮಾತ್ರವೇ ಸೂಚಿಸುತ್ತೇವೆ. ಮೈಸೂರು ಸಂಸ್ಥಾನದ ಇತರ ಪ್ರದೇಶಗಳಲ್ಲಿ ಕಲ್ಪಿತವಾಗಿರುವ ಸೌಕರ್ಯಗಳೇ ಈ ಬಳ್ಳಾರಿ ಪ್ರದೇಶದಲ್ಲೂ ಕಲ್ಪಿತವಾಗಬೇಕೆಂಬುದು ಸರ್ಕಾರದವರ ಆಕಾಂಕ್ಷೆ. ವಿದ್ಯುಚ್ಛಕ್ತಿಯ "ಪಂಪು"ಗಳಿಂದ ನೀರನ್ನೆತ್ತಿ ನೀರಾವರಿ ಸಾಗುವಳಿಗೆ ಅನುಕೂಲಪಡಿಸುವ ಏರ್ಪಾಡುಗಳು ಭರದಿಂದ ಸಾಗುತ್ತಿವೆ. ಹರಪನಹಳ್ಳಿಗೂ, ಅದರ ಸುತ್ತಮುತ್ತಲಿನ ಗ್ರಾಮಗಳಿಗೂ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸುವುದಕ್ಕಾಗಿ ಸುಮಾರು ೨,೬೭,೦೦೦ ರೂಪಾಯಿಗಳ ವೆಚ್ಚದ ಯೋಜನೆಯು ಮಂಜೂರಾಗಿದೆ. ಇದೇ ಉದ್ದೇಶಕ್ಕೋಸ್ಕರ, ಕಮಲಾಪುರಕ್ಕಾಗಿ ೧,೧೪,೫೦೦ ರೂಪಾಯಿಗಳ ವೆಚ್ಚದಲ್ಲಿ ಒಂದು ಯೋಜನೆಯೂ, ಕಂಪಲಿಗಾಗಿ ೨,೭೭,೩೯೦ ರೂಪಾಯಿಗಳ ವೆಚ್ಚದಲ್ಲಿ ಒಂದು ಯೋಜನೆಯೂ ಮಂಜೂರಾಗಿವೆ. ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ "ಪಂಪು"ಗಳನ್ನು ಹಾಕಿಸುವುದಕ್ಕಾಗಿ ೧೯೫೩-೫೪ರಲ್ಲಿ ೯,೦೯,೪೨೩ ರೂಪಾಯಿಗಳ

ವೆಚ್ಚವನ್ನು ಸರ್ಕಾರದವರು ವಹಿಸಿದರು. ೧೯೫೪ನೆಯ ಇಸವಿ ಜುಲೈ ೧ನೆಯ ತಾರೀಖಿನಿಂದ ೧೯೫೪ನೆಯ ಇಸವಿ ನವೆಂಬರು ೩೦ನೆಯ ತಾರೀಖಿನವರೆಗೆ ೪,೮೬,೨೬೫ ರೂಪಾಯಿಗಳು ಮಂಜೂರಾಗಿವೆ. ಇದುವರೆಗೆ ಒಟ್ಟು ೫,೭೮,೨೮೩ ರೂಪಾಯಿಗಳ ವೆಚ್ಚವಾಗಿವೆ. ಈ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯು ಸಾಗಲು ತಂತಿಮಾರ್ಗವನ್ನೇರ್ಪಡಿಸುವುದೇ ಮುಂತಾದ ಕೆಲಸಗಳಿಗಾಗಿ ಸರ್ಕಾರದವರು ೧,೭೬,೦೦೦ ರೂಪಾಯಿಗಳ ವೆಚ್ಚವನ್ನು ವಹಿಸಬೇಕಾಗುತ್ತದೆ. ತುಂಗಭದ್ರಾ ಅಣೆಕಟ್ಟೆಯಿಂದ ಮೈಸೂರು ಸಂಸ್ಥಾನದ ಕಡೆಗಿರುವ ಜಮೀನುಗಳಲ್ಲಿ ಸುಮಾರು ೯೨ ಸಾವಿರ ಎಕರೆಗಳನ್ನು ನೀರಾವರಿಗೆ ತರುವ ಕಾರ್ಯಕಲಾಪಗಳು ಮುಂದುವರಿಯುತ್ತಿವೆ. ವ್ಯವಸಾಯಗಾರರಿಗೆ ದೀರ್ಘಾವಧಿ ಸಾಲಗಳೂ, ಅಲ್ಪಾವಧಿ ಸಾಲಗಳೂ ದೊರೆಯುವ ಸೌಕರ್ಯವನ್ನು ಕಲ್ಪಿಸಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕವಾಗಿ, ಕೆಲಕೆಲವು ಪ್ರದೇಶಗಳ ಜನರಿಗೆ ಯಾವ ಯಾವ ಸೌಕರ್ಯಗಳು ಅಗತ್ಯವೆಂಬ ಸರ್ವೇ ಪರಿಶೀಲನೆಯು ನಡೆಯುವುದಕ್ಕೆ ಕಂಪಲಿ ಮತ್ತು ಎಮ್ಮಿಗನೂರು ಗ್ರಾಮಗಳಲ್ಲಿ ವ್ಯವಸ್ಥೆ ನಡೆಯಬೇಕೆಂದು ಗೊತ್ತಾಗಿದೆ.

ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಗಿರಣಿ ಕಾರ್ಖಾನೆಯವರು ಬಳ್ಳಾರಿಯಲ್ಲಿ ಒಂದು ನೇಯ್ಗೆ ಕಾರ್ಖಾನೆಯನ್ನು ಏರ್ಪಡಿಸುವುದಕ್ಕೂ ಕಂಪಲಿಯಲ್ಲಿ ಸಹಕಾರ ಕ್ರಮದಲ್ಲಿ ಒಂದು ಸಕ್ಕರೆ ಕಾರ್ಖಾನೆಯು ಸ್ಥಾಪಿತವಾಗುವುದಕ್ಕೂ ಅವಕಾಶ ಕಲ್ಪಿಸುವಂತೆ ಭಾರತ ಸರ್ಕಾರದ ಲೈಸೆನ್ಸಿಂಗ್ ಕಮಿಟಿಯವರಿಗೆ ಸಲಹೆಮಾಡಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಫೆರ್ರೋ ಮ್ಯಾಂಗನೀಸ್ ಕೈಗಾರಿಕೆಯನ್ನು ಏರ್ಪಡಿಸುವುದು ಸಾಧ್ಯವೇ ಎಂಬುದರ ಪರಿಶೀಲನೆಯು ನಡೆಯುತ್ತಿದೆ. ಕೈಮಗ್ಗದ ನೇಯ್ಗೆಯವರಿಗೂ, ಖಾದಿ ಮಾರಾಟಕ್ಕೂ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಪ್ರಯತ್ನಗಳನ್ನು ಕೈಕೊಳ್ಳಲಾಗಿದೆ. ಡಾಕ್ಟರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಗ್ರಾಮ ಕೈಗಾರಿಕೆ ಯೋಜನೆಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಇದೇ ೧೯೫೪ನೆಯ ಇಸವಿ ಏಪ್ರಿಲ್ ೧ನೆಯ ತಾರೀಖಿನಿಂದ ಆಚರಣೆಗೆ ತರಲಾಗಿದೆ. ಈ ಸಂಬಂಧವಾಗಿ ಗ್ರಾಮ ಸಮುದಾಯ ಸಮಿತಿಗಳನ್ನು ಏರ್ಪಡಿಸಲಾಗಿದೆ. ಅಲ್ಲದೆ, ಗ್ರಾಮ ಕೈಗಾರಿಕೆ ಸಹಕಾರ ಸಂಘಗಳನ್ನು ಏರ್ಪಡಿಸುವ ಕೆಲಸವು ಮುಂದುವರಿಯುತ್ತಿದೆ. ಕಸಬುಗಳನ್ನು ನಡೆಯಿಸುವವರಲ್ಲಿ ಹಣದ ಅನುಕೂಲವಿಲ್ಲದ ಬಡವರಿಗೆ ಸಂಘಗಳ ಸಲಹೆಯ ಮೇಲೆ ಬಡ್ಡಿಯಿಲ್ಲದೆ ಸಾಲಗಳನ್ನು ಕೊಡುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನೊದಗಿಸಲು ಸರ್ಕಾರದವರು ಈಚೆಗೆ ಸಮ್ಮತಿಸಿದ್ದಾರೆ. ಈ ಮೊಬಲಗಿನಲ್ಲಿ ಸುಮಾರು ೧೦,೦೦೦ ರೂಪಾಯಿಗಳು ಬಳ್ಳಾರಿ ಜಿಲ್ಲೆಗೆ ದೊರೆಯಬಹುದು. ಬಳ್ಳಾರಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಲ್ಲಿ ೧.೧೦.೧೯೫೩ರಿಂದ ೩೦.೯.೧೯೫೪ರವರೆಗೆ ೧,೭೨,೭೩೩ ರೂಪಾಯಿಗಳ ವೆಚ್ಚದಲ್ಲಿ ೧೦೫ ಬಾವಿಗಳ ದುರಸ್ತಿ ಕೆಲಸವನ್ನು ಮಾಡಲಾಯಿತು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ೧೮ ಬಾವಿಗಳನ್ನು ತೋಡಿಸಿಕೊಡುವುದಕ್ಕಾಗಿ ೧,೨೭,೬೦೦

ರೂಪಾಯಿಗಳ ಮಂಜೂರಾಗಿ ಬಾವಿಗಳ ಕೆಲಸವು ನಡೆಯುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಗಣಿ ಕೈಗಾರಿಕೆಯನ್ನು ಉತ್ತಮಪಡಿಸುವ ವಿಚಾರದಲ್ಲಿ ಸಂಬಂಧಪಟ್ಟ ಇಲಾಖೆಯವರು ಪರಿಶೀಲನೆಗಳನ್ನು ನಡೆಯಿಸುತ್ತಿದ್ದಾರೆ.

ಕಮಲಾಪುರ-ಹಂಪೆ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಕಾಮಗಾರಿ ಮಾಡಿಸುವುದಕ್ಕಾಗಿ ೧,೬೯,೦೦೦ ರೂಪಾಯಿಗಳನ್ನು ಮಂಜೂರಾಗಿ ಕೆಲಸ ನಡೆಯುತ್ತಿದೆ. ಹೊಸಪೇಟೆಯಿಂದ ತಳವಾರಘಟ್ಟದವರೆಗೆ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಕಾಮಗಾರಿ ಮಾಡಿಸುವುದಕ್ಕಾಗಿ ೪,೫೪,೦೦೦ ರೂಪಾಯಿಗಳ ಅಂದಾಜು ಪರಿಶೀಲನೆಯಲ್ಲಿದೆ. ಈ ಜಿಲ್ಲೆಯಲ್ಲಿ ರಸ್ತೆಗಳ ದುರಸ್ತಿ, ಜಲ್ಲಿ ಮತ್ತು ಸಿಮೆಂಟ್ ಕಾಮಗಾರಿಗಳಿಗಾಗಿ ಈಗಾಗಲೇ ಮಂಜೂರಾಗಿರುವ ಮೊಬಲಗು ೩,೩೪,೩೦೦ ರೂಪಾಯಿಗಳು. ಚಿಕ್ಕ ಹಗರೀ ನದಿಗೆ ಮಾಲ್ಕಿ ಬಳಿಯಲ್ಲಿ ಆಣೆಯನ್ನು ಕಟ್ಟುವುದಕ್ಕಾಗಿ ೫೦ ಲಕ್ಷ ರೂಪಾಯಿಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಂಜೂರು ಮಾಡಿ ಸೇರಿಸಬೇಕೆಂದು ಭಾರತ ಸರ್ಕಾರದವರಿಗೆ ಭಿನ್ನೈಸಲಾಗಿದೆ. ಈ ಜಿಲ್ಲೆಯಲ್ಲಿ ಕೈಕೊಳ್ಳಬೇಕಾದ ಸಣ್ಣಪುಟ್ಟ ನೀರಾವರಿ ಕಾಮಗಾರಿಗಳು, ಗ್ರಾಮ ರಸ್ತೆಗಳು, ಸೇತುವೆಗಳು ಮುಂತಾದವುಗಳಿಗೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ೮,೫೫,೦೦೦ ರೂಪಾಯಿಗಳು ಮಂಜೂರಾಗಿವೆ.

ಬಳ್ಳಾರಿ ನೀರು ಸರಬರಾಯಿ ವ್ಯವಸ್ಥೆಯನ್ನು ಉತ್ತಮ ಪಡಿಸುವುದಕ್ಕಾಗಿ ಜರೂರು ಕಾಮಗಾರಿಗಳಿಗಾಗಿ ೧,೪೫,೦೦೦ ರೂಪಾಯಿಗಳು ಮಂಜೂರಾಗಿವೆ. ಬಳ್ಳಾರಿಯ ನೀರು ಸರಬರಾಜು ವ್ಯವಸ್ಥೆ ಸಂಬಂಧದಲ್ಲಿ ನಡೆಯಬೇಕಾದ ದೀರ್ಘಾವಧಿಯ ಮೇಲ್ಪಾಟುಗಳಿಗಾಗಿ ೧೫ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಬೇಕೆಂದು ಭಾರತ ಸರ್ಕಾರದವರಿಗೆ ಭಿನ್ನೈಸಿಕೊಂಡಿದ್ದೇವೆ. ಹೊಸಪೇಟೆಯ ನೀರು ಸರಬರಾಯಿ ಏರ್ಪಾಡನ್ನು ಉತ್ತಮ ಗೊಳಿಸುವುದಕ್ಕಾಗಿ ೪,೧೫,೦೦೦ ರೂಪಾಯಿಗಳನ್ನು ಸಾಲವಾಗಿಕೊಟ್ಟು ಸಹಾಯ ಮಾಡಬೇಕೆಂದು ಭಾರತ ಸರ್ಕಾರದವರಿಗೆ ಭಿನ್ನೈಸಲಾಗಿದೆ. ತ್ವರ್ಯವಾಗಿ ನಡೆಯಬೇಕಾದ ಕಾಮಗಾರಿಗಳ ಪಟ್ಟಿಗೆ ಅದನ್ನು ಸೇರಿಸಲಾಗಿದೆ.

ಜಪಾನ್ ಮಾದರಿಯಲ್ಲಿ ಸಾಗುವಳಿಯು ಒಟ್ಟು ೧,೨೫೦ ಎಕರೆಗಳಲ್ಲಿ ನಡೆಯಬೇಕೆಂದು ಗೊತ್ತಾಗಿದ್ದಿತು. ಆ ಪೈಕಿ ಆಗಲೆ ೧,೧೩೭ ಎಕರೆಗಳಲ್ಲಿ ಆ ಸಾಗುವಳಿಯು ನಡೆಯುತ್ತಿದೆ. ಈ ಜಿಲ್ಲೆಗೆ ೨,೫೦೦ ಟನ್ನುಗಳಿಗಿಂತ ಹೆಚ್ಚಾಗಿ ಫರ್ಟಿಲೈಜರ್ ಗೊಬ್ಬರಗಳನ್ನು ಒದಗಿಸಲಾಗಿದೆ. ಅದರ ಬೆಲೆ ೮೦,೧೧,೦೦೦ ರೂಪಾಯಿಗಳು. ರೈತರಿಗೆ ಇಪ್ಪತ್ತೆಂಟು ಟನ್ನುಗಳ ಬೀಜದ ಭತ್ತವನ್ನು ಒದಗಿಸಲಾಗಿದೆ. ಖುಷ್ಕಿ ವ್ಯವಸಾಯಗಾರರಿಗೆ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ೧,೫೦೦ ಎಕರೆಗಳ ಪ್ರದೇಶದಲ್ಲಿ ಒಟ್ಟು ೭೭,೮೧೩ ರೂಪಾಯಿಗಳ ವೆಚ್ಚದಲ್ಲಿ ನಾನಾ ಕಾಮಗಾರಿಗಳ್ನು ನಡೆಯಿಸಲಾಗಿದೆ. ಹತ್ತಿ ಬೆಳೆಯ ಸಂಬಂಧವಾಗಿ ಹಲವು ಸೌಕರ್ಯಗಳನ್ನು ಕಲ್ಪಿಸಿ ಸಹಾಯ ಮಾಡಿದ್ದೇವೆ. ಅಭಿವೃದ್ಧಿ ಯೋಜನೆ ವ್ಯವಸ್ಥೆಯ ಮೇರೆಗೆ

ನಾನಾ ಅಭಿವೃದ್ಧಿ ಕಾರ್ಯಗಳಿಗಾಗಿ, ೧.೧೦.೧೯೫೨ರಿಂದ ೩೧.೩.೧೯೫೪ರವರೆಗೆ ಒಟ್ಟು ೩೦,೯೪,೫೦೦ ರೂಪಾಯಿಗಳು ವೆಚ್ಚವಾಗಿವೆ ೧.೪.೧೯೫೪ರಿಂದ ೩೧.೩.೧೯೫೫ರವರೆಗೆ ತುಂಗಭದ್ರಾ ಯೋಜನೆಯ ಬಾಬತ್ತು ವೆಚ್ಚವೂ ಸೇರಿ, ೯೫,೭೪,೦೦೦ ರೂಪಾಯಿಗಳನ್ನು ವೆಚ್ಚಕ್ಕೆ ಒದಗಿಸಲಾಗಿದೆ. ಈ ಮೊಬಲಗುಗಳು, ನಾನಾ ಅಭಿವೃದ್ಧಿ ಇಲಾಖೆಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ಮತ್ತು ನಡೆಯಬೇಕಾದ ಮಾಮೂಲು ಅಭಿವೃದ್ಧಿ ಕಾರ್ಯಗಳ ವೆಚ್ಚಗಳ ಜೊತೆಗೆ ಒದಗಿಸಿರುವ ಹೆಚ್ಚಿಗೆ ವೆಚ್ಚದ ಮೊಬಲಗುಗಳು.

ಸರ್ಕಾರಿ ಅಧಿಕಾರಿಗಳ ವಿಚಾರ. ಮೈಸೂರು ಸರ್ಕಾರದ ಅಧೀನದಲ್ಲಿ ಕೆಲಸಮಾಡುವಂತೆ ನೇಮಕವಾದ ಬಳ್ಳಾರಿ ಜಿಲ್ಲೆಯ ತಹಶೀಲ್ದಾರರುಗಳನ್ನು ಅಮಲ್ದಾರಿ ದರ್ಜೆಗೆ ಸೇರಿಸಿ ಅನುಕೂಲಪಡಿಸಿ ಕೊಡಲಾಗಿದೆ. ಡೆಪ್ಯೂಟಿ ತಹಶೀಲ್ದಾರರ ಹುದ್ದೆಗೆ ಸರಿಹೊಂದುವ ಹುದ್ದೆಗಳು ಮೈಸೂರು ಸಂಸ್ಥಾನದಲ್ಲಿಲ್ಲ. ಆದಕಾರಣ, ಬಳ್ಳಾರಿ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಡೆಪ್ಯೂಟಿ ತಹಶೀಲ್ದಾರ್ ಹುದ್ದೆಗಳನ್ನು ಉಳಿಸಿ ನಡೆಸಿಕೊಂಡು ಬರುವುದಲ್ಲದೆ, ೧.೧೦.೧೯೫೩ರಲ್ಲಿ ಆ ಹುದ್ದೆಗಳಿಗೆ ಬಡ್ತಿ ಹೊಂದಲು ಅರ್ಹರಾದವರ ಪಟ್ಟಿಯಲ್ಲಿ ಸೇರಿರತಕ್ಕವರನ್ನು ಸ್ಥಾನಗಳು ಖಾಲಿ ಬಿದ್ದಂತೆ ಆ ಹುದ್ದೆಗಳಿಗೆ ನೇಮಕ ಮಾಡಲಾಗುವುದು. ಬಳ್ಳಾರಿ ಜಿಲ್ಲೆಯ ಗುಮಾಸ್ತರುಗಳ ವಿಚಾರದಲ್ಲೂ ಸರ್ಕಾರದವರು ಅನುಕೂಲವಾದ ವ್ಯವಸ್ಥೆಯನ್ನೇರ್ಪಡಿಸಿದ್ದಾರೆ. ತುಟ್ಟಿಭತ್ಯ, ಮನೆ ಬಾಡಿಗೆ ಭತ್ಯ ಮುಂತಾದ ವಿಚಾರಗಳಲ್ಲೂ ಸೂಕ್ತವಾದ ವ್ಯವಸ್ಥೆ ನಡೆದಿದೆ. ಈ ವಿಚಾರದ ಸರ್ಕಾರಿ ಹುಕುಮಿನಲ್ಲಿ ವಿವರವಾಗಿ ನಮೂದಾಗಿವೆ.

ಸರ್ಕಾರದವರು ಸಂಪದಭಿವೃದ್ಧಿ ಯೋಜನೆಗಳನ್ನು ಕೈಕೊಂಡು ಪ್ರಜೆಗಳಿಗೆ ಸೌಕರ್ಯಗಳನ್ನು ಕಲ್ಪಿಸುವ ವಿಚಾರದಲ್ಲಿ ಎಷ್ಟು ಶ್ರದ್ಧೆ ವಹಿಸಿದ್ದಾರೆಂಬ ಸಂಗತಿಯು ಈ ವಿವರಗಳಿಂದ ವ್ಯಕ್ತವಾಗುತ್ತದೆ. ದೇಹ ಸುಖಕ್ಕಾಗಿ ಹೀಗೆ ಸೌಕರ್ಯಗಳನ್ನು ಒದಗಿಸುವಷ್ಟೇ ಸಾಲದು. ದೇಹಕ್ಕೆ ಅನ್ನವನ್ನೊದಗಿಸುವಂತೆಯೇ ಮನಸ್ಸಿಗೂ ಆಹಾರ ಬೇಕು. ಸರ್ಕಾರದವರು ಸಂಸ್ಕೃತಿ ಯೋಜನೆಯನ್ನು ಏರ್ಪಡಿಸಿರುವುದು ಅದನ್ನು ಒದಗಿಸುವುದಕ್ಕಾಗಿ, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪ್ರಾಚೀನ ಕಾವ್ಯಗಳೂ ಇತರ ಸಾಹಿತ್ಯ ಕೃತಿಗಳೂ, ಶಿವಶರಣರ ವಚನಗಳೂ, ಹರಿದಾಸರ ಕೃತಿಗಳೇ ಮುಂತಾದುವೂ ನಮ್ಮ ಸಂಸ್ಕೃತಿಯ ಭಂಡಾರದಂತಿವೆ. ಅವುಗಳನ್ನು ಜನರಿಗೆ ಪರಿಚಯ ಮಾಡಿಕೊಟ್ಟಷ್ಟೂ ನಮ್ಮ ದೇಶಬಾಂಧವರ ಸಂಸ್ಕೃತಿಯ ಮತ್ತು ನೀತಿಯ ಮಟ್ಟವು ಏರದಿರುವುದು ಸಾಧ್ಯವೇ ಇಲ್ಲ. ಉತ್ತಮವಾದ ಗ್ರಂಥಗಳ ಪ್ರಸಾರದಿಂದ ಜನಜೀವನವು ಹಸನಾಗುತ್ತದೆ. ನಮ್ಮ ದೇಶದ ಧಾರ್ಮಿಕ ಗ್ರಂಥಗಳ ಮತ್ತು ಸಾಹಿತ್ಯ ಕೃತಿಗಳ ಪ್ರಸಾರವು ಮಾತ್ರವೇ ಈ ಯೋಜನೆಯ ಉದ್ದೇಶವಲ್ಲ. ಇತರ ದೇಶದ ಧಾರ್ಮಿಕ ಗ್ರಂಥಗಳ ಮತ್ತು ಸಾಹಿತ್ಯ ಕೃತಿಗಳ ಪ್ರಸಾರವೂ ಅದರಲ್ಲಿ ಸೇರಿದೆ. ವಿಜ್ಞಾನ ಸಂಬಂಧವಾದ ವಿಚಾರಗಳನ್ನು ಕುರಿತ ಭಾಷಣಗಳನ್ನೇರ್ಪಡಿಸುವ ಕೆಲಸವೂ ಈ ಯೋಜನೆಯ ಅಂಗವಾಗಿ ಸೇರಿದೆ. ಬೋಧಪ್ರದವಾಗಿ ಪ್ರಾಚೀನ ಕೃತಿಗಳನ್ನು ಗಮಕಿಗಳಿಂದ

ಓದಿಸುವುದಕ್ಕೂ ಏರ್ಪಾಡು ಆಗಿದೆ. ಜನಪದ ಗೀತೆಗಳನ್ನೂ ಲಾವಣಿಗಳನ್ನೂ ಹಾಡಿಸುವ ಕೆಲಸವೂ ನಡೆಯುತ್ತದೆ. ಮುಂದೆ, ಸಂಗೀತ ವಿದ್ವಾಂಸರಿಂದ ಶಿವಶರಣರ ಮತ್ತು ಹರಿದಾಸರ ಕೃತಿಗಳ ಹಾಡುಗಾರಿಕೆಯನ್ನೂ, ಕೀರ್ತನ ವಿದ್ವಾಂಸರುಗಳಿಂದ ಕೀರ್ತನೆಗಳನ್ನೂ ಏರ್ಪಡಿಸಬೇಕೆಂಬ ವಿಚಾರವೂ ಪರ್ಯಾಲೋಚನೆಯಲ್ಲಿದೆ. ಈ ಕಾರ್ಯಕಲಾಪಗಳ ಜೊತೆಗೆ ಗ್ರಂಥ ಪ್ರಕಟನ ಕಾರ್ಯವೂ ನಡೆಯುವುದಾಗಿದೆ. ಇವುಗಳಿಂದ, ಜನ ಜೀವನದ ಮಟ್ಟವನ್ನೂ, ನೀತಿ ನಿಷ್ಠೆಯ ಮಟ್ಟವನ್ನೂ, ಹೆಚ್ಚಿಸಲು ಸಹಾಯವಾಗುತ್ತದೆ. ಹೀಗಾಗಬೇಕೆಂಬ ಘನವಾದ ಉದ್ದೇಶದಿಂದ ಸರ್ಕಾರದವರು ಈ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಕೈಕೊಂಡಿದ್ದಾರೆ. ಈ ದಿನ ಇಲ್ಲಿ ನಡೆದ ಕಾವ್ಯವಾಚನದಿಂದಲೂ, ಭಾಷಣದಿಂದಲೂ ನಮ್ಮ ಮನಸ್ಸಿನ ಮೇಲೆ ಆಗಿರುವ ಉತ್ತಮ ಪರಿಣಾಮವನ್ನು ಪರಿಗಣಿಸಿದರೆ, ಸಂಸ್ಕೃತಿ ಪ್ರಸಾರ ಯೋಜನೆಗೆ ವಿರುದ್ಧವಾಗಿ ಮಾತನಾಡಲು ಯಾರಿಗೂ ಮನಸ್ಸು ಬರಲಾರದೆಂದು ನಾನು ನಂಬಿದ್ದೇನೆ. ಒಂದು ದೃಷ್ಟಿಯಿಂದ ನೋಡಿದರೆ, ಸಂಸ್ಕೃತಿ ಪ್ರಸಾರವೆಂದರೆ ಸಾಹಿತ್ಯ ಮತ್ತು ಕಲೆಗಳ ಪ್ರಸಾರ ವಿಜ್ಞಾನ ವಿಚಾರಗಳ ಮತ್ತು ಧಾರ್ಮಿಕ ವಿಚಾರಗಳ ಪ್ರಸಾರ. ಇವು ಬೇಡವೆಂದು ಯಾರೂ ಭಾವಿಸಲಾರರು ಇವು ಬೇಡವೆಂದು ಯಾರೂ ಭಾವಿಸಲೂ ಬಾರದು, ವಿದೇಶಗಳಲ್ಲಿ ಇವು ಬಹಳ ಭಾರಿಪ್ರಮಾಣದಲ್ಲಿ ನಡೆಯುತ್ತಿವೆ. ನಾನು ಅಮೇರಿಕಾ ಮುಂತಾದ ದೇಶಗಳಲ್ಲಿದ್ದ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸಾಹಿತ್ಯದ ಮತ್ತು ಕಲೆಗಳ ಅಭಿವೃದ್ಧಿಗೆ ಅಲ್ಲಿಯವರು ವೆಚ್ಚಮಾಡುವಷ್ಟು ಹಣವನ್ನು ವೆಚ್ಚಮಾಡುವುದು ಕನಸಿನಲ್ಲೂ ನಮಗೆ ಸಾಧ್ಯವಿಲ್ಲ. ನಮ್ಮಿಂದ ಸಾಗುವಷ್ಟನ್ನುಮಾಡುವುದು ಮಾತ್ರವೇ ನಮಗೆ ಸಾಧ್ಯ. ಜನರ ನೀತೆ ನಿಷ್ಠೆಯನ್ನು ಹೆಚ್ಚಿಸುವ ಪ್ರಯತ್ನಗಳು ಕೂಡ, ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಬಹಳವಾಗಿ ನಡೆಯುತ್ತಿವೆ. ಆದಕಾರಣ, ಮೈಸೂರು ಸರ್ಕಾರದವರು ಸಕಾಲದಲ್ಲೇ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಕೈಕೊಂಡಿದ್ದಾರೆ.

ಈ ಯೋಜನೆಯ ಕಾರ್ಯಕಲಾಪಗಳು ವಿಶೇಷ ರೀತಿಯಲ್ಲಿ ವೃದ್ಧಿಹೊಂದಿ ಅದನ್ನು ಕೈಕೊಂಡುದು ಸಾರ್ಥಕವಾಗುವಂತೆ ಭಗವಂತನು ಅನುಗ್ರಹಿಸಿ ಕೃಪೆಮಾಡಲೆಂದು ನಾನು ಹೃತ್ಪೂರ್ವಕ ವಾಗಿ ಹಾರೈಸುತ್ತೇನೆ.

ಜೈ ಹಿಂದ್

■ ■

ಪ್ರಕಟಣೆ : ಮೈಸೂರು ಸರಕಾರದ ಮುದ್ರಣಾಲಯ, ಬೆಂಗಳೂರು, ೧೯೫೪

# AGRICULTURE IN BELLARY DISTRICT

By

**Dr.R.Nagan Gouda Msc.ph.d**

The Seven taluks of Bellary now transferred to Mysore State are populated by Kannadigas Who are sturdy agriculturists. They are noted for their hard work, sincerity and simple life. These seven taluks more or less form the western division of the district having a large area of mixed and red soils except in Bellary and Hadagali taluks, where black soils predominate. Sandur and kampili hill ranges are the two predominant hill ranges in the area and in them granite,gneiss, hornblend, ferruginous and silions and schists prevail. In these rocks abundant mineral deposits are available. There are large deposits of iron in the Sandur hills.

The principal rivers are the Tungabhadra, Hagari and Pennar, all taking their source in Mysore State. In the forests of Sandur teak, Sandal and Yepi or Iron wood(handwic Binata) grow. Though dry and having facilities for cattle rearing, there are no strong breeds of cattle. The area has its characteristic breed of buffaloes have a white patch between the horns and at the switch of the tail. The sheep are either black or black and white wool bearing type. These sheep are hardly and are akin to the Mysore sheep. The area is noted for its cotton tape weaving, cotton blankets, hand printing of textiles, brassware pot-stone articles, wooden toys, wood carving and other industries. Exquisitely carved wooden doorways are made by the Hindu and Muhammadan artisans in

and around Bellary. The district produces the "western" cotton, a coarse cotton largely in demand for its strength. Other products are vegetable oils like groundnut, castor and safflower oil.

Being largely rainfed, dry crops predominate. Cholam and Korra are the chief cereal crops. Among pulses horsegram is largely grown. Among commercial crops, cotton, sugarcane and groundnut are most important.

The agriculture of the region divides itself into wet and dry. The dry cultivation further varies with the nature of the soil whether black or mixed or red. The wet lands form a small proporation of the total cultivated area, being mainly irrigated from channels from the Tungabhadra and other rivers and a few tanks. The principal wet crops are paddy and sugarcane. Sugarcne is grown in rotation with paddy. It was introduced long while ago and has been successfully grown by the farmers resulting in the establishment of a Sugar Factory at Hospet. Bellary jaggery is noted for its sweetness and keeping quality. On the dry lands Cholam, Korra, Horsegram, Cotton, Caster, Niger and Safflower are grown.

The area comprising the seven taluks of the Bellary District now being transferred to Mysore State is roughly 24.5 lakhs of acres which nearly 15 lakhs of acres are cultivated. The chief grain crop is cholam which occupies nearly 6 lakhs of acres, and korra 1.6 lakhs of acres. Cotton and groundnut, the chief money crops, occupy nearly 2.5 lakhs of acres each.

The area under paddy is comparatively small but wih the progress of cultivation under irrigation in Tungbhadra area. large areas under paddy and long staple cottons with staple of nearly one inch are likely to be cultivated is H.1. introduced by the agricultural Department. But recently the long stapled variety 'Lakshmi' which is derived from Cambodia is getting popular.

Sugarcane is also another important money crop in the District and a factory with the capacity of 800 tons is working in Hospet. It is likely more factories under co-operative efforts are likely to be started in the remaining area under the Tungabhadra scheme.

The area now irrigated under canals, tanks and beds, is only 16,000 acres. With the availability of water under the Tungabhadra Dam the scope of irrigation will be considerable and this will promote a greater expansion of cultivation of garden crops and in increasing the general prosperity of the district. Experiments conducted at the Siruguppa Agricultural Station have demonstrated the possibility of cultivatinga number of crops under limited supply of irrigation while the fear formerly entertained of alkalinity due to rise of salts has been disproved. While in the Hingari season, it is possible to cultivate. Such crops as Hyderbad American cotton, Wheat. Chillies. maize and onions, it is possible to have a Hingari and Mungari rotation of cereals and pulses which give moderate profits per acre.

A cultivated area of about 15 lakhs of acres is being comprised in the 7 lakhs now under transfer to Mysore and with the early release of Tungabhadra waters, this will form a rich legacy for the future prosperity of the region both in agriculture and industries.

■ ■

ಪ್ರಕಟಣೆ : ವೆಲ್‌ಕಂ ಬಳ್ಳಾರಿ ನೆನಪಿನ ಸಂಚಿಕೆ, ೧೯೫೩.

## ೫. ಸಹಾಯಕ ಗ್ರಂಥಗಳು


೧. ವೆಲ್‌ಕಂ ಬಳ್ಳಾರಿ (Wellcome Bellary Souvenir) ಸ್ಮರಣ ಸಂಚಿಕೆ, ಬೆಂಗಳೂರು, ೧೯೫೩

೨. ನನಸಾಗದ ಕನಸು (ಆತ್ಮಚರಿತ್ರೆ), ಕಡಿದಾಳ ಮಂಜಪ್ಪ, ೧೭೦, ಲ್ಯಾಂಗ ಫರ್ಡ ರಸ್ತೆ ಬೆಂಗಳೂರು, ೧೯೯೦

೩. ಮರಿಸ್ವಾಮಯ್ಯ ಮಠದ ಪಾಟೀಲ, ದೃವನಾರಾಯಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೮

೪. ನಾನೊಬ್ಬ ಸಾರ್ವಜನಿಕ(ಆತ್ಮಚರಿತ್ರೆ), ಕೆ.ಚನ್ನಬಸವನಗೌಡ, ಕನ್ನಡ ಸಾಹಿತ್ಯ ಪರಿಷತ್ತು ಬಳ್ಳಾರಿ ಜಿಲ್ಲಾ ಸಮಿತಿ, ರಾಮನಗರ ಹಗರಿಬೊಮ್ಮನಹಳ್ಳಿ, ೧೯೯೪

೫. ಹಣ್ಣೆಲೆಯ ಹಸಿರು ನೆನಪುಗಳು(ಆತ್ಮಚರಿತ್ರೆ), ಬೆಲ್ಲದ ಚೆನ್ನಪ್ಪ, ಕಲ್ಮಟೇಶ್ವರ ಪ್ರಕಾಶನ ಚಿತ್ತವಾಡ್ಗಿ ಹೊಸಪೇಟೆ,

೬. ಕರ್ನಾಟಕ ಏಕೀಕರಣ ಇತಿಹಾಸ, ಎಚ್.ಎಸ್.ಗೋಪಾಲರಾವ್, ನವಕರ್ನಾಟಕ ಪ್ರಕಾಶನ ಬೆಂಗಳೂರು, ೧೯೯೬

೭. ಮೂರನೆಯ ಕುರುಬರ ಸಮ್ಮೇಳನದ ಭಾಷಣ ಪ್ರತಿ ೧೯೩೭, ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್.ಬಿ.ಬಿಜ್ಜೂರ ಹುರುಳಿಕುಪ್ಪೆ, ಸವಣೂರ ತಾಲೂಕು ಹಾವೇರಿ ಜಿಲ್ಲೆ ಅವರಿಂದ ಸಂಗ್ರಹ

೮. ಕಬ್ಬು ಬೆಳೆಗಾರರ ಹೋರಾಟ, ನಿರೂಪಣೆ: ಬೆಲ್ಲದ ಚೆನ್ನಪ್ಪ, ಬರೆದವರು: ಟಿ.ಆರ್. ಚಂದ್ರಶೇಖರ, ಹೊಸಪೇಟೆ ರೈತ ಸಂಘ, ಹೊಸಪೇಟೆ, ೧೯೮೭

೯. ಸಹನೀತಿ(ಬಳ್ಳಾರಿ ಜಿಲ್ಲಾ ೨ನೆಯ ಸಹಕಾರ ಸಮ್ಮೇಳನದ ಸ್ಮರಣ ಸಂಚಿಕೆ), ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್, ಹೊಸಪೇಟೆ ೧೯೭೫

೧೦ ಟೇಕೂರ್ ಸುಬ್ರಹ್ಮಣ್ಯಂ ಒಂದು ಅನ್ವೇಷಣೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೧೧. ಮೇಷ ವಿಜಯ, ಎಂ.ಕರಿಯಪ್ಪ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೧೨. ಆರ್.ನಾಗನಗೌಡ ಅವರು ಸಂಸ್ಕೃತಿ ಪ್ರಸಾರ ದಿನಾಚರಣೆಯಂದು ಮಾಡಿದ ಭಾಷಣ ಮುದ್ರಕರು, ಮೈಸೂರು ಸರಕಾರದ ಮುದ್ರಣಾಲಯ, ಬೆಂಗಳೂರು, ೧೯೫೪

೧೩. Tagore Visits the United Stetes, The United States Information Service New Delhi

೧೪. TheMysore Lesislative Assembly Debates, Official Reports, 1956,

೧೫. Mysore Backward Classes Committee Report, 1961

೧೬. ಕನ್ನಡನುಡಿ(ನಿಯತಕಾಲಿಕೆ),ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೫೩

ಮಾಹಿತಿ ನೀಡಿದವರು

೧. ಶ್ರೀ ಸರ್ವೇಶ್ವರ, ಹೊಸಪೇಟೆ

೨. ಶ್ರೀ ಚಾರುಚಂದ್ರ, ಹೊಸಪೇಟೆ

೩. ಶ್ರೀ ವಸಂತಕುಮಾರ ಬೆಂಗಳೂರು

೪. ಶ್ರೀಮತಿ ಮೀನಾಕ್ಷಮ್ಮ ಬಸವರಾಜು, ಬೆಂಗಳೂರು

೫. ಶ್ರೀ ಜಿ.ನಾಗಲಿಂಗಪ್ಪ, ಹೊಸಪೇಟೆ

೬. ಶ್ರೀ ಕಲ್ಲೇ ಶಿವೋತ್ತಮರಾವ್, ಬೆಂಗಳೂರು

೭. ಶ್ರೀ ಜಂಬುನಾಥ, ಹೊಸಪೇಟೆ

೮. ಶ್ರೀ ಜಂಬಣ್ಣ, ಹೊಸಪೇಟೆ

೯. ಶ್ರೀ ವೈ.ಎಚ್.ಹಳ್ಳಿಕೇರಿ, ಹೊಸಪೇಟೆ

೧೦. ಶ್ರೀ ಎಚ್.ಎಸ್.ಪಾಟೀಲ, ಕೊಪ್ಪಳ

೧೧. ಶ್ರೀ ಎನ್.ಬಿ.ಬಿಜ್ಜೂರ, ಹುರುಳಿಕುಪ್ಪೆ, ಹಾವೇರಿ ಜಿಲ್ಲೆ

೧೨. ಶ್ರೀ ಸಿದ್ಧರಾಮಯ್ಯ, ಹೊಸಪೇಟೆ




ಡಾ. ಆರ್. ನಾಗನಗೌಡ



ನಾಗನಗೌಡರ ಪತ್ನಿ ಶ್ರೀಮತಿ ಸಾವಿತ್ರಿಬಾಯಿ



ನಾಗನಗೌಡ ಕುಟುಂಬ ವರ್ಗ



ಕುಟುಂಬದ ಸದಸ್ಯರೊಂದಿಗೆ ತುಂಗಭದ್ರಾ ಜಲಾಶಯದ ಆವರಣದಲ್ಲಿ ಗೌಡರು



ನಾಗನಗೌಡರು ವಾಸಿಸುತ್ತಿದ್ದ ಹೊಸಪೇಟೆಯ ಮನೆ



ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದ ಅವರೊಂದಿಗೆ ಗೌಡರು



ರವೀಂದ್ರನಾಥ ಟ್ಯಾಗೋರ
ಅಮೇರಿಕೆಗೆ ಭೇಟಿ ನೀಡಿದಾಗ
ಅವರೊಂದಿಗೆ ಗೌಡರು
( ಎಡದಿಂದ ಐದನೆಯವರು)



ಜವಾಹರಲಾಲ್ ನೆಹರು ಅವರೊಂದಿಗೆ
ಗೌಡರು



ನಟಿ ದೇವಿಕಾರಣಿ ಹಂಪಿಗೆ ಭೇಟಿ ನೀಡಿದ
ಸಂದರ್ಭದಲ್ಲಿ ಗೌಡರು



ಯೋಗಾಭ್ಯಾಸದಲ್ಲಿ
ಗೌಡರು



ಸೂಟುಧಾರಿಯಲ್ಲಿ ಗೌಡರು